ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ




ಕನ್ನಡ ವಾರಪತ್ರಿಕೆ

Blog janashakthi.wordpress.com e-mail : js_weekly@yahoo.com

ಸಂಪುಟ 8 ಸಂಚಿಕೆ 36
ಸೆಪ್ಟಂಬರ್ 7, 2014

ಪುಟ 16 ರೂ. 10/-



ಸಾಂಸ್ಕೃತಿಕ ಎಚ್ಚರ ಕಾಯ್ದುಕೊಂಡ ಯು.ಆರ್. ಅನಂತಮೂರ್ತಿ



ಮೋದಿ ಪ್ರಶ್ನಾತೀತರಲ್ಲ ; ಅವರನ್ನು ಟೀಕಿಸುವುದು ಅಪರಾಧವಲ್ಲ



ಕಂಬಾಲಪಲ್ಲಿ : ದಲಿತರಿಗೆ ದೊರೆಯದ ನ್ಯಾಯ



ಬಿಜೆಪಿಗೆ ನಿರಾಸೆ ತಂದ ಉಪಚುನಾವಣೆ

ಮಹಿಳೆಯರ ರಕ್ಷಣೆಗೆ ಸಿಪಿಐ(ಎಂ) ಆಗ್ರಹ

ವರ್ಣ ವ್ಯವಸ್ಥೆಯ ಜೊತೆಗೇ ಆರಂಭವಾದ ಮಹಿಳೆಯರನ್ನು ಕೀಳುಗಳೆವ ಯತ್ನ

ರಾಜ ಪ್ರಭುತ್ವದ ಜೊತೆ ಜೊತೆಗೇ ವರ್ಣ ವ್ಯವಸ್ಥೆ ಮತ್ತು ಅದರಲ್ಲಿ ಅಂತರ್ಗತವಾದ ಮೇಲು ಕೀಳು, ದಾಸತ್ವ ಗಟ್ಟಿಗೊಂಡವು. ಅದೇ ಸಮಯದಲ್ಲಿ ಮಹಿಳೆಯರನ್ನೂ ಅಧೀನ ಸ್ಥಾನಕ್ಕೆ, ನಿರಂತರ ದುಡಿಮೆಗೆ ತಳ್ಳಲಾಯಿತು ಎಂಬುದು ಋಗ್ವೇದಾನಂತರದ ವೈದಿಕ ಸಾಹಿತ್ಯದಲ್ಲಿ ಸ್ಪಷ್ಟವಾಗುತ್ತದೆ.

ಶಥಪಥ ಬ್ರಾಹ್ಮಣವು 13–2.6.7 ರಲ್ಲಿ ಬಹು ಪತ್ನಿಯರು ಒಬ್ಬನ ಅಂತಸ್ತಿನ (ಸಂಪತ್ತಿನ) ರೂಪ ಎಂದು ಹೇಳುತ್ತದೆ. ರಾಜತ್ವ, ರಾಜಾಸ್ಥಾನದ ರತ್ನಗಳು ಇಂತಹವರ ಅಸ್ತಿತ್ವ ಹೆಣ್ಣನ್ನು ಗಂಡಿನ ಆಸ್ತಿಯಾಗಿ ಪರಿಗಣಿಸುವುವ ಮನೋಭಾವವನ್ನೂ ತನ್ನೊಂದಿಗೇ ಬೆಳೆಸಿದೆ ಎಂಬುದು ಎದ್ದು ಕಾಣುತ್ತದೆ. ಇದು ಬುಡಕಟ್ಟು ಜೀವನದಲ್ಲಿ ಗಂಡು ಮತ್ತು ಹೆಣ್ಣಿನ ನಡುವೆ ಇದ್ದ ಸಮಾನತೆಯ ಸ್ಥಾನ ಹೋಗಿ ಹೆಣ್ಣು ಗಂಡಿಗೆ ಅಧೀನವಾಗಿರುವುದು ಇದ–ರಿಂದ ಸೂಚಿತವಾಗುತ್ತದೆ. ಈ ರೀತಿ ಬಹು ಪತ್ನಿತ್ವದೊಂದಿಗೇ ಮತ್ತೊಂದು ವ್ಯವಸ್ಥೆಯೂ ಮಹಿಳೆಯರನ್ನು ಕೀಳು ಸ್ಥಿತಿಗೆ ತಳ್ಳಿದ್ದಕ್ಕೆ ಸಾಕ್ಷಿಯಾಗಿದೆ. ಶುಕ್ಲ ಯುಜುರ್ವೇದವು ವೇಶ್ಯೆಯರು ಕಾಮವನ್ನು ತೃಪ್ತಿಗೊಳಿಸಲೋಸುಗವೇ ಇದ್ದಾರೆ ಎನ್ನುತ್ತದೆ. (ವಾಜಸನೇಯಿ ಸಂಹಿತೆ, 30.5) ಇದು ಮಹಿಳೆಯರನ್ನು ಅತ್ಯಂತ ಹೀನ ಸ್ಥಿತಿಗೆ ತಳ್ಳಿದ ಉದಾಹರಣೆಯಾಗಿದೆ. ಇವೆಲ್ಲವೂ ರಾಜ ವಂಶಗಳು, ಶ್ರೀಮಂತರು ಬೆಳೆದ ಸ್ಥಿತಿಯ ಪರಿಣಾಮವಾಗಿ ಅಸ್ತಿತ್ವಕ್ಕೆ ಬಂದ ವ್ಯವಸ್ಥೆಯಾಗಿದೆ.



ಇದೇ ವಾಜಸನೇಯಿ ಸಂಹಿತೆ ಅಥವಾ ಶುಕ್ಲ ಯುಜುರ್ವೇದವು ಮಹಿಳೆ ಮಕ್ಕಳನು ಪಡೆಯುವುದೇ ಅವಳ ಅಂತಸ್ತನ್ನು ನಿರ್ಧರಿಸುತ್ತದೆ ಎಂದು ಹೇಳುತ್ತದೆ. ಹೀಗೆ ಹೆಣ್ಣು, ಮಕ್ಕಳನ್ನು ಹೆರುವ ಯಂತ್ರವಾಗಿ ಪರಿಗಣಿಸಲ್ಪಟ್ಟಿರುವುದು ಸೂಚಿತವಾಗುತ್ತದೆ. ಅಥರ್ವಣ ವೇದವು ಒಂದು ಹೆಣ್ಣಿಗೆ ಅತ್ಯಂತ ದುಸ್ಥಿತಿಯೆಂದರೆ ಜೀವನವಿಡೀ ಕನ್ಯೆಯಾಗಿ ತಂದೆ, ತಾಯಂದಿರ ಅಥವಾ ಅಣ್ಣ ತಮ್ಮಂದಿರ ಜೊತೆಗೆ ಜೀವನ ಸಾಗಿಸುವ ಸ್ಥಿತಿ ಎನ್ನುತ್ತದೆ. ಮಹಿಳೆ ಗಂಡನ ಮನೆಯಲ್ಲಿರಬೇಕು ಅಥವಾ ತಂದೆ, ಸಹೋದರರ ಮೇಲೆ ಪರಾವಲಂಬಿಯಾಗಿರಬೇಕು. ಅವಳಿಗೊಂದು ಸ್ವತಂತ್ರ ಅಸ್ತಿತ್ವ ಇಲ್ಲದಿರುವ ಪರಿಸ್ಥಿತಿ ಆಗಲೇ ರೂಪುಗೊಂಡಿರುವುದನ್ನು ಸ್ಪಷ್ಟ ಪಡಿಸುತ್ತದೆ. ಕನ್ಯೆಯಾಗಿರುವುದು, ತಂದೆಯ ಮನೆಯಲ್ಲಿರುವುದು ಹೆಣ್ಣಿನದೇ ತಪ್ಪು, ಒಂದು ಅಪರಾಧವೆಂಬಂತೆ ಸಾಮಾಜಿಕ ಮೌಲ್ಯಗಳು ಆಗಲೆ ರೂಪಿತವಾಗಿವೆ. ಇಂತಹ ಸಾಮಾಜಿಕ ಕಟ್ಟಳೆಗಳು ಹೆಣ್ಣನ್ನು ಹೇಗಾದರೂ ಮನೆಯಿಂದ ಹೊರ ಸಾಗಿಸಲೇ ಬೇಕಾದ ಅನಿವಾರ್ಯತೆಯನ್ನು ಉಂಟು ಮಾಡುತ್ತವೆ. ಅಥರ್ವಣ ವೇದದ 5, 7.12 ಮಂತ್ರವು ಮನೆಗೆ ಬರುವ ಸುಂದರ ಪತ್ನಿಯು ತರುವ ನೂರಾರು ವಸ್ತುಗಳ ಬಗ್ಗೆ ಹೇಳುತ್ತದೆ. ಅಂದರೆ ವರ ದಕ್ಷಿಣೆ ಕೊಟ್ಟು ಮದುವೆ ಮಾಡಿ ಕಳಿಸುವ ಸಾಲಂಕೃತ ಕನ್ಯೆಯ ಪದ್ಧತಿ ರೂಪುಗೊಂಡ ಬಗ್ಗೆ ಹೇಳುತ್ತದೆ.


ಈ ಸ್ಥಿತಿಗೆ ಹೆಣ್ಣನ್ನು ತಳ್ಳುವುದಕ್ಕೆ ಅವಳ ಮೇಲೆ ಸಾಮಾಜಿಕ ಭೇದದ, ಮಡಿ ಮೈಲಿಗೆಯನ್ನು ಅವಳ ಮೇಲೆ ಹೇರಲಾಗುತ್ತದೆ. ಅವಳು ಅಶುದ್ಧಳು. ಮೈಲಿಗೆಯಾದ ಹೆಣ್ಣು ನೂತ ನೂಲಿನಿಂದ ಮಾಡಿದ ಅಥವಾ ನೇಯ್ದ ಬಟ್ಟೆಯನ್ನು ತೆಗೆದುಕೊಳ್ಳುವ ಬಗ್ಗೆ ಎಚ್ಚರ ವಹಿಸಬೇಕು ಎಂದು ಶಥಪಥ ಬ್ರಾಹ್ಮಣವು ಹೇಳುತ್ತದೆ. ಇದೇ ಬ್ರಾಹ್ಮಣವು ಮಹಿಳೆ, ಶೂದ್ರರು, ನಾಯಿ ಮತ್ತು ಕಾಗೆ ಇವೆಲ್ಲಾ ಅಸತ್ಯದ ಪ್ರತಿರೂಪ ಎಂದು ಹೇಳುತ್ತದೆ.

ಇದು ಮಹಿಳೆಯರನ್ನು ಕೀಳುಗಳೆಯುವುದನ್ನು ಸಮಾಜ ಒಪ್ಪಿಕೊಳ್ಳುವಂತೆ ಮಾಡಲು ಆಧಾರವೆಂಬಂತಹ ಕಾರಣಗಳನ್ನೂ ರೂಪಿಸಿದೆ. ವರ್ಣ ವ್ಯವಸ್ಥೆಯಲ್ಲಿ ಹೇಗೆ ಮಡಿ, ಮೈಲಿಗೆಯನ್ನು ಮೇಲು ಕೀಳುಗಳನ್ನು ನಿರ್ಧರಿಸುವ ಅಳತೆಗೋಲಾಗಿ ಬಳಸಿಕೊಳ್ಳಲಾಗಿದೆಯೋ ಹಾಗೆಯೇ ಮಹಿಳೆಯರ ವಿಷಯದಲ್ಲಿಯೂ ಅದೇ ಮಾನದಂಡವಾಗಿದೆ. ಮತ್ತು ಶೂದ್ರರು ಮತ್ತು ಮಹಿಳೆಯರು ಸಮಾನ ಕೀಳು ಸ್ಥಾನ ಎಂದು ಪರಿಗಣಿಸಲಾಗಿದೆ ಎಂಬುದು ಶ್ರುತವಾಗುತ್ತದೆ. ಹೀಗೆ ಒಂದೇ ಕಾಲದಲ್ಲಿ ಒಂದೇ ರೀತಿಯ ಕಾರಣಗಳನ್ನು ನೀಡಿ ಮಹಿಳೆಯನ್ನೂ ಅಧೀನ ಸ್ಥಿತಿಗೆ ನೂಕಲಾಗಿದೆ.

ಮದುವೆ, ಗಂಡನ ಮನೆಯಲ್ಲಿ ಬಾಳುವೆ, ಮಕ್ಕಳನ್ನು ಹೆರುವುದು, ಸಾಕುವುದು, ದುಡಿಯುವುದು, ಶ್ರೀಮಂತರಾದರೆ ಸವತಿಯರೊಂದಿಗೆ ಗಂಡನ ಪ್ರೇಮ ಕಟಾಕ್ಷಕ್ಕಾಗಿ ಕಾದಾಟ, ಮದುವೆಯಾಗದ ಸ್ಥಿತಿ, ಹೇಗಾದರೂ ಮದುವೆ ಮಾಡಲು ವರ ದಕ್ಷಿಣೆ, ಜೀವನದ ಮಾರ್ಗವಿಲ್ಲದವರು ವೇಶ್ಯೆಯರಾಗಿ ಜೀವಿಸುವುದು ಇವೆಲ್ಲವೂ ಅಂದೇ ಆರ್ಯ ಮಹಿಳೆಯ ಜೀವನದ ಅಂಗವಾಗಲು ಆರಂಭವಾಗಿದೆ. ಅದಕ್ಕೆ ಬೇಕಾದ ಶಾಸ್ತ್ರಗಳ ಕಟ್ಟಳೆಗಳನ್ನು ರೂಪಿಸುವುದೂ ಆರಂಭವಾಗಿದೆ ಎಂಬ ಸೂಚನೆ ಸಿಗುತ್ತದೆ.

ಆದರೆ ಆಗಿನ್ನೂ ಇಂತಹ ಸಮಾಜ ಕಟ್ಟಳೆಗಳ ಆರಂಭ ಹಂತವಾಗಿರುವುದರಿಂದ ಹಿಂದಿನ ಜೀವನ ಪದ್ಧತಿಯ ಅನೇಕ ಅಂಶಗಳು ಇನ್ನೂ ಜೀವಂತವಾಗಿದ್ದುದರ ಸೂಚನೆಗಳನ್ನೂ ಕಾಣುತ್ತೇವೆ. ಇದಕ್ಕೆ ಸತ್ಯಕಾಮ ಜಾಬಾಲ ಎಂಬ ಋಷಿಯ ಪ್ರಸಂಗ ಉದಾಹರಣೆಯಾಗಿದೆ. ಬಾಲಕನಾದ ಸತ್ಯಕಾಮ ವಿದ್ಯಾಭ್ಯಾಸಕ್ಕೆಂದು ಗುರುಕುಲಕ್ಕೆ ಹೋಗುತ್ತಾನೆ ಆಗ ಅಲ್ಲಿಯ ವಿದ್ಯಾಗುರು ನಿನ್ನ ತಂದೆ ಯಾರು ಎಂಬ ಪ್ರಶ್ನೆ ಕೇಳುತ್ತಾನೆ ಆ ಬಾಲಕ ತಂದೆಯನ್ನು ನೋಡಿರುವುದಿಲ್ಲ ಆದ್ದರಿಂದ ನನಗೆ ಗೊತ್ತಿಲ್ಲವೆಂದೂ ತಾಯಿಯನ್ನು ಕೇಳಿಕೊಂಡು ಬಂದು ಹೇಳುತ್ತೇನೆಂದೂ ಹೇಳುತ್ತಾನೆ. ಮನೆಯಲ್ಲಿ ತಾಯಿ ಜಾಬಾಲ ಹೇಳುತ್ತಾಳೆ: ನನ್ನ ಯವ್ವನದ ಕಾಲದಲ್ಲಿ ಎಷ್ಟೋ ಗಂಡಸರ ಜೊತೆ ಸಂಬಂಧವಿತ್ತು ಆದ್ದರಿಂದ ನಿನ್ನ ತಂದೆ ಯಾರು ಎಂದು ತಿಳಿದಿಲ್ಲ ಎಂದು. ಅದನ್ನೇ ಅವನು ಆ ಗುರುಗಳಿಗೆ ಬಂದು ಹೇಳುತ್ತಾನೆ. ಆಗ ಗುರುವು ಹೀಗೆ ಧೈರ್ಯವಾಗಿ ಸತ್ಯ ಹೇಳುತ್ತಿರುವುದರಿಂದ ಅವನು ಬ್ರಾಹ್ಮಣನೊಬ್ಬನ ಮಗನೇ ಆಗಿರಬೇಕೆಂದು ತೀರ್ಮಾನಿಸಿ ವಿದ್ಯೆ ಹೇಳಿಕೊಡಲು ಒಪ್ಪುತ್ತಾನೆ. ಅವನು ತಲೆ ತಗ್ಗಿಸುವಂತಹ ಈ ವಿಷಯದಲ್ಲಿಯೂ ಸತ್ಯವನ್ನು ಹೇಳಿದ್ದರಿಂದ ಸತ್ಯಕಾಮನೆಂದೂ ತಂದೆ ಗೊತ್ತಿಲ್ಲದ್ದರಿಂದ ತಾಯಿಯಾದ ಜಾಬಾಲಳ ಹೆಸರಿನಲ್ಲಿಯೇ ಸತ್ಯಕಾಮ ಜಾಬಾಲನೆಂದು ಹೆಸರಾಗುತ್ತಾನೆ.

ಚಾಂದೋಗ್ಯ ಉಪನಿಷತ್ತಿನಲ್ಲಿ ಬರುವ ಈ ಪ್ರಸಂಗ ಅಂದಿನ ಸಮಾಜದ ಬಗ್ಗೆ ಪರಸ್ಪರ ವಿರುದ್ಧವಾದ ಹಲವು ವಿಷಯಗಳನ್ನು ಹೊರ ಚೆಲ್ಲುತ್ತದೆ. ಒಂದು ಒಬ್ಬ ಹೆಣ್ಣು ಒಬ್ಬ ಗಂಡನ ಜೊತೆಯಲ್ಲಿ ಬಾಳುವುದು (ಮದುವೆಯಾಗಿ) ಆಗಲೆ ಒಂದು ಪ್ರಧಾನ ಮೌಲ್ಯವಾಗಿತ್ತು. ಆದರೆ ಅಪರೂಪಕ್ಕೆ ಜಾಬಾಲಳಂತಹವರಿಗೆ ಕಠಿಣವಾದ ಶಿಕ್ಷೆ ಬಹಿಷ್ಕಾರ ವಿಧಿಸುವ ಮನಸ್ಸು ಮತ್ತು ಕಟ್ಟಳೆಗಳಿನ್ನೂ ರೂಪುಗೊಂಡಿರಲಿಲ್ಲ. ಏಕೆ–ಂದರೆ ಸಮಾಜ ಇನ್ನೂ ಮದುವೆ ಎಂಬ ವ್ಯವಸ್ಥೆ ರೂಪುಗೊಳ್ಳದ ಸ್ಥಿತಿಯಿಂದ ಮದುವೆ ಎಂಬ ಸಂಸ್ಥೆ ರೂಪುಗೊಳ್ಳುತ್ತಿರುವ ಸ್ಥಿತ್ಯಂತರದಲ್ಲಿತ್ತು. ಆದ್ದರಿಂದ ಇನ್ನೂ ಉದಾರ ಮನಸ್ಥಿತಿ ಇನ್ನೂ ಉಳಿದಿತ್ತು. ವಿದ್ಯಾಭ್ಯಾಸ ಆಗಲೆ ಬ್ರಾಹ್ಮಣರಿಗೆ ಎಂಬ ಕಟ್ಟಳೆ ರೂಪಿತವಾಗಿತ್ತು. ಬ್ರಾಹ್ಮಣರು ಮಾತ್ರ ಸತ್ಯವನ್ನು ಹೇಳುವವರು ಎಂಬುದೊಂದು ಸಾಮಾಜಿಕ ಮೌಲ್ಯವಾಗಿತ್ತು. ಹೀಗೆ ವರ್ಣ ಹಾಗೂ ಮಹಿಳಾ ಅಧೀನತೆಯ ಮೌಲ್ಯಗಳು ಜೊತೆ ಜೊತೆಗೇ ರೂಪುಗೊಳ್ಳುತ್ತಿದ್ದವು. ಈ ಜೋಡಿ ವ್ಯವಸ್ಥೆಯ ಅತಿ ಹೆಚ್ಚು ಹೊರೆಯನ್ನು ಶೂದ್ರ ಹೆಣ್ಣುಗಳು ಹೊರಬೇಕಾಗಿತ್ತು.



ವರ್ಣ ವ್ಯವಸ್ಥೆ ಮತ್ತು ಮಹಿಳೆ: ಇಮ್ಮಡಿ, ಮುಮ್ಮಡಿಗೊಂಡ ಶೋಷಣೆ

ಮಹಿಳೆಯರ ಅಧೀನ ಸ್ಥಿತಿಯ ಮೇಲೆ ವರ್ಣ ವ್ಯವಸ್ಥೆಯ ಮೇಲು ಕೀಳು ಮತ್ತು ಶೋಷಣೆಯ ಹೊರೆ ಸೇರಿದರೆ ಏನಾದೀತು? ಅಥರ್ವಣ ವೇದದ 5. 17.8–9 ಮಂತ್ರ ಹೇಳುತ್ತದೆ :

"ಒಬ್ಬ ಹೆಂಗಸು ಹತ್ತು ಜನ ಗಂಡಂದಿರನ್ನು ಮೊದಲು ಹೊಂದಿದ್ದರೂ ಅವರಲ್ಲಿ ಯಾರೂ ಬ್ರಾಹ್ಮಣರಲ್ಲದಿದ್ದರೆ ನಂತರ ಒಬ್ಬ ಬ್ರಾಹ್ಮಣ ಅವಳ ಕೈ ಹಿಡಿದರೆ ಆಗ ಆ ಬ್ರಾಹ್ಮಣ ಮಾತ್ರವೇ ಅವಳ ಗಂಡನಾಗುತ್ತಾನೆ. ಕ್ಷತ್ರಿಯನಲ್ಲ, ವೈಶ್ಯನಲ್ಲ ಬ್ರಾಹ್ಮಣ ಮಾತ್ರವೇ ಅವಳ ಯಜಮಾನ "ಹೀಗೆ ಹೆಣ್ಣಿನ ಮೇಲೆ ಹಕ್ಕನ್ನು ಸಾದಿಸುವಲ್ಲಿಯೂ ಶೂದ್ರರ ಬಗ್ಗೆ ಅಲ್ಲ ಆರ್ಯರ ನಡುವೆಯೇ ವರ್ಣ ವ್ಯವಸ್ಥೆಯ ಮೇಲು ಕೀಳು ಆಧಾರಿತವಾದ ಕಟ್ಟಳೆಗಳು ಅಂದೇ ಸ್ಥಾಪಿತವಾಗಿತ್ತು. ಮತ್ತು ಹೆಣ್ಣಿಗೆ ಈ ಬಗ್ಗೆ ಆಯ್ಕೆಯೇ ಇರಲಿಲ್ಲ.



ಇನ್ನು ಶೂದ್ರ ಹೆಣ್ಣುಗಳ ವಿಷಯದಲ್ಲಿ ಈ ಸಮಾಜದ ದೃಷ್ಟಿಕೋನ ಹೇಗಿತ್ತು? ಶೂದ್ರ ಹೆಣ್ಣುಗಳನ್ನು ಆ ಕಾಲದ ಹಲವು ಗ್ರಂಥಗಳಲ್ಲಿ ವಿಷಯ ಲಂಪಟಳು, ಸ್ವೇಚ್ಛಾಚಾರಿ ಎಂದೇ ಪ್ರಸ್ತಾಪಿಸಲಾಗಿದೆ. ಅರ್ಯೇತರ ಜನ ಸಮುದಾಯದಲ್ಲಿ ಇದ್ದ ಮಾತೃ ಪ್ರಧಾನ ವ್ಯವಸ್ಥೆ, ಅದರಲ್ಲಿ ಮಹಿಳೆಯರಿಗಿದ್ದ ಸ್ವಾತಂತ್ರ್ಯ– ಮುಂದಿನ ಕಾಲಘಟ್ಟದ ಕಾವ್ಯಗಳಾದ ಮಹಾಭಾರತ, ರಾಮಾಯಣಗಳಲ್ಲಿನ ಹಿಡಿಂಬೆ, ಮತ್ಸ್ಯ ಗಂಧಿ, ಶೂರ್ಪನಖಿ, ರಾಧೆ, ಅಂಬೆ, ಉಲೂಪಿ, ಚಿತ್ರಾಂಗದಾ ಮೊದಲಾದ ಅನೇಕ ಉದಾಹರಣೆಗಳ ಮೂಲಕ ತಿಳಿಯ ಬರುವಂತೆ ಮದುವೆ ಎಂಬುದಿನ್ನೂ ಕಠಿಣ ಕಟ್ಟಳೆಗಳ ಸಂಸ್ಥೆಯಾಗಿಲ್ಲದಿರುವುದೇ ಅವರನ್ನು ಕೀಳಾಗಿ ಚಿತ್ರಿಸಲು ಕಾರಣವಾದಂತೆ ಕಾಣುತ್ತದೆ.

ಅದೇ ಸಂದರ್ಭದಲ್ಲಿ ಅನೇಕ ಋಷಿ ಮುನಿಗಳು ಕುಂಭ ಸಂಭವರು ಎಂದು ಕಥೆಗಳನ್ನು ಕಟ್ಟುವ ಪ್ರಸಂಗಗಳನ್ನು ಕಾಣುತ್ತೇವೆ. ಅಗಸ್ತ್ಯ, ದ್ರೋಣ, ಕೃಪಾ ಮೊದಲಾದ ಈ ಬ್ರಾಹ್ಮಣರು, ಋಷಿಗಳು ಅರ್ಯೇತರ ಹೆಣ್ಣುಗಳೊಂದಿಗೆ ಆರ್ಯ ಮೇಲ್ಜಾತಿಯ ಗಂಡುಗಳು ಬೆರೆದದ್ದರ ಫಲವೆಂದೂ ಅದನ್ನು ಬಹಿರಂಗಗೊಳಿಸಲಾಗದ ಪರಿಸ್ಥಿತಿಯಲ್ಲಿ ಈ ಕಥಾನಕಗಳ ಸೃಷ್ಠಿಯಾಗಿದೆ ಎಂದೂ ಕೋಸಾಂಬಿಯಂತಹ ವಿದ್ವಾಂಸರು ಅರ್ಥೈಸಿದ್ದಾರೆ.

ಇನ್ನು ಶೂದ್ರ ಹೆಂಗಸರ ದುಡಿಮೆಯಂತೂ ಹೇಳತೀರದು. ಅವರನ್ನು ದಾಸಿಯರಂತೆ ಪರಿಗಣಿಸಲಾಗುತ್ತಿತ್ತು. ಅತ್ಯಂತ ಕಠಿಣ ದುಡಿಮೆ ಅವರಿಗಾಗಿ ಮೀಸಲಾಗಿತ್ತು. ಶುಕ್ಲ ಯಜುರ್ವೇದದ ಪುರುಷ ಮೇಧ ಸೂಕ್ತದಲ್ಲಿ ಚಿತ್ರಿಸಲಾದಂತೆ ಕಾಡಿನಲ್ಲಿ, ಕೃಷಿಯಲ್ಲಿ ಮಳೆ ಬಿಸಿಲಿನಲ್ಲಿ ಕೆಲಸ ಮಾಡುವುದು, ಬಿದಿರುಗಳನ್ನು ಸೀಳುವುದು, ಮುಳ್ಳು ಮೆಳೆಗಳನ್ನು ಕತ್ತರಿಸುವುದು, ಸಗಣಿ ಸಂಗ್ರಹಿಸುವುದು, ಧಾನ್ಯಗಳನ್ನು ಒನಕೆಗಳಿಂದ, ರುಬ್ಬುಗಲ್ಲುಗಳಿಂದ ಒಕ್ಕುವುದು, ಇತ್ಯಾದಿ. ವಾಸ ಪ್ರದೇಶಗಳಲ್ಲಿ ಬಟ್ಟೆಗಳನ್ನು ಒಗೆಯುವುದು, ನೇಕಾರಿಕೆ, ಬಣ್ಣ ಹಾಕುವುದು ಇತ್ಯಾದಿ.

ಒಟ್ಟಿನಲ್ಲಿ ವರ್ಣ ವ್ಯವಸ್ಥೆ ಹಾಗೂ ಮಹಿಳಾ ಅಧೀನತೆಯ ಫಲವಾಗಿ ಉಚ್ಚ ವರ್ಗಗಳು ಶ್ರೀಮಂತಿಕೆಯಲ್ಲಿ ಮೆರೆದಾಡಲು ಬೇಕಾದ ಕಠಿಣ ದುಡಿಮೆಯಂತೂ ಸುಲಭವಾಗಿ ದಕ್ಕುತ್ತಿತ್ತು.

ವೇದ, ಬ್ರಾಹಣಗಳ ಈ ಸೂಕ್ತ ಮಂತ್ರಗಳೇ ಮಹಿಳೆಯರು ಈ ವೇದಗಳ ಕಾಲದಲ್ಲಿ ಅತ್ಯಂತ ಗೌರವ ಸ್ಥಾನ ಪಡೆದಿದ್ದರು. ಗಾರ್ಗಿ, ಮೈತ್ರೇಯಿ ಮೊದಲಾದ ಉದಾಹರಣೆಗಳನ್ನು ನೋಡಿ ಎಂಬ ಸುಳ್ಳುಗಳನ್ನು ಬಯಲಿಗೆಳೆಯುತ್ತವೆ. ●


ವೇದ, ಬ್ರಾಹ್ಮಣಗಳಲ್ಲಿ ದಲಿತರು

ಚಾತುರ್ವರ್ಣ್ಯ ವ್ಯವಸ್ಥೆ ರೂಪುಗೊಳ್ಳುತ್ತಿದ್ದ ಈ ಸಮಯದಲ್ಲಿ ಪಂಚಮ ವರ್ಣವೆಂದು ಕರೆಯಲ್ಪಡುವ ಅಸ್ಪೃಶ್ಯರು ವೇದಗಳಲ್ಲಿ ಬ್ರಾಹ್ಮಣ, ಅರಣ್ಯಕ, ಉಪನಿಷತ್‌ಗಳಲ್ಲಿ ಕಾಣ ಬರುವುದಿಲ್ಲ. ಇಂದು ದಲಿತರು ಮಾಡುವ ಅನೇಕ ಕೆಲಸಗಳ ಹೊರೆ ಅಂದಿನ ಶೂದ್ರರೇ ಮಾಡಬೇಕಗಿ ಬಂದಿರುವುದನ್ನು ನೋಡುತ್ತೇವೆ. ಇಂದು ಜೀತದಾಳುಗಳಾಗಿ ದಲಿತರು ಮಾಡುತ್ತಿದ್ದ ಕಠಿಣ ದುಡಿಮೆ ದಾಸರನ್ನಾಗಿ ಮಾಡಿಕೊಂಡ ಶೂದ್ರರ ಹೊರೆಯಾಗಿತ್ತು. ಶುಕ್ಲ ಯಜುರ್ವೇದದ ಪುರುಷ ಮೇಧದಂತಹ ಕೆಲ ಸೂಕ್ತಗಳಲ್ಲಿ ನಿಷಾಧ, ಚಂಡಾಲ ಮುಂತಾದವರ ಪ್ರಸ್ತಾಪಗಳಿವೆ. ಮುಂದಿನ ಕಾಲಘಟ್ಟದಲ್ಲಿ ಇವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗಿದೆ. ಈ ವರ್ಣನೆಗಳನ್ನು ನೋಡಿದ–ರೆ ಅಂದು ಈ ಸಮುದಾಯಗಳು ಇನ್ನೂ ಕೃಷಿ ಮತ್ತು ಊರುಗಳ ವಾಸಕ್ಕೆ ಒದಗಿ ಬಂದಿರಲಿಲ್ಲ. ಕಾಡಿನಲ್ಲಿಯೇ ವಾಸಿಸುತ್ತಿದ್ದ ಇವರು ಬುಡುಕಟ್ಟು ಜೀವನ ನಡೆಸುತ್ತಾ ಬೇಟೆ, ಕಾಡಿನ ಉತ್ಪನ್ನಗಳ ಸಂಗ್ರಹಗಳಲ್ಲಿ ತೊಡಗಿದ್ದರೆಂಬಂತೆ ಭಾಸವಾಗುತ್ತದೆ. ಮುಂದೆ ಊರಿನ ವಾಸಕ್ಕೆ, ಕೃಷಿಗೆ ತೊಡಗಿದಾಗ ಇವರ ಪರಿಸ್ಥಿತಿ ಪೂರ್ಣ ಬದಲಾಗಿ ಸಮಾಜದ ಅತ್ಯಂತ ದೂಷಿತ ಕೆಳ ಸ್ಥಾನಕ್ಕೆ ತಳ್ಳಲ್ಪಡುವುದನ್ನು ನೋಡುತ್ತೇವೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಆಹುತಿಯಾದ ಆದರ್ಶಗಳು?



▌ನಿತ್ಯಾನಂದಸ್ವಾಮಿ

'ಮೋದಿ ಪ್ರಧಾನಿಯಾಗಿರುವ ದೇಶದಲ್ಲಿ ನಾನಿರಲಾರೆ' ಎಂದು ಹೇಳಿದ್ದ ಡಾ.ಯು.ಆರ್. ಅನಂತಮೂರ್ತಿ ಅವರು ಮೊನ್ನೆ ಶುಕ್ರವಾರ ಹೊರಟು ಹೋದದ್ದು ಕಾಕತಾಳಿಯ. ಆದರೆ ಕಂಡದನ್ನು ಕಂಡಂತೆಯೇ ಹೇಳುವ ಅವರ ಎದೆಗಾರಿಕೆಯನ್ನು ಅವರನ್ನು ಒಪ್ಪದಿರುವವರು ಸಹ ಮೆಚ್ಚದಿರಲಾರರು. ಕನ್ನಡದಲ್ಲಿ ಅವರಷ್ಟು ವಿವಾದಗಳನ್ನು ಹುಟ್ಟುಹಾಕಿದ ಸಾಹಿತಿ ಬರಹಗಾರರು ಇನ್ನೊಬ್ಬರಿಲ್ಲ, ಟೀಕೆ ಟಿಪ್ಪಣಿಗಳಿಂದ ಖಿನ್ನರಾಗದಿರುವುದೂ ಸಹ ಅವರ ಇನ್ನೊಂದು ದೊಡ್ಡ ಗುಣ. ಹೀಗಾಗಿ ಅಷ್ಟೇನು ಅನಿರೀಕ್ಷಿತವಲ್ಲದ ಅವರ ಸಾವು ಅವರನ್ನು ಟೀಕಿಸುತ್ತಾ ಬಂದವರಿಗೂ ನೋವನ್ನು ಉಂಟುಮಾಡಿದೆ.

ಆದರೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ.ಯು.ಆರ್. ಅನಂತಮೂರ್ತಿ ಅವರ ನಿಧನದ ಸುದ್ದಿ ಪ್ರಸಾರವಾಗುತ್ತಿದ್ದಂತೆ ಹಿಂದುತ್ವ ಸಂಘಟನೆಯ ಕಿಡಿಗೇಡಿಗಳು ಪಟಾಕಿ ಸಿಡಿಸಿ ಸಂಭ್ರಮಿಸಿದ್ದು ಅಕ್ಷಮ್ಯವಾಗಿದೆ. ಈ ಹಿಂದುತ್ವ ಸಂಘಟನೆಗಳು ದೇಶದ ಯುವಜನರ ತಲೆಗಳಲ್ಲಿ ಎಂತಹ ಘೋರ ವಿಷವನ್ನು ತುಂಬುತ್ತಿವೆ ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ. ಹಿಂದೆ ಗಾಂಧೀಜಿ ಅವರನ್ನು ಕೊಂದು ಹಾಲು ಕುಡಿದು ಸಂಭ್ರಮಿಸಿದ್ದು ಇವರೇ! ಇಡೀ ಹಿಂದೂ ಸಮುದಾಯ ತಲೆ ತಗ್ಗಿಸುವಂತೆ ಮಾಡಿದ ಘಟನೆ ಇದು. ಇವರಲ್ಲಿ ಒಬ್ಬೊಬ್ಬರು ಎಲ್ಲಿ ತಲೆಮರೆಸಿಕೊಂಡಿದ್ದರೂ ಅವರನ್ನು ಪತ್ತೆಹಚ್ಚಿ ತಕ್ಕ ಶಿಕ್ಷೆಗೆ ಗುರಿಪಡಿಸುವುದು ತುರ್ತಾಗಿ ಆಗಬೇಕಾಗಿದೆ. ಸಾವು ನೋವಿನ ಎದುರು ಕೇಕೆ ಹಾಕುವ ಕ್ರೌರ್ಯ ಪ್ರದರ್ಶನಕ್ಕೆ ಪಶ್ಚಾತ್ತಾಪ ವ್ಯಕ್ತಪಡಿಸದಿರುವ ಹಿಂದುತ್ವ ಸಂಘಟನೆಗಳ ನಡೆ ಅಷ್ಟೇ ಖಂಡನಾರ್ಹವಾಗಿದೆ.

ಡಾ. ಅನಂತಮೂರ್ತಿ ಅವರ ಬದುಕು ಬರಹ ವಿವಾದಗ್ರಸ್ತವಾದಂತೆ ಅವರ ಸಾವು ಸಹ ವಿವಾದಗಳಿಗೆ ಆಹಾರವಾದದ್ದು ಖೇದದ ಸಂಗತಿ. ಕಲಾ ಚಟುವಟಿಕೆಗಳಿಗಾಗಿ ಮೀಸಲಿಟ್ಟ ಬೆಂಗಳೂರು ಜ್ಞಾನ ಭಾರತಿ ಆವರಣದ ಕಲಾಗ್ರಾಮದಲ್ಲಿ ಡಾ. ಅನಂತಮೂರ್ತಿಯವರ ಅಂತ್ಯಸಂಸ್ಕಾರ ನಡೆಸಿದ್ದರ ವಿರುದ್ಧವಾಗಿ ಬುಗಿಲೆದ್ದಿರುವ ಆಕ್ರೋಶಕ್ಕೆ ಡಾ. ಅನಂತಮೂರ್ತಿ ಹೊಣೆಗಾರರಲ್ಲ. ಇದಕ್ಕೆ ಸರ್ಕಾರ ತೆಗೆದುಕೊಂಡ ದಿಡೀರ ತೀರ್ಮಾನವೇ ಕಾರಣ. ಹಿಂದೆ ಡಾ.ಜಿ.ಎಸ್. ಶಿವರುದ್ರಪ್ಪನವರ ಅಂತ್ಯಸಂಸ್ಕಾರವನ್ನು ಅದೇ ಕಲಾಗ್ರಾಮದಲ್ಲಿ ಮಾಡಿದಾಗ ಯಾರೂ ಅಷ್ಟೊಂದು ಯೋಚನೆ ಮಾಡಿರಲಿಲ್ಲಿ. ಈಗ ಆಗಿದ್ದು ಆಯಿತು. ಇನ್ನು ಮುಂದೆ ಹಾಗಾಗದಂತೆ ನೋಡಿಕೊಳ್ಳಬೇಕು.

ನಾಡಿಗೆ ಕೊಡುಗೆ ನೀಡಿದವರು, ನಾಡಿಗಾಗಿ ದುಡಿದು ಮಡಿದಾಗ ಅವರ ಅಂತ್ಯಸಂಸ್ಕಾರವನ್ನು ಸಾರ್ವಜನಿಕವಾಗಿ ನಡೆಸಲು ಸೂಕ್ತವಾದ ಒಂದು ಸ್ಥಳವನ್ನು ಅಭಿವೃದ್ಧಿ ಪಡಿಸುವುದರಲ್ಲಿ ತಪ್ಪೇನಿಲ್ಲ. ಆದರೆ ಭೂಮಿಗೊಂದು ಮಿತಿ ಇರುವುದರಿಂದ ಇಂತಹ ಸ್ಮಾರಕ ಸ್ಥಳಗಳಿಗೂ ಮಿತಿ ಇರುವುದನ್ನು ಮರೆಯಲಾಗದು. ವಿಭಿನ್ನ ನಂಬಿಕೆಗಳನ್ನು ಹೊಂದಿರುವ ಜನರಿರುವ ನಮ್ಮ ಈ ದೇಶದಲ್ಲಿ ಎಲ್ಲಾ ಸಮುದಾಯದವರಿಗಾಗಿ ಒಂದೇ ಸ್ಥಳವನ್ನು ಗೊತ್ತುಪಡಿಸುವುದು ಸಹ ಕಷ್ಟ ಸಾಧ್ಯ.

ಕೊನೆಯದಾಗಿ, ಡಾ. ಅನಂತಮೂರ್ತಿ ಅವರ ಅಂತ್ಯಸಂಸ್ಕಾರದಲ್ಲಿ ಅನುಸರಿಸಲಾದ ವಿಧಿವಿಧಾನಗಳು ಅವರ ಅಭಿಮಾನಿಗಳಲ್ಲಿ ಅವರ ಸಾವಿಗಿಂತ ಹೆಚ್ಚು ನೋವನ್ನು ತಂದಿವೆ. ಬುದುಕಿನುದ್ದಕ್ಕೂ ತಮ್ಮ ಮಾತು ಹಾಗೂ ಕೃತಿಗಳ ಮೂಲಕ ಪುರೋಹಿತಶಾಹಿಯು ಜನಗಳ ನಡುವೆ ಬೆಳೆಸುತ್ತಾ ಬಂದಿರುವ ಮಾಢ್ಯದ ವಿರುದ್ಧ ಪ್ರಖರವಾಗಿ ಧ್ವನಿ ಎತ್ತಿದವರ ಅಂತ್ಯಸಂಸ್ಕಾರದಲ್ಲಿ ಅದೇ ಪುರೋಹಿತರು ಅರ್ಥವಿಲ್ಲದ ಮಂತ್ರಗಳನ್ನು ಪಠಿಸಿ ಮಧ್ವ ಬ್ರಾಹ್ಮಣ ಸಂಪ್ರದಾಯದಂತೆ ಎಲ್ಲವನ್ನೂ ನಡೆಸಿ ಅವರ ಆದರ್ಶಗಳನ್ನು ಸುರಿದ ತುಪ್ಪದಿಂದ ಬುಗಿಲೆದ್ದ ಜ್ವಾಲೆಗೆ ಆಹುತಿ ಕೊಟ್ಟದ್ದು ನಾಡಿನ ಜನತೆಗೆ ಎಂತಹ ಸಂದೇಶ ನೀಡಿದೆ?

ಅಂತ್ಯಸಂಸ್ಕಾರ ಯಾವ ರೀತಿಯಲ್ಲಿ ನಡೆಯಬೇಕು ಎಂಬುದನ್ನು ಅವರ ಕುಟುಂಬದ ಸದಸ್ಯರೇ ತೀರ್ಮಾನಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಅದು ನಿಜವೇ ಆಗಿದ್ದರೆ ಡಾ. ಅನಂತಮೂರ್ತಿ ಅವರ ವಿಚಾರಧಾರೆಯ ಬಗ್ಗೆ ಅವರ ಕುಟುಂಬದ ಸದಸ್ಯರಲ್ಲೇ ಗೌರವಭಾವ ಇರಲಿಲ್ಲ ಎಂದಾಗುತ್ತದೆ. ಅವರೆಲ್ಲರು ಸಂಪ್ರದಾಯಸ್ತ ಚೌಕಟ್ಟಿನಲ್ಲೇ ಬದುಕುತ್ತಿದ್ದಾರೆ ಎಂದಾಗುತ್ತದೆ. ಇದು ಡಾ. ಅನಂತಮೂರ್ತಿ ಅವರು ಪ್ರತಿಪಾದಿಸುತ್ತಾ ಬಂದಿದ್ದ ತತ್ವಸಿದ್ಧಾಂತಗಳನ್ನು ಅವಮಾನಿಸುತ್ತದೆ. ಪ್ರತಿಯೊಬ್ಬರಂತೆ ಡಾ. ಅನಂತಮೂರ್ತಿ ಅವರ ಮಡದಿ ಮಕ್ಕಳಿಗೆ ಸ್ವತಂತ್ರವಾದ ನಂಬಿಕೆಗಳನ್ನು ಹೊಂದಿರಲು ಹಕ್ಕಿದೆ. ಆದರೆ ಹೊಸ ಮೌಲ್ಯಗಳನ್ನು ಸಮಾಜದಲ್ಲಿ ಬಿತ್ತಿ ಬೆಳೆಸಬೇಕೆನ್ನುವವರು ತಮ್ಮ ಕುಟುಂಬದಲ್ಲೇ ಅವುಗಳ ಅನುಷ್ಠಾನ ಮಾಡದಿದ್ದರೆ ಏನಾಗಬಹುದು ಎಂಬುದನ್ನು ಡಾ. ಅನಂತಮೂರ್ತಿ ಅಂತ್ಯಸಂಸ್ಕಾರದಲ್ಲಿ ನಾವು ಕಾಣುವಂತಾಗಿದೆ. ತಂದೆಯ ಜಾತಿ, ಧರ್ಮ ಮಕ್ಕಳಿಗೆ ಅಂಟಿಕೊಂಡು ಬಂದುಬಿಡುತ್ತದೆ. ಅಲ್ಲಿ ಮಕ್ಕಳಿಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ, ತಂದೆ ಜಾತಿ, ಧರ್ಮದ ಮಾಢ್ಯವನ್ನು ಧಿಕ್ಕರಿಸಿದಾಗ ಅದು ಯಾಕೆ ಅವರ ಮಕ್ಕಳಿಗೂ ಅನ್ವಯವಾಗುವುದಿಲ್ಲ?

ತನ್ನ ಅಂತ್ಯಸಂಸ್ಕಾರ ಹೀಗೇ ಆಗಬೇಕು ಎಂದು ಡಾ. ಅನಂತಮೂರ್ತಿಯವರು ಮೊದಲೇ ಹೇಳಿದ್ದರೆ ಅಥವ ಬರೆದು ಇಟ್ಟಿದ್ದರೆ, ಈ ವಿವಾದಕ್ಕೂ ಅವರೇ ಹೊಣೆಗಾರರಾಗುತ್ತಾರೆ. ಅವರನ್ನು ಹತ್ತಿರದಿಂದ ಬಲ್ಲವರು ಅವರು ಅಂತಹ ಪ್ರಮಾದ ಎಸಗಿರಲು ಸಾಧ್ಯವಿಲ್ಲ ಎನ್ನುತ್ತಾರೆ. ಆದರೆ ತಾನು ಸತ್ತಾಗ ತನ್ನ ಅಂತ್ಯಸಂಸ್ಕಾರದ ಬಗ್ಗೆ ಒಂದು ವಿವಾದ ಸೃಷ್ಟಿಯಾಗಬಹುದೆಂದು ಊಹಿಸಲು ಅವರೇನು ಅಸಮರ್ಥರಾಗಿರಲಿಲ್ಲ ಎಂದು ಹೇಳದಿರಲಾಗದು. ಈ ಎಲ್ಲ ದ್ವಂದಗಳ ನಡುವೆಯೂ, ಡಾ.ಯು.ಆರ್. ಅನಂತಮೂರ್ತಿಯವರ ಸಾವಿನಿಂದ ಇಡೀ ದೇಶಕ್ಕೇ, ಸಾಹಿತ್ಯ ಲೋಕಕ್ಕೆ ದೊಡ್ಡ ನಷ್ಟವಾಗಿದೆ.

ಉಪ ಚುನಾವಣೆ: ಫಲಿಸದ ಮೋದಿ ಮಂತ್ರ, ಕಾಂಗ್ರೆಸ್ ಕಿತ್ತಾಟದ ತಂತ್ರ ಬೇಕಿದೆ ಜನಕೆ ಪರ್ಯಾಯ ಯಂತ್ರ



'ಮೋದಿ ಹೇಳಿದಂತೆ ದೇಶದಲ್ಲಿ ಜಾದೂ ನಡೆಯಲಿಲ್ಲ, ಹಣದುಬ್ಬರ ಕಡಿಮೆಯಾಗಲಿಲ್ಲ ಅದು ಶೇ 8 ಕ್ಕೆ ಹೆಚ್ಚಿದೆ, ಅಗತ್ಯ ವಸ್ತುಗಳ ಬೆಲೆಗಳೂ ಇಳಿಯದೇ ಏರು ಮುಖದಲ್ಲೇ ಇವೆ. ಕೆಂಪು ಕೋಟೆಯ ಮೇಲೆ ನಿಂತು ಮನರಂಜಕ ಭಾಷಣ ಬಿಟ್ಟರೆ ಮೋದಿ ಕೊಟ್ಟದ್ದೇನು 'ಎಂದೂ ಪ್ರಶ್ನಿಸಿ ವಿಭಿನ್ನವಾಗಿ ಕನ್ನಡದ ಪ್ರಾದೇಶಿಕ ಪತ್ರಿಕೆಯೊಂದು ಇತ್ತೀಚೆಗೆ ವರದಿ ಮಾಡಿತ್ತು.

ನೂರು ದಿನಗಳ ಅಧಿಕಾರದ ಸಂಭ್ರಮೋತ್ಸವದ ಸಿದ್ಧತೆಯಲ್ಲಿರುವ ಮೋದಿ ಸರಕಾರಕ್ಕೆ ಮತ್ತು ಬಿಜೆಪಿಗೆ ಮಂಕು ಬಡಿದಿರುವುದು ನಿಜ. ಅದರಲ್ಲೂ ಇತ್ತೀಚೆಗೆ ನಡೆದ ನಾಲ್ಕು ರಾಜ್ಯಗಳಲ್ಲಿನ ಉಪ ಚುನಾವಣಾ ಫಲಿತಾಂಶಗಳು ಬಿಜೆಪಿಯ ನೆಮ್ಮದಿ ಕೆಡಿಸಿದ ಸಂಗತಿಗಳಲ್ಲಿ ಒಂದು ಎಂಬುದೂ ನಿಜ. ಪಂಜಾಬ್, ಮಧ್ಯಪ್ರದೇಶ, ಬಿಹಾರ ಮತ್ತು ಕರ್ನಾಟಕ ರಾಜ್ಯಗಳ ವಿಧಾನಸಭೆಯ 18 ಸ್ಥಾನಗಳಿಗೆ ನಡೆದ ಉಪ ಚುನಾವಣೆಯಲ್ಲಿ 10ರಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಗೆದ್ದಿವೆ, 7ರಲ್ಲಿ ಬಿಜೆಪಿ ಹಾಗೂ 1ರಲ್ಲಿ ಅದರ ಮಿತ್ರ ಪಕ್ಷ ಗೆದ್ದಿವೆ. ಇಲ್ಲಿಯೂ 2 ಕಡೆ ಬಿಜೆಪಿ ಗೆದ್ದಿರುವುದು ಕೇವಲ ಸುಮಾರು 400, 700 ಮತಗಳ ಅಂತರದಲ್ಲಿ ಮಾತ್ರ! ವಿಶೇಷವಾಗಿ ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಹಾರದಂತಹ ಕಡೆ ಅಧಿಕಾರದಲ್ಲಿರುವ ನಿತೀಶ್ ಕುಮಾರ್ ಅವರ ಜೆಡಿಯು ಪಕ್ಷಕ್ಕೆ ಸಿಕ್ಕಿದ್ದು ಕೇವಲ 2 ಮಾತ್ರ. ಉಳಿದ್ದು ಬಿಜೆಪಿಗೆ. ಇದರಿಂದ ಆಕಾಶಕ್ಕೇರಿದ್ದ ಬಿಜೆಗೆ ಈಗಿನ ಫಲಿತಾಂಶ ನಿರಾಸೆ ತಂದಿದೆ.

ರಾಜ್ಯದಲ್ಲಿ

ಅಲ್ಲಿ ಮಾತ್ರವೇ ಅಲ್ಲ ಕರ್ನಾಟಕದಲ್ಲಿಯೂ 3 ಸ್ಥಾನಗಳಲ್ಲಿ ಬಿ.ಜೆ.ಪಿ.ಗೆ ಸಿಕ್ಕಿದ್ದು ಒಂದು ಮಾತ್ರ. ಅದೂ ಶಿಕಾರಿಪುರ ಕ್ಷೇತ್ರದಲ್ಲಿ ಸಂಸದ ಯಡಿಯೂರಪ್ಪನವರ ಮಗ ಮಾಜಿ ಸಂಸದ ರಾಘವೇಂದ್ರನ ಗೆಲುವೂ ಕೂಡ ಅತ್ಯಂತ ಪ್ರಯಾಸಕರ. ಹಿಂದೆ 2013ರಲ್ಲಿ ಯಡಿಯೂರಪ್ಪನವರು 24,424 ಮತಗಳ ಅಂತರದಿಂದ ಗೆದ್ದಿದ್ದರು. 2014ರ ಲೋಕಸಭಾ ಚುನಾವಣೆಯಲ್ಲಿ 59,500 ರಷ್ಟು ಅಧಿಕ ಮತಗಳು ಈ ಕ್ಷೇತ್ರದಲ್ಲೇ ಸಿಕ್ಕಿದ್ದವು. ಆದರೆ ಇದಾದ ಮೂರು ತಿಂಗಳಲ್ಲೇ ಅವರ ಮಗ, ಬಿಜೆಪಿ ಅಭ್ಯರ್ಥಿ ಗೆದ್ದದ್ದು ಕೇವಲ 6430 ಮತಗಳಿಂದ. ಅದೂ ಅವರು ಹರಿಸಿದ ಹಣದ ಹೊಳೆಯಿಂದ ಎನ್ನುವ ಮಾತು ಸುಳ್ಳೇನಲ್ಲ.

ಇನ್ನು ಬಳ್ಳಾರಿ ಗ್ರಾಮಾಂತರ ಜನಾರ್ಧನರೆಡ್ಡಿ–ಶ್ರೀರಾಮುಲು ಬಿಜೆಪಿಯ ಭದ್ರ ಕೋಟೆ ಎಂದೇ ಭಾವಿಸಲಾಗಿತ್ತು. ಅಲ್ಲಿ ಮತದಾರರು ಮಿಥ್ಯೆಯನ್ನು ಭಗ್ನಗೊಳಿಸಿದ್ದಾರೆ. ಹಿಂದೆ ಶ್ರೀರಾಮುಲು ಗೆದ್ದಿದ್ದ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎನ್.ವೈ. ಗೋಪಾಲಕೃಷ್ಣರ ಎದುರು ಬಿಜೆಪಿಯ ಓಬಳೇಶ್ 33,104 ಅಂತರದಿಂದ ಸೋಲನ್ನಪ್ಪಿದ್ದಾರೆ, ಗಣಿ ಆಧಿಪತ್ಯಕ್ಕೆ ಸವಾಲು ಹಾಕಿದ್ದಾರೆ, ಅವರ ದಿವಾಳಿತನವನ್ನು ಬಯಲುಗೊಳಿಸಿದ್ದಾರೆ.

ಇನ್ನೊಂದು ಕ್ಷೇತ್ರ ಚಿಕ್ಕೋಡಿ–ಸದಲಗಾದಲ್ಲಿ ಮಾಜಿ ಸಚಿವ, ಸಂಸದ ಪ್ರಕಾಸ ಹುಕ್ಕೇರಿಯವರ ಪುತ್ರ ಗಣೇಶ ಹುಕ್ಕೇರಿ 31820 ಮತಗಳ ಅಂತರದಿಂದ ಗೆದ್ದಿದ್ದಾರೆ. ಆದರೆ ಹಿಂದಿನಂತಹ ಅಂತರವನ್ನು ಕಾಯ್ದುಕೊಳ್ಳಲು ಆಗಿಲ್ಲ ಎಂಬುದೂ ಗಮನಾರ್ಹ.

ಹೀಗೆ ರಾಜ್ಯದಲ್ಲಿ ಮೂರರಲ್ಲಿ ಎರಡನ್ನು ಕಾಂಗ್ರೆಸ್ ಪಡೆದಿದೆ. ಬಿಜೆಪಿಯಿಂದ ಒಂದನ್ನು ಕಿತ್ತುಕೊಂಡಿದೆ. ಶಿಕಾರಪುರದಂತಲ್ಲಿ ಜೆಡಿ ಎಸ್ ನ ಸಕ್ರಿಯ ಬೆಂಬಲವೂ ಕಾಂಗ್ರೆಸ್‌ಗೆ ಹೆಚ್ಚು ಮತ ಪಡೆಯಲು ನೆರವಾಗಿದೆ. ಹಾಗೆಯೇ ಲೋಕಸಭಾ ಚುನಾವಣಾ ಫಲಿತಾಂಶದಿಂದ ಎಚ್ಚೆತ್ತ ಜೆಡಿಯು ವಿನ ಶರದ್, ಆರ್‌ಜೆಡಿಯ ಲಲ್ಲೂ ಮತ್ತು ಕಾಂಗ್ರೆಸ್ ನ ಮೈತ್ರಿಯ ಒಗ್ಗಟ್ಟು ಬಿಹಾರದಂತಹ ಕಡೆ ಬಿಜೆಪಿಯನ್ನು ಎದುರಿಸಲು ಸಾಧ್ಯವಾಗಿದೆ. 10 ಕ್ಷೇತ್ರಗಳಲ್ಲಿ 6ನ್ನು ಅವು ಗೆದ್ದಿವೆ. ಬಾಕಾ ಕ್ಷೇತದಲ್ಲಿ ಸೋತಿದ್ದು711 ಮತಗಳಿಂದ.

ಬಿಜೆಪಿಗೆ ಏಟು

ಈ ಎಲ್ಲಾ ಫಲಿತಾಂಶಗಳು ಹಾರಾಡುತ್ತಿದ್ದ ಬಿಜೆಪಿ ಬಾಯಿ ಮುಚ್ಚಿಕೊಳ್ಳುವಂತೆ ಮಾಡಿವೆ. 'ಮೋದಿಯ ಅಲೆಯನ್ನೇ ನಂಬಿ ಕೂಡದಿರಿ, ನಿಮ್ಮ ಕೆಲಸಗಳತ್ತ ಗಮನ ಕೊಡಿ' ಎಂದು ಕೇಂದ್ರ ಸಚಿವ ನಿತೀನ್ ಗಡ್ಕರಿ ಹೇಳಿರುವುದು ಇಂತಹ ಹಿನ್ನೆಲೆಯಲ್ಲೇ ಇರಬೇಕು. ಲೋಕಸಬಾ ಚುನಾವಣೆ ಮತ್ತು ರಾಜ್ಯಗಳ ರಾಜಕೀಯ ಸಂದರ್ಭಗಳು ಭಿನ್ನವಾಗಿರುತ್ತವೆ ಎಂಬುದು ನಿಜವಾದರೂ ಕರ್ನಾಟಕದಲ್ಲಿ ಮತ್ತು ಬಿಹಾರದಲ್ಲಿ ಆ ಚುನಾವಣೆಗಳ ಬಳಿಕ ತಮ್ಮದೇ ಮೇಲುಗೈ ಎಂದು ಆಕ್ರಮಣಕಾರಿಯಾಗಿ ವರ್ತಿಸುತ್ತಿದ್ದ ಬಿಜೆಪಿಗೆ ಜನ ಕೊಟ್ಟ ತಿರಸ್ಕಾರದ ಸಾಂಕೇತಿಕ ಏಟು ಎನ್ನುವುದನ್ನು ನಿರ್ಲಕ್ಷಿಸಲಾಗದು. ಹಾಗೆಯೇ ಬಿಜೆಪಿ ನಾಯಕರು ಅವಲೋಕನದ ಹೆಸರಿನಲ್ಲಿ ಈ ಹಿನ್ನಡೆಗೆ ಮಾಡಿಕೊಳ್ಳಲು ಒಂದು ಕುಂಟು ನೆಪ ಹುಡುಕಲು ದೆಹಲಿಯಲ್ಲಿ ಬೈಠಕ್ ಕುಳಿತಿದ್ದಾರೆ.

ಹೆಚ್ಚಲಿರುವ ಒತ್ತಡಗಳು

ರಾಜ್ಯದಲ್ಲಿ ಹಲವಾರು ಗುಂಪುಗಳಾಗಿ, ಅಧಿಕಾರದ ವ್ಯಸನದ ಅತೃಪ್ತಿಯಿಂದ ಬಳುತ್ತಿದ್ದ ಕಾಂಗ್ರೆಸ್ ಒಳಗೆ ಒಗ್ಗಟ್ಟು ಮೂಡಿದ್ದು ಫಲಿತಾಂಶ ಉತ್ತಮವಾಗಲು ಪರಿಣಾಮ ಬೀರಿದೆ. ಈ ಫಲಿತಾಂಶವನ್ನು ಕಾಂಗ್ರೆಸ್ ಪಕ್ಷ ಮತ್ತು ಅದರ ನಾಯಕರು ತಮ್ಮ ಸಾಧನೆಗಳ ಸರಮಾಲೆಗೆ ಪೋಣಿಸಿಕೊಳ್ಳಲು ತೊಡಗಿದ್ದಾರೆ. ಹಾಗೆ ಹೇಳಿಕೊಂಡರೆ ಸಿದ್ಧರಾಮಯ್ಯನವರು ಮುಖ್ಯಮಂತ್ರಿಯಾಗಿ ಇನ್ನೊಂದಿಷ್ಟು ತಿಂಗಳು ಮುಂದುವರಿಯಬಹುದು, ಪರಮೇಶ್ವರರಂಥವರು ಉಪ ಮುಖ್ಯಮಂತ್ರಿ ಗದ್ದುಗೆಗೆ ಕ್ಲೇಮು ಹಾಕಬಹುದು, ಡಿ.ಕೆ.ಶಿವಕುಮಾರ್ ತನ್ನ ಸಾಮರ್ಥ್ಯ ಏನೆಂದು ತೋರಿಸಿ ಮುಂದೆ ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹನೆಷ್ಟು ಎಂದೂ ಹೈಕಮಂಡ್‌ಗೆ ವರದಿ ನೀಡಬಹುದು. ಆದರೆ ಜನ ಲೋಕಸಭೆಯ ರಾಜಕಾರಣಕ್ಕಿಂತ ರಾಜ್ಯದಲ್ಲಿನ ಬೆಳವಣಿಗೆಗೆ ಒತ್ತು ನೀಡಿದ್ದಾರೆ.

ಈ ಫಲಿತಾಂಶವು ಇನ್ನು ಸಿದ್ಧರಾಮಯ್ಯನವರು ಸರಾಗವಾಗಿ ಆಡಳಿತ ನಡೆಸಲು ಶಕ್ತಿ ತುಂಬಿದೆ, ಚುರುಕಿನಿಂದ ಕೆಲಸ ಮಾಡಬಹುದು ಎಂಬಂತಹ ಮಾತುಗಳು ಕೇಳಿಬಂದಿವೆ. ಆದರೆ ಅದು ಸುಲಭವೇನಲ್ಲ. ಈ ಫಲಿತಾಂಶವು ಸಿದ್ಧರಾಮಯ್ಯನವರಿಗೆ ಮತ್ತು ಕಾಂಗ್ರೆಸ್

ಪುಟ 14 ಕ್ಕೆ

ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣ



ನುಡಿಯಲ್ಲಿ ಒಂದು ದಿಕ್ಕು –ನಡೆಯಲ್ಲಿ ವಿರುದ್ಧ ದಿಕ್ಕು

ಪ್ರಧಾನ ಮಂತ್ರಿಗಳು ಇನ್ನೂ ಚುನಾವಣಾ ಭಾಷಣಗಳ ಗುಂಗಿನಲ್ಲಿಯೇ ಇದ್ದಾರೆ, ಅದರಿಂದ ಹೊರಬಂದು ತಾನೀಗ ಭಾರತದ ಪ್ರಧಾನ ಮಂತ್ರಿ ಎಂಬುದನ್ನು ಅವರಿನ್ನೂ ರೂಢಿಸಿಕೊಂಡಿಲ್ಲ–ಇದನ್ನು ಅವರ ಸ್ವಾತಂತ್ರ್ಯ ದಿನದ ಭಾಷಣ ಪ್ರಕಟಪಡಿಸಿದೆ. ಮಾತಿನ ಸಮಯ ಮುಗಿದು ಹೋಗಿದೆ ಎಂದು ಅವರಿಗೆ ನಮ್ರವಾಗಿ ಹೇಳಬೇಕಾಗಿದೆ. ಭಾರತ ಸರಕಾರದ ಮುಖ್ಯಸ್ಥರಾಗಿ ಅವರೀಗ ನುಡಿದಂತೆ ನಡೆಯಬೇಕಾದ ಸಮಯ. ಅವರ ನುಡಿಗಳ ಅಬ್ಬರ ಸಾಗಿದೆ, ಆದರೆ ನಡೆ ಮಾತ್ರ ವಿರುದ್ಧ ದಿಕ್ಕಿನಲ್ಲಿ ಆರಂಭವಾಗಿದೆ.

ಸೀತಾರಾಮ್ ಯೆಚೂರಿ

ಭಾರತದ ಸ್ವಾತಂತ್ರ್ಯ ದಿನದಂದು ಕೆಂಪು ಕೋಟೆಯ ಮೇಲಿಂದ ದೇಶದ ಹೊಸ ಪ್ರಧಾನ ಮಂತ್ರಿಗಳ ಮೊದಲ ಭಾಷಣ ಆರೆಸ್ಸೆಸ್/ಬಿಜೆಪಿಯ ಎಂದಿನ ತುತ್ತೂರಿಗಳ ಮೆಚ್ಚುಗೆಗಂತೂ ಪಾತ್ರವಾಗಿದೆ, ಹೊಸದಾಗಿ ಅವರ ಬೆಂಬಲಿಗರಾಗಿ 'ಪರಿವರ್ತನೆ'ಗೊಂಡಿರುವವರು ಮತ್ತು 'ಪರಿವರ್ತನೆ'ಗೊಳ್ಳುತ್ತಿರುವವರಿಂದಲೂ ವ್ಯಾಪಕ ಪ್ರಶಂಸೆಯನ್ನೂ ಗಿಟ್ಟಿಸಿಕೊಂಡಿದೆ. ಇಂತಹ 'ಪರಿವರ್ತನೆ' ಕಂಡವರಲ್ಲಿ ಕೆಲವರಂತೂ ಇತ್ತೀಚಿನ ವರೆಗೆ ಜಾತ್ಯಾತೀತತೆಯ ಮುಖವಾಡ ಧರಿಸಿದ್ದವರು, ಈಗ ಅಧಿಕೃತ ಕೃಪಾಪೋಷಣೆಗಾಗಿಯೋ, ಅಧಿಕಾರದ ಸ್ಥಾನಗಳಿಗಾಗಿಯೋ ಏನು ಬೇಕಾದರೂ ಹೇಳಲು ಹಿಂಜರಿಯದವರು.

ಸಹಜವಾಗಿಯೇ, ಒಂದು ಸಾರ್ವತ್ರಿಕ ಚುನಾವಣೆಯ ನಂತರ ಇಂತಹ ಸಂದರ್ಭದಲ್ಲಿ ಪರಂಪರೆಯಂತೆ ದೇಶವನ್ನುದ್ದೇಶಿಸಿ ಪ್ರಧಾನ ಮಂತ್ರಿಗಳು ಮಾಡುವ ಭಾಷಣದ ಬಗ್ಗೆ ಕುತೂಹಲ, ನಿರೀಕ್ಷೆಗಳಿರುತ್ತವೆ. ಸಹಜ ಏಕೆಂದರೆ, ಸ್ವಾತಂತ್ರ್ಯ ದಿನದಂದು, ಸಾಮಾನ್ಯವಾಗಿ, ಪ್ರಧಾನ ಮಂತ್ರಿಗಳು ವಸಾಹತುಶಾಹಿ ನೊಗದಿಂದ ಸ್ವಾತಂತ್ರ್ಯ–ಕ್ಕೆ ಸಂಬಂಧಪಟ್ಟಂತೆ ನಮ್ಮ ಗುರಿಗಳು ಮತ್ತು ಆಕಾಂಕ್ಷೆಗಳನ್ನು ಈಡೇರಿಸುವಲ್ಲಿ ನಾವೆಷ್ಟು ದೂರ ನಡೆದು ಬಂದಿದ್ದೇವೆ, ಅದಕ್ಕೂ ಮುಖ್ಯವಾಗಿ, ಉಳಿದ ದಾರಿಯಲ್ಲಿ ಹೇಗೆ ಸಾಗಬೇಕೆಂದಿದ್ದೇವೆ ಎಂಬುದರ ಲೆಕ್ಕಾಚಾರವನ್ನು ಪ್ರಸ್ತುತ ಪಡಿಸುತ್ತಾರೆ. ಸ್ವಾತಂತ್ರ್ಯ ಎಂಬುದು ಬಂದದ್ದು ಆಹಾರ ಭದ್ರತೆ, ಎಲ್ಲರಿಗೂ ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗದ ನಿರೀಕ್ಷೆಗಳೊಂದಿಗೆಯೇ ತಾನೇ? ಎಲ್ಲರಿಗೂ ಸಮೃದ್ಧಿಯ ಗುರಿಯನ್ನು ಈಡೇರಿಸಿಕೊಳ್ಳುತ್ತೇವೆ, ಮತ್ತು ನಾವು, ಜನತೆ, ನಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳುತ್ತೇವೆ ಎಂಬ ನಿರೀಕ್ಷೆಗಳೊಂದಿಗೆ, ಸಂಕ್ಷಿಪ್ತವಾಗಿ, ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರ ಸಂವಿಧಾನದ ಬುನಾದಿಯ ಮೇಲೆ ಒಂದು ಉತ್ತಮ ಭಾರತವನ್ನು ನಿರ್ಮಿಸುವ ಸಾಧ್ಯತೆಯೊಂದಿಗೆ. ಅಮರ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್ ಸೇರಿದಂತೆ ಅದೆಷ್ಟೋ ಲಕ್ಷ ಹತಾತ್ಮರು ಈ ರಾಜಕೀಯ ಸ್ವಾತಂತ್ರ್ಯ ನಮ್ಮ ಜನತೆಗೆ ನಿಜವಾದ ಆರ್ಥಿಕ ಸ್ವಾತಂತ್ರ್ಯವಾಗಿ ಪರಿವರ್ತನೆಗೊಳ್ಳುವ ವರೆಗೆ ಮುಂದುವರೆಯುತ್ತದೆ ಆಕಾಂಕ್ಷೆಯೊಂದಿಗೆ ಬಲಿದಾನ ಅರ್ಪಿಸಿದರು. ಆದ್ದರಿಂದ, ಈದಾರಿಯಲ್ಲಿ ಎಷ್ಟು ದೂರ ಬಂದಿದ್ದೇವೆ, ಈ ಆಕಾಂಕ್ಷೆಗಳ ಈಡೇರಿಕೆಯತ್ತ ಹೇಗೆ ಮುಂದುವರೆಯುತ್ತೇವೆ ಎಂಬುದು ಈ ದಿನದಂದು ನಮ್ಮ ಕೇಂದ್ರ ಪ್ರಶ್ನೆಯಾಗಿರುತ್ತದೆ. ಈ ಕಾರಣ–ಕ್ಕಾಗಿಯೇ ಪ್ರತಿ ವರ್ಷ ಕೆಂಪುಕೋಟೆಯಿಂದ ಪ್ರಧಾನ ಮಂತ್ರಿಗಳ ಭಾಷಣದ ಬಗ್ಗೆ ಬಹಳ ನಿರೀಕ್ಷೆಯಿಟ್ಟುಕೊಳ್ಳಲಾಗುತ್ತದೆ.

ಕೆಂಪು ಕೋಟೆಯನ್ನು ಆರಿಸಿಕೊಂಡದ್ದೇಕೆ?

ಸ್ವಾತಂತ್ರ್ಯ ದಿನದಂದು ಪ್ರಧಾನ ಮಂತ್ರಿಗಳ ಭಾಷಣಕ್ಕೆ ಕೆಂಪು ಕೋಟೆಯನ್ನು ಏಕೆ ಆರಿಸಿಕೊಳ್ಳಲಾಯಿತು ಎಂಬುದು ಬಹಳ ಜನಕ್ಕೆ ಮನವರಿಕೆಯಾಗಿಲ್ಲ. ಅಂದು ಬ್ರಿಟಿಶರ ಯೂನಿಯನ್ ಜಾಕ್ ಬಾವುಟವನ್ನು ಇಳಿಸಿ, ನಮ್ಮ ತ್ರಿವರ್ಣ ಬಾವುಟವನ್ನು ಏರಿಸಿ ನಮ್ಮ ಜನತೆಗೆ ಮತ್ತು ಜಗತ್ತಿಗೆ ಭಾರತದ ಸ್ವಾತಂತ್ರ್ಯ ಅರುಣೋದಯವನ್ನು ಇಲ್ಲಿಂದಲೇ ಸಾರಿದ್ದೇ–ಕೆ? ಎಷ್ಟೆಂದರೂ, ಕೆಂಪು ಕೋಟೆ ಮೊಗಲ್ ಸಾಮ್ರಾಜ್ಯದ ಸಂಕೇತ, ಆರೆಸ್ಸೆಸ್‌ನವರು 'ಬಾಬರ್ ಕೀ ಔಲಾದ್'(ಬಾಬರನ ಸಂತಾನ) ಎಂದು ಹೇಳುವವರು ಕಟ್ಟಿದ ಕೋಟೆ. ಈ ಆರೆಸ್ಸೆಸ್/ಬಿಜೆಪಿ ಈ ಬಾಬರನ ಸಂತಾನದಿಂದ ಮುಕ್ತಿಯೇ ನಿಜವಾದ ಸ್ವಾತಂತ್ರ್ಯ ಎಂದು ಹೇಳುತ್ತಲೇ ಬಂದಿರುವವರು.

ನಮ್ಮ ಸ್ವಾತಂತ್ರ್ಯ ಹೋರಾಟದ ಮುಖಂಡರು, ಸ್ವತಂತ್ರ ಭಾರತದ ಸರಕಾರವನ್ನು ರಚಿಸಿದವರು ಕೆಂಪುಕೋಟೆಯನ್ನು ಆರಿಸಿಕೊಳ್ಳಲು ಕಾರಣ 1857ರಲ್ಲಿ ಭಾರತದ ಸ್ವಾತಂತ್ರ್ಯದ ಮೊದಲ ಘೋಷಣೆಯನ್ನು ಓದಿದ್ದು ಈ ಕೆಂಪು ಕೋಟೆಯಿಂದಲೇ. ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪರಮ ಹಿಂದೂ ದೈವಭಕ್ತೆಯಾಗಿದ್ದ ಝಾಂಸಿ ರಾಣಿ ಲಕ್ಷ್ಮೀಬಾಯಿ ಮತ್ತು ತಾಂತ್ಯಾ ಟೋಪೆಯಂತಹ ಇತರ ಮುಖಂಡರು ಮೊಗಲ್ ಸಾಮ್ರಾಟ ಬಹದ್ದೂರ್ ಶಾಹ ಜಫರ್‌ನನ್ನು ಬ್ರಿಟಿಶರಿಂದ ಸ್ವತಂತ್ರವಾದ ಭಾರತದ ಸಾರ್ವಭೌಮ ಎಂದು ಸಾರಿದರು. ವ್ಯಂಗ್ಯವೆಂದರೆ ಆ ಬಹಾದ್ದೂರ್ ಶಾಹ ಕೂಡ ಒಂದು 'ಬಾಬರನ ಸಂತಾನ'!

ಹತ್ತು ವರ್ಷಗಳ ಆಳ್ವಿಕೆಯ ಬಯಕೆ!

ಇಂತಹ ಸಂಕೇತಗಳ ಶಕ್ತಿಗೆ ಜಗ್ಗದ ಪ್ರಧಾನ ಮಂತ್ರಿ ಮೋದಿ ದೇಶದಲ್ಲಿ ಕೋಮುವಾದಿ ಮತ್ತು ಜಾತಿವಾದಿ ಹಿಂಸಾಚಾರದ ಮೇಲೆ ಹತ್ತು ವರ್ಷಗಳ ಕಾಲ ತಾತ್ಕಾಲಿಕ ನಿಷೇಧ ಇರಲಿ ಎಂದು ಕರೆ ನೀಡಿದರು. ಜಾತ್ಯಾತೀತ ಪ್ರಜಾಸತ್ತಾತ್ಮಕ ಆಧುನಿಕ ಭಾರತೀಯ ಗಣತಂತ್ರದಲ್ಲಿ ಇಂತಹ ಹಿಂಸಾಚಾರಕ್ಕೆ ಸ್ಥಾನವೇ ಇರಬಾರದು . ಅದನ್ನು ಹೇಳುವ ಬದಲು ಭಾರತದ ಪ್ರಧಾನ ಮಂತ್ರಿಗಳು ಹತ್ತು ವರ್ಷಗಳ ಕಾಲ ನಿಷೇಧದ ಕರೆ ನೀಡಿರುವುದು ಆತ ಒಂದು ದಶಕದ ಕಾಲ ಪ್ರಧಾನ ಮಂತ್ರಿಯಾಗಿರ ಬಯಸುತ್ತಾರೆ ಮತ್ತು ಆ ಅವಧಿಯನ್ನು ಯಾವುದೇ ಕೋಮು ಘರ್ಷಣೆ ಹಾಳುಗೆಡವಬಾರದು ಎಂಬುದು ಆತನ ಬಯಕೆ–ಇದರಲ್ಲಿ ಏನೇನೂ ಸಂದೇಹವಿಲ್ಲ. ಹೌದು, ಆನಂತರ ಕೋಮುವಾದಿ ಹಿಂಸಾಚಾರಕ್ಕೆ ಉತ್ತೇಜನೆ ನೀಡಬಹುದು, ಪೋಷಣೆ ನೀಡಬಹುದು, ಆಮೂಲಕ ಆರೆಸ್ಸೆಸ್/ಬಿಜೆಪಿ ಮತ್ತೆ ಅಧಿಕಾರಕ್ಕೆ ಮರಳಲು, ಕೇಂದ್ರ ಸರಕಾರದ ಲಗಾಮನ್ನು ಮತ್ತೆ ವಶಪಡಿಸಿಕೊಳ್ಳಲು ಸಾಧ್ಯವಾಗಬೇಕು!


ಆದರೆ ಇದು ಕೂಡ ಕೇವಲ ಸಾರ್ವಜನಿಕ ತೋ ರಿಕೆಗೆ ಮಾತ್ರ, ಅದರಲ್ಲಿ ಎಳ್ಳಷ್ಟೂ ಪ್ರಾಮಾಣಿಕತೆ ಇಲ್ಲ ಎಂಬುದನ್ನು ಸ್ವಾತಂತ್ರ್ಯ ದಿನದ ಕೆಲವೇ ದಿನಗಳ ಮೊದಲು (ಆಗಸ್ಟ್ 10 ರಂದು ಕಟಕ್‌ನಲ್ಲಿ) ಆರೆಸ್ಸೆಸ್ ಮುಖ್ಯಸ್ಥರು ಸಾರಿದರು. ಇಂಗ್ಲೆಂಡ್ ವಾಸಿಗಳು ಇಂಗ್ಲಿಷರು, ಜರ್ಮನಿಯ ನಿವಾಸಿಗಳು ಜರ್ಮನರು, ಹೀಗಿರುವಾಗ ಹಿಂದುಸ್ತಾನದ ವಾಸಿಗಳು ಹಿಂದುಗಳು ಏಕಲ್ಲ ಎಂದು ಅವರು ಕೇಳಿದರು. "ಹಿಂದುತ್ವ ಭಾರತೀಯರ ಸಾಂಸ್ಕೃತಿಕ ಗುರುತು, ಮತ್ತು ದೇಶದ ಈಗಿನ ನಿವಾಸಿಗಳು ಈ ಮಹಾನ್ ಸಂಸ್ಕೃತಿಯ ಸಂತತಿಯವರು" ಎಂದು ಮುಂದುವರೆದು ಅವರು ಹೇಳಿದರು. ಆಮೂಲಕ ಬೇರೆ ಧರ್ಮದ ಅನುಯಾಯಿಗಳು ಮತ್ತು ನಾಸ್ತಿಕರು ಈ ದೇಶದ ನಾಗರಿಕರೇ ಆಗುವಂತಿಲ್ಲ.

ಸಂವಿಧಾನ ಸಭೆಯಲ್ಲಿ ಈ ಪ್ರಶ್ನೆಯ ಮೇಲೆ ವಿವರವಾದ ಚರ್ಚೆ ನಡೆದು ಅದನ್ನು ತಿರಸ್ಕರಿಸಿದ ನಂತರವೇ ಒಂದು ಜಾತ್ಯಾತೀತ ಪ್ರಜಾಸತ್ತಾತ್ಮಕ ಗಣತಂತ್ರದ ಬುನಾದಿಯನ್ನು ಮತ್ತು ಸ್ವರೂಪವನ್ನು ರೂಪಿಸಲಾಯಿತು.ಕೆಲವರನ್ನು ಹೊರಗಿಡುವ ಇಂತಹ ವಿಧಗಳನ್ನು ತಂದಿಡಬಾರದೆಂದೇ ನಮ್ಮ ಸಂವಿಧಾನದ ಮೊದಲ ಕಲಮಿನಲ್ಲಿ "ಇಂಡಿಯಾ, ಅಂದರೆ ಭಾರತ, ರಾಜ್ಯಗಳ ಒಂದು ಸಂಘ" ಎಂದು ನಿರೂಪಿಸಿರುವುದು. ಹಿಂದುಸ್ತಾನ ಅಥವ ಇಂತಹ ಹಲವು ಪದಗಳ ಬದಲು 'ಭಾರತ' ಎಂಬ ಪದವನ್ನು ಆರಿಸಿದ್ದು ದೇಶದ ಕುರಿತು ಎಲ್ಲರನ್ನೂ ಒಳಗೊಳ್ಳುವ ವಿಚಾರ ಇರಬೇಕೆಂಬ ಕಾರಣಕ್ಕಾಗಿಯೇ. ಇದರಲ್ಲೇ ಜಾತಿ, ಪಂಥ, ಲಿಂಗ ಏನೇ ಇರಲಿ, ಎಲ್ಲ ನಾಗರಿಕರು ಸಮಾನರು ಎಂಬ ಭಾವ ಅಡಕವಾಗಿದೆ. ಭಾರತ ಒಂದು ಶ್ರೀಮಂತ ವೈವಿಧ್ಯತೆ ಇರುವ ಬಹುಳತೆಯ ದೇಶ ಎಂಬ ಈ ವಿಚಾರಕ್ಕೆ ಸದಾ ವಿರುದ್ಧವಾಗಿಯೇ ನಿಂತಿರುವ ಆರೆಸ್ಸೆಸ್ ಇಂದು ನಮ್ಮ ದೇಶವನ್ನು ವಿಶಿಷ್ಟವಾಗಿಸಿದ ಈ ಚಿತ್ತಾರದ ಚೈತನ್ಯವನ್ನು ನಿರಾಕರಿಸುವ ಪ್ರಯತ್ನದಲ್ಲಿದೆ.

ಜಾತ್ಯಾತೀತ ಪ್ರಜಾಸತ್ತಾತ್ಮಕ ಭಾರತೀಯ ಗಣತಂತ್ರವನ್ನು ಒಂದು ಉನ್ಮತ್ತ ಅಸಹಿಷ್ಣು ಫ್ಯಾಸಿಸ್ಟ್ ಮಾದರಿಯ ಆರೆಸ್ಸೆಸ್ ಕಣ್ಣೋಟದ 'ಹಿಂದೂರಾಷ್ಟ್ರ"ವಾಗಿ ಪರಿವರ್ತಿಸುವ ಸೈದ್ಧಾಂತಿಕ ಯೋಜನೆಯ ಭಾಗವಾಗಿ ಇಂತಹ ಸೈದ್ಧಾಂತಿಕ ಪ್ರಚಾರದೊಂದಿಗೇ, ಕೋಮುವಾದಿ ಸೆಳೆತಗಳು ತೀವ್ರವಾಗಿ ವ್ಯಾಪಿಸುವಂತೆ ಮಾಡುವ ಪ್ರಯತ್ನಗಳೂ ನಡೆಯುತ್ತವೆ. ಇದು ದೇಶದಲ್ಲಿ ಹಲವೆಡೆಗಳಲ್ಲಿ, ವಿಶೇಷವಾಗಿ ಸದ್ಯದಲ್ಲೇ ಚುನಾವಣೆಗಳು ನಡೆಯಬೇಕಾದ ಸ್ಥಳಗಳಲ್ಲಿ ಕೋಮು ಗಲಭೆಗಳಿಗೆ ಹಾದಿ ಮಾಡಿಕೊಡುತ್ತಿದೆ. ಪ್ರಧಾನ ಮಂತ್ರಿಗಳ ಸ್ವಾತಂತ್ರ್ಯ ದಿನದ ಭಾಷಣ ಒಂದು ರೀತಿಯಲ್ಲಿ ಆರೆಸ್ಸೆಸ್ ಅತ್ಯಂತ ನಗ್ನ 'ವೋಟ್ ಬ್ಯಾಂಕ್ ರಾಜಕೀಯ'ವನ್ನು, ಅಂದರೆ ಬಹುಸಂಖ್ಯಾತ ಹಿಂದೂಗಳ ವೋಟ್ ಬ್ಯಾಂಕಿನ ಕೋಮುವಾದಿ ಕ್ರೋಢೀಕರಣವನ್ನು ಅನುಸರಿಸುವುದಕ್ಕೆ ಪುಷ್ಟಿ ಕೊಡುತ್ತದೆ.

ಇಂತಹ ವಿಡಂಬನೆ ಮಾತ್ರವೇ ಅಲ್ಲ, ಮೇಲೆ ಹೇಳಿದಂತೆ, ಸ್ವಾತಂತ್ರ್ಯ ದಿನದ ಭಾಷಣದ ವಿಷಯವಾಗಿರಬೇಕಾಗಿದ್ದ ಕೇಂದ್ರ ಪ್ರಶ್ನೆಯ ಮೇಲೆ ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಯಾವುದೇ ಕಣ್ಣೋಟ ಇರದಿರುವುದು ಅತ್ಯಂತ ನಿರಾಶಾದಾಯಕ ಸಂಗತಿ. ಅವರು ಸ್ವಚ್ಛತೆಯ, ನೈರ್ಮಲ್ಯದ ಗುಣಗಾನ ನಡೆಸಿದರು, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಕಟ್ಟುವ ಅಗತ್ಯದ ಬಗ್ಗೆ ಮಾತಾಡಿದರು, ಮನೆಯಿಂದ ಹೊರ

ಪ್ರಧಾನ ಮಂತ್ರಿ ಮೋದಿ ದೇಶದಲ್ಲಿ ಕೋಮುವಾದಿ ಮತ್ತು ಜಾತಿವಾದಿ ಹಿಂಸಾಚಾರದ ಮೇಲೆ ಹತ್ತು ವರ್ಷಗಳ ಕಾಲ ತಾತ್ಕಾಲಿಕ ನಿಷೇಧ ಇರಲಿ ಎಂದು ಕರೆ ನೀಡಿದರು. ಜಾತ್ಯಾತೀತ ಪ್ರಜಾಸತ್ತಾತ್ಮಕ ಆಧುನಿಕ ಭಾರತೀಯ ಗಣತಂತ್ರದಲ್ಲಿ ಇಂತಹ ಹಿಂಸಾಚಾರಕ್ಕೆ ಸ್ಥಾನವೇ ಇರಬಾರದು. ಅದನ್ನು ಹೇಳುವ ಬದಲು ಭಾರತದ ಪ್ರಧಾನ ಮಂತ್ರಿಗಳು ಹತ್ತು ವರ್ಷಗಳ ಕಾಲ ನಿಷೇಧದ ಕರೆ ನೀಡಿದ್ದಾರೆ. ಅಂದರೆ ಆತ ಒಂದು ದಶಕದ ಕಾಲ ಪ್ರಧಾನ ಮಂತ್ರಿಯಾಗಿರ ಬಯಸುತ್ತಾರೆ ಮತ್ತು ಆ ಅವಧಿಯನ್ನು ಯಾವುದೇ ಕೋಮು ಘರ್ಷಣೆ ಹಾಳುಗೆಡವ ಬಾರದು ಎಂಬುದು ಆತನ ಬಯಕೆ ಎಂಬುದರಲ್ಲಿ ಏನೇನೂ ಸಂದೇಹವಿಲ್ಲ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್,ವಿಜಯ ಕರ್ನಾಟಕ

ಪ್ರಧಾನ ಮಂತ್ರಿಗಳು ಒಂದೆರಡು ಹೊಸ ಸ್ಕೀಮುಗಳನ್ನು ಪ್ರಕಟಿಸಿದರು. 'ಜನಧನ ಯೋಜನೆ' 15 ಕೋಟಿ ಭಾರತೀಯರಿಗೆ ಬ್ಯಾಂಕ್ ಖಾತೆಗಳನ್ನು ಒದಗಿಸುತ್ತದೆ, ಇದರಲ್ಲಿ 5000ರೂ. ವರೆಗೆ ಓವರ್‌ಡ್ರಾಫ್ಟ್ ಸೌಲಭ್ಯ, ಒಂದು ಲಕ್ಷ ರೂ. ವಿಮಾ ಸೌಲಭ್ಯವನ್ನೂ ಒದಗಿಸಲಾಗುವುದಂತೆ. ಯಾವ ಬ್ಯಾಂಕ್‌ಗಳು ಇಂತಹ ಖಾತೆಗಳನ್ನು ಒದಗಿಸುತ್ತವೆ? ಯಾವ ವಿಮಾಕಂಪನಿ ಇಂತಹ ವಿಮಾಪಾಲಿಸಿ ಒದಗಿಸುತ್ತದೆ? ಸಹಜವಾಗಿಯೇ ಕೇವಲ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ವಿಮಾಕಂಪನಿಗಳು ಮಾತ್ರವೇ! ಆದರೆ ಈ ಪ್ರಕಟಣೆಗಳು ಎಷ್ಟೊಂದು ಅಪ್ರಾಮಾಣಿಕವಾಗಿವೆ ಎಂಬುದು ಈ ಸರಕಾರ ಮೊದಲ ಅಧಿವೇಶನದಲ್ಲೇ ವಿಮಾವಲಯದಲ್ಲಿ ಎಫ್‌ಡಿಐಯನ್ನು 26 ಶೇ.ದಿಂದ 49ಶೇ,ಕ್ಕೇ ಏರಿಸುವ ಮಸೂದೆಯನ್ನು ತಂದಿರುವುದರಲ್ಲೇ ಕಾಣುತ್ತದೆ. ರಾಷ್ಟ್ರೀಕೃತ ಬ್ಯಾಂಕ್‌ಗಳಿಗೂ ಇಂತಹುದೇ ಮಸೂದೆ ತರುವ ಯೋಜನೆಯೂ ಈ ಸರಕಾರಕ್ಕೆ ಇದೆ.

ಹೋಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸುವ ತಮ್ಮ ಗಂಡು ಮಕ್ಕಳಿಗೆ ಬುದ್ಧಿವಾದ ಹೇಳಬೇಕು ಎಂದು ಪಾಲಕರಿಗೆ ಕರೆ ನೀಡಿದರು, ಇಷ್ಟು ಮಾಡಿದರೆ ಈ ಅತ್ಯಂತ ಹೇಯ ಲೈಂಗಿಕ ಅಪರಾಧಗಳನ್ನು ತಡೆಯಬಹುದು ಎಂಬಂತೆ! ಇವನ್ನೆಲ್ಲ ಹೊಸದಾಗಿ ಅವರ ಬೆಂಬಲಿಗರಾಗಿ ಪರಿವರ್ತನೆಗೊಂಡವರು, ಎಂತಹ ಮಣ್ಣಿನ ವಾಸನೆ ಸೂಸುವ ಮಾತುಗಳನ್ನಾಡಿದ್ದಾರೆ ಎಂದು ಬಹುವಾಗಿ ಮೆಚ್ಚಿಕೊಂಡಿದ್ದಾರೆ, ಆದರೆ ಇದು, ಈ ಮೇಲೆ ಹೇಳಿದಂತೆ ಸ್ವಾತಂತ್ರ್ಯ ದಿನದಂದು ಪ್ರಧಾನ ಮಂತ್ರಿಗಳಿಂದ ನಿರೀಕ್ಷಿಸುವ ಕಣ್ಣೋಟದ ಭಾಗವಾಗಲು ಸಾಧ್ಯವಿಲ್ಲ.

'ಜನಧನ ಯೋಜನೆ' ಮತ್ತು ಎಫ್‌ಡಿಐ

ನಿಜ, ಪ್ರಧಾನ ಮಂತ್ರಿಗಳು ಒಂದೆರಡು ಹೊಸ ಸ್ಕೀಮುಗಳನ್ನು ಪ್ರಕಟಿಸಿದರು. 'ಜನಧನ ಯೋಜನೆ' 15 ಕೋಟಿ ಭಾರತೀಯರಿಗೆ ಬ್ಯಾಂಕ್ ಖಾತೆಗಳನ್ನು ಒದಗಿಸುತ್ತದೆ, ಇದರಲ್ಲಿ 5000ರೂ. ವರೆಗೆ ಓವರ್‌ಡ್ರಾಫ್ಟ್ ಸೌಲಭ್ಯ, ಒಂದು ಲಕ್ಷ ರೂ. ವಿಮಾ ಸೌಲಭ್ಯವನ್ನೂ ಒದಗಿಸಲಾಗುವುದಂತೆ. ಒಂದು ವೇಳೆ ಈ ಯೋಜನೆ ಈಡೇರಿದರೂ ಯಾವ ಬ್ಯಾಂಕ್‌ಗಳು ಇಂತಹ ಖಾತೆಗಳನ್ನು ಒದಗಿಸುತ್ತವೆ? ಯಾವ ವಿಮಾಕಂಪನಿ ಇಂತಹ ವಿಮಾಪಾಲಿಸಿ ಒದಗಿಸುತ್ತದೆ? ಸಹಜವಾಗಿಯೇ ಕೇವಲ ರಾಷ್ಟ್ರೀಕೃತ ಬ್ಯಾಂಕುಗಳು ಮತ್ತು ವಿಮಾಕಂಪನಿಗಳು ಮಾತ್ರವೇ! ಆದರೆ ಈ ಪ್ರಕಟಣೆಗಳು ಎಷ್ಟೊಂದು ಅಪ್ರಾಮಾಣಿಕವಾಗಿವೆ ಎಂಬುದು ಈ ಸರಕಾರ ಮೊದಲ ಅಧಿವೇಶನದಲ್ಲೇ ವಿಮಾವಲಯದಲ್ಲಿ ಎಫ್‌ಡಿಐಯನ್ನು 26 ಶೇ.ದಿಂದ 49ಶೇ,ಕ್ಕೆ ಏರಿಸುವ ಮಸೂದೆಯನ್ನು ತಂದಿರುವುದರಲ್ಲೇ, ಈ ಮೂಲಕ ಸಾರ್ವಜನಿಕ ವಲಯದ ವಿಮಾಕಂಪನಿಗಳ ಆರೋಗ್ಯವನ್ನು ಕೆಡಿಸಲು ಮುಂದಾಗಿರುವುದರಲ್ಲೇ ಕಾಣುತ್ತದೆ. ರಾಷ್ಟ್ರೀಕೃತ ಬ್ಯಾಂಕ್‌ಗಳನ್ನೂ ಇದೇ ರೀತಿ ಬುಡಮೇಲು ಮಾಡುವ ಇಂತಹುದೇ ಮಸೂದೆ ತರುವ ಯೋಜನೆಯೂ ಈ ಸರಕಾರಕ್ಕೆ ಇದೆ. ಅಷ್ಟೇ ಅಲ್ಲ, ಇದುವರೆಗೆ ಇಂತಹ ಹಲವು ಸ್ಕೀಮುಗಳ ಉಸ್ತುವಾರಿ ನಡೆಸುತ್ತಿರುವ ಯೋಜನಾ ಅಯೋಗವನ್ನೇ ವಿಸರ್ಜಿಸುವುದಾಗಿ ಪ್ರಧಾನ ಮಂತ್ರಿ ಗಳು ಪ್ರಕಟಿಸಿದ್ದಾರೆ.

ಪ್ರಧಾನ ಮಂತ್ರಿಗಳು 'ಸಂಸದ್ ಆದರ್ಶ ಗ್ರಾಮ್ ಯೋಜನಾ' ಕೂಡ ಪ್ರಕಟಿಸಿದ್ದಾರೆ. ಇದರಡಿಯಲ್ಲಿ ಪ್ರತಿಯೊಬ್ಬ ಸಂಸತ್ ಸದಸ್ಯ ತನ್ನ ಚುನಾವಣಾ ಕ್ಷೇತ್ರದಲ್ಲಿ ಒಂದು ಗ್ರಾಮವನ್ನು ಆರಿಸಿಕೊಂಡು ಒಂದು ಆದರ್ಶ ಗ್ರಾಮವನ್ನು ನಿರ್ಮಿಸಲು ಪ್ರತಿವರ್ಷ 'ಸಂಸತ್ ಸದಸ್ಯರ ಸ್ಥಳೀಯ ಪ್ರದೇಶ ಅಭಿವೃದ್ಧಿ ಯೋಜನೆ(ಎಂಪಿಎಲ್‌ಎಡಿಎಸ್)ಯ 5ಕೋಟಿ ರೂ.ಗಳಲ್ಲಿ 2ಕೋಟಿರೂ.ಗಳನ್ನು ಖರ್ಚು ಮಾಡಬೇಕು. ಸದ್ಯದಲ್ಲೇ ಈ ಸ್ಕೀಮಿನ ವಿವರಗಳನ್ನು ಘೋಷಿಸುವುದಾಗಿ ಹೇಳಿದ ಅವರು ಎಂಪಿಗಳ ಆಯ್ಕೆಗೆ ಬಿಟ್ಟಿರುವುದು ಬಹಳ ಕಡಿಮೆ.

'ಮೇಕ್ ಇನ್ ಇಂಡಿಯಾ'

ಮುಂದುವರೆದು ಪ್ರಧಾನ ಮಂತ್ರಿಗಳು ಜಗತ್ತಿನಲ್ಲಿ ಭಾರತ ಒಂದು 'ಮ್ಯಾನುಫ್ಯಾಕ್ಚರಿಂಗ್ ಹಬ್' ಆಗಿ ಮೂಡಿ ಬರಬೇಕು, ಅಂದರೆ ಜಗತ್ತಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುವಲ್ಲಿ ತೊಡಗಿರುವ ಪ್ರದೇಶವಾಗಬೇಕು, ಇಡೀ ಜಗತ್ತು ಈ ವಸ್ತುಗಳನ್ನು ಬಳಸುವಂತಾಗಬೇಕು ಎಂದು ಅವರು ಗುಡುಗಿದರು. ಅವರ ಈ ಮಾತು ಬಂದಿರುವುದು ಇಂಗ್ಲೆಂಡಿನಲ್ಲಿ ಭಾರತೀಯ ಕ್ರಿಕೆಟ್ ತಂಡ ಟೆಸ್ಟ್ ಸರಣಿಯನ್ನು ಕಳಕೊಳ್ಳುತ್ತಿರುವ ಸಂದರ್ಭದಲ್ಲಿ. ಪ್ರಧಾನ ಮಂತ್ರಿಗಳ ಕರೆಯನ್ನು ಗಂಭೀರವಾಗಿ ತೆಗೆದುಕೊಂಡಿರುವವರು ಭಾರತೀಯ ಕ್ರಿಕಟ್ ತಂಡದವರು ಮಾತ್ರ, ರನ್‌ಗಳನ್ನು ಕೇವಲ ಭಾರತದಲ್ಲಿ ಮಾತ್ರವೇ ಮಾಡಲು ಸಾಧ್ಯ ಎಂದು ಅವರು ಹೇಳುವಂತೆ ಕಾಣುತ್ತದೆ ಎಂದು ಯಾ-ರೋ ಒಬ್ಬರು ಟಿಪ್ಪಣಿ ಮಾಡಿದ್ದಾರಂತೆ. ಪ್ರಧಾನ ಮಂತ್ರಿಗಳ ಈ ಆಶಯವೇನೋ ಪ್ರಶಂಸಾರ್ಹ, ಆದರೆ ಪ್ರಸಕ್ತ ಜಾಗತಿಕ ಮತ್ತು ದೇಶೀ ಆರ್ಥಿಕ ಸನ್ನಿವೇಶದಲ್ಲಿ, ಅದರಲ್ಲೂ ಅಲ್ಪಾವಧಿಯಲ್ಲಿ ಖಂಡಿತವಾಗಿಯೂ ಇದು ಕಾರ್ಯಸಾಧ್ಯವಲ್ಲ.

ಪ್ರಧಾನ ಮಂತ್ರಿಗಳು ಇನ್ನೂ ಚುನಾವಣಾ ಭಾಷಣಗಳ ಗುಂಗಿನಲ್ಲಿಯೇ ಇದ್ದಾರೆ, ಅದ-ರಿಂದ ಹೊರಬಂದು ತಾನೀಗ ಭಾರತದ ಪ್ರಧಾನ ಮಂತ್ರಿ ಎಂಬದು ಅವರಿನ್ನೂ ರೂಢಿಸಿಕೊಂಡಿಲ್ಲ ಎಂಬುದನ್ನು ಅವರ ಸ್ವಾತಂತ್ರ್ಯ ದಿನದ ಭಾಷಣ ಪ್ರಕಟಪಡಿಸಿದೆ. ಮಾತಿನ ಸಮಯ ಮುಗಿದು ಹೋಗಿದೆ ಎಂದು ಅವರಿಗೆ ನಮ್ರವಾಗಿ ಹೇಳಬೇಕಾಗಿದೆ. ಭಾರತ ಸರಕಾರದ ಮುಖ್ಯಸ್ಥರಾಗಿ ಅವರೀಗ ನುಡಿದಂತೆ ನಡೆಯಬೇಕಾದ ಸಮಯ. ಅವರ ನುಡಿಗಳ ಅಬ್ಬರ ಸಾಗಿದೆ, ಆದರೆ ನಡೆ ಮಾತ್ರ ವಿರುದ್ಧ ದಿಕ್ಕಿನಲ್ಲಿ ಆರಂಭವಾಗಿದೆ- ವೋಟ್ ಬ್ಯಾಂಕ್ ರಾಜಕೀಯದ ಅತ್ಯಂತ ಹೀನ ಸ್ವರೂಪ, ಕೋಮುವಾದಿ ಧ್ರುವೀಕರಣ ಆರಂಭವಾಗಿದೆ.

ಹೀಗೆ ಭಾರತ 68ನೇ ಸ್ವಾತಂತ್ರ್ಯ ದಿನದ ಸಂದರ್ಭದಲ್ಲಿ ಜಾತ್ಯಾತೀತ, ಪ್ರಜಾಸತ್ತಾತ್ಮಕ, ಬಹುಳತೆಯ, ಶ್ರೀಮಂತ ವೈವಿಧ್ಯತೆಯ, ಭಾರತದ ಚಿತ್ತಾರವನ್ನು ಪ್ರೀತಿಸುವವರು, ಅದನ್ನು ಬಲಪಡಿಸ ಬಯಸುವವರು, ಭಾರತ ಎಂಬ ವಿಚಾರವನ್ನು ಕ್ರೋಡೀಕರಿಸಬೇಕು ಎನ್ನುವವರು ನಮ್ಮ ಗಣತಂತ್ರದ ರಕ್ಷಣೆಯಲ್ಲಿ ಮತ್ತು ನಮ್ಮೆಲ್ಲ ಜನತೆಗೆ ಒಂದು ಉತ್ತಮ ಭಾರತವನ್ನು ಕಟ್ಟಲು ಒಂದುಗೂಡಬೇಕಾಗಿದೆ. ■

ಪ್ರಧಾನ ಮಂತ್ರಿಗಳು ಜಗತ್ತಿನಲ್ಲಿ ಭಾರತ ಒಂದು 'ಮ್ಯಾನುಫ್ಯಾಕ್ಚರಿಂಗ್ ಹಬ್' ಆಗಿ ಮೂಡಿ ಬರಬೇಕು, ಅಂದರೆ ಜಗತ್ತಿಗೆ ಬೇಕಾದ ವಸ್ತುಗಳನ್ನು ಉತ್ಪಾದಿಸುವಲ್ಲಿ ತೊಡಗಿರುವ ಪ್ರದೇಶವಾಗಬೇಕು, ಇಡೀ ಜಗತ್ತು ಈ ವಸ್ತುಗಳನ್ನು ಬಳಸುವಂತಾಗಬೇಕು ಎಂದು ಅವರು ಗುಡುಗಿದರು. ಈ ಆಶಯವೇನೋ ಪ್ರಶಂಸಾರ್ಹ, ಆದರೆ ಪ್ರಸಕ್ತ ಜಾಗತಿಕ ಮತ್ತು ದೇಶದೊಳಗಿನ ಆರ್ಥಿಕ ಸನ್ನಿವೇಶದಲ್ಲಿ, ಅದರಲ್ಲೂ ಅಲ್ಪಾವಧಿಯಲ್ಲಿ ಖಂಡಿತವಾಗಿಯೂ ಇದು ಕಾರ್ಯಸಾಧ್ಯವಲ್ಲ.



ವ್ಯಂಗ್ಯಚಿತ್ರ: ಕೇಶವ್, ದಿ ಹಿಂದು

ಪ್ರಧಾನಿಗಳ ಕರೆಯೂ ಗುಜರಾತ್ ಮಾದರಿಯೂ

ಪ್ರಧಾನ ಮಂತ್ರಿಗಳು ತಮ್ಮ ಸ್ವಾತಂತ್ರ್ಯ ದಿನದ 'ಭಾಷಣದಲ್ಲಿ ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯಗಳನ್ನು ಕಟ್ಟುವ ಅಗತ್ಯದ ಬಗ್ಗೆ ಮಾತಾಡಿದರು, ಹೆಣ್ಣು ಮಕ್ಕಳಿಗೆ ಉಪದೇಶ ಕೊಡುವ ಬದಲು ಮನೆಯಿಂದ ಹೊರ ಹೋಗಿ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ನಡೆಸುವ ತಮ್ಮ ಗಂಡು ಮಕ್ಕಳಿಗೆ ಬುದ್ಧಿವಾದ ಹೇಳಬೇಕು ಎಂದು ತಂದೆ-ತಾಯಂದಿರಿಗೆ ಕರೆ ನೀಡಿದರು. ಆದರೆ ಈ ಕರೆ ಅವರು ನಿರ್ಮಿಸಿದ 'ಮಾದರಿ ರಾಜ್ಯ'ಕ್ಕೆ ಸ್ವಲ್ಪ ತಡವಾದಂತೆ ಕಾಣುತ್ತದೆ ಎಂದು ರಾಹಿ ಗಾಯಕವಾಡ್ 'ದಿ ಹಿಂದು' ವರದಿ ಮಾಡಿದ್ದಾರೆ(ಆಗಸ್ಟ್ 21).



ಆ ಪತ್ರಿಕೆ ಪ್ರಕಟಿಸಿರುವ ಪಕ್ಕದಲ್ಲಿರುವ ಚಿತ್ರ ಗುಜರಾತಿನ ಪೋರ್‌ಬಂದರಿನಲ್ಲಿ ಪೋಲೀಸ್ ಇಲಾಖೆ ಒಂದು ಸಮಾರಂಭದಲ್ಲಿ ಪ್ರದರ್ಶಿಸಿರುವ ಒಂದು ಪೋಸ್ಟರ್. ಅದರ ಒಕ್ಕಣಿಕೆ ಹೀಗಿದೆ:

ಮಹಿಳಾ ಸಶಕ್ತೀಕರಣ
" ಅಯೋಗ್ಯ ಬಟ್ಟೆ ಧರಿಸಿ
ಹೊರಗೆ ಹೊರಡಬೇಡಿ"
-ಗುಜರಾತ್ ಪೊಲಿಸ್, ಪೋರಬಂದರ್

ನಡುವೆ ಜೀನ್ಸ್, ಟೀಶರ್ಟ್‌ಗಳನ್ನು ಧರಿಸಿ ಹೊರಟಿರುವ ಯುವತಿಯರ, ಬಹುಶಃ ವಿದ್ಯಾರ್ಥಿನಿಯರ ಫೋಟೋ.

ನಿಜ, ಇದು ಪ್ರಧಾನಿಗಳ ಕೆಂಪು ಕೋಟೆ ಕರೆಗಿಂತ ಮೂರು ದಿನ ಹಿಂದೆಯೇ ನಡೆದ ಸಮಾರಂಭದಲ್ಲಿನ ಚಿತ್ರ. ಗುಜರಾತ್ ಸರಕಾರದ 'ಮಹಿಳಾ ಸಬಲೀಕರಣ ಸಪ್ತಾಹ'ದ ಸಂದರ್ಭದ ಸಮಾರಂಭ ಅದು. ಪೋಲೀಸ್ ಇಲಾಖೆಯ ಮತ್ತು ಗುಜರಾತ್ ಸರಕಾರದ ವರಿಷ್ಟ ಅಧಿಕಾರಿಗಳು ಆ ಸಮಾರಂಭದಲ್ಲಿ ಭಾಷಣ ಮಾಡಿದರಂತೆ.

ಇದಕ್ಕೆ ಪೋರಬಂದರಿನ ಡಿ.ಎಸ್.ಪಿ. ರಣಚೋಡ್ ಹದಿಯಾರವರು 'ದಿ ಹಿಂದು' ಪತ್ರಿಕೆಗೆ ನೀಡಿದ ಸಮಜಾಯಿಷಿಯನ್ನು ನೋಡಿ: "ಇದು ಮಹಿಳಾ ಸಬಲೀಕರಣ ಸಪ್ತಾಹದ ಆಚರಣೆಗೆ ಏರ್ಪಡಿಸಿದ್ದ ಎರಡು ಗಂಟೆಗಳ ಸಮಾರಂಭದಲ್ಲಿ ಪೋಲೀಸ್ ಹಾಲ್‌ನಲ್ಲಿ ಪ್ರದರ್ಶಿಸಿದ ಹಲವು ಪೋಸ್ಟರುಗಳಲ್ಲಿ ಒಂದು ಸಣ್ಣ ಪೋಸ್ಟರ್ ಅಷ್ಟೇ. ಅಲ್ಲದೆ ಅದರಲ್ಲಿ 'ಮಹಿಳೆ' ಎಂಬ ಪ್ರಸ್ತಾಪವಿಲ್ಲ"!

ಆದರೆ ಫೋಟೋದಲ್ಲಿ ಮಹಿಳೆಯರನ್ನು ತೋರಿಸಲಾಗಿದೆಯಲ್ಲ ಎಂದು ಕೇಳಿದಾಗ ಸಿಕ್ಕ ಉತ್ತರ: "ಒಬ್ಬ ಅಧಿಕಾರಿ ಅದನ್ನು ಇಂಟರ್ನೆಟ್‌ನಿಂದ ಡೌನ್‌ಲೋಡ್ ಮಾಡಿದರು. ಅದೊಂದು ತಪ್ಪಾಗಿದೆ. ನಿಜವಾಗಿ 'ಸಂಸ್ಕಾರಿ' ಬಟ್ಟೆಗಳನ್ನು ಧರಿಸಿ ಎಂದಿರಬೇಕಿತ್ತು. ಅಲ್ಲಿ ಬಹಳಷ್ಟು ಪೋಸ್ಟರುಗಳಿದ್ದವು, ಆದರೆ ಮಾಧ್ಯಮದವರು ಇದನ್ನು ಮಾತ್ರ ಆರಿಸಿಕೊಂಡಿದ್ದಾರೆ"!

ಇದೀಗ 'ಗುಜರಾತ್ ಮಾದರಿ' ಯ ಇನ್ನೊಂದು ಮಾದರಿ!

ಪ್ರಧಾನ ಮಂತ್ರಿ ಮೋದಿ ಅದೇ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ದೇಶದಲ್ಲಿ ಕೋಮುವಾದಿ ಮತ್ತು ಜಾತಿವಾದಿ ಹಿಂಸಾಚಾರದ ಮೇಲೆ ಹತ್ತು ವರ್ಷಗಳ ಕಾಲ ತಾತ್ಕಾಲಿಕ ನಿಷೇಧ ಇರಲಿ ಎಂದು ಕರೆ ನೀಡಿದರು. . ಅದರ ಐದು ದಿನಗಳ ಮೊದಲು ಅವರ ಮಾರ್ಗದರ್ಶಕ 'ಸಾಂಸ್ಕೃತಿಕ' ಸಂಘಟನೆ ಆರೆಸ್ಸೆಸ್‌ನ ಮುಖ್ಯಸ್ಥರು ಇಂಗ್ಲೆಂಡ್ ವಾಸಿಗಳು ಇಂಗ್ಲಿಷರು, ಜರ್ಮನಿಯ ನಿವಾಸಿಗಳು ಜರ್ಮನರು, ಹೀಗಿರುವಾಗ ಹಿಂದುಸ್ತಾನದ ವಾಸಿಗಳು ಹಿಂದುಗಳು ಏಕಲ್ಲ ಎಂದು ಕೇಳಿದರು. " ಹಿಂದುತ್ವ ಭಾರತೀಯರ ಸಾಂಸ್ಕೃತಿಕ ಗುರುತು, ಮತ್ತು ದೇಶದ ಈಗಿನ ನಿವಾಸಿಗಳು ಈ ಮಹಾನ್ ಸಂಸ್ಕೃತಿಯ ಸಂತತಿಯವರು" ಎಂದು ಮುಂದುವರೆದು ಅವರು ಹೇಳಿದರು. ಆಮೂಲಕ ಬೇರೆ ಧರ್ಮದ ಅನುಯಾಯಿಗಳು ಮತ್ತು ಯಾವ ಧರ್ಮ-ಪಂಥವನ್ನೂ ಅನುಸರಿಸದವರು ಈ ದೇಶದ ನಾಗರಿಕರೇ ಆಗುವಂತಿಲ್ಲ ಎಂದು ಸೂಚಿಸಿದರು.

ಇಂಗ್ಲೆಂಡಿನವರು ಇಂಗ್ಲೀಷರಾಗುವುದಾದರೆ ಹಿಂದುಸ್ತಾನದವರು 'ಹಿಂದುಸ್ತಾನಿಗಳು' ಆಗಬೇಕಲ್ಲವೇ, ಹಿಂದುಗಳು ಏಕಾಗಬೇಕು ಎಂದೊಬ್ಬರು ಪ್ರಶ್ನಿಸಿದರೆ, ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯಲ್ಲಿ ವ್ಯಂಗ್ಯಚಿತ್ರಕಾರ ಇ.ಪಿ.ಉನ್ನಿ ಇಂಗ್ಲೆಂಡಿನಲ್ಲಿ ಕ್ರಿಕೆಟ್ ಟೆಸ್ಟ್ ಸರಣಿಯಲ್ಲಿ ಇಂಗ್ಲೆಂಡಿನ ತಂಡ ಭಾರತೀಯ ತಂಡವನ್ನು ಸೋಲಿಸಿದ್ದನ್ನು 'ಇಂಗ್ಲೀಷರು ಹಿಂದುಗಳನ್ನು ಸದೆಬಡಿದರು' ಎಂದು ಹೇಳಿದರೆ ಮೋಹನ್ ಭಾಗವತ್‌ಜೀಯವರಿಗೆ ಸಮಾಧಾನ ಆಗಬೇಕಲ್ಲವೇ ಎಂದು ಕೇಳಿದ್ದಾರೆ. ನಿಜ, ಇದು 'ಗುಜರಾತ್ ಮಾದರಿ' ಅಲ್ಲ, ಅದಕ್ಕೆ ಮಾದರಿ ತಯಾರಿಸಿ ಕೊಡುವ ಸಂಘ ಪರಿವಾರದ (ಕು)ತರ್ಕಗಳ ಮತ್ತೊಂದು ಮಾದರಿ!



ಬೀಡಿ ಕಾರ್ಮಿಕರ ಬಾಕಿ ತುಟ್ಟಿಭತ್ತೆಗೆ ಆಗ್ರಹಿಸಿ ಅನಿರ್ದಿಷ್ಟ ಧರಣಿ ಯಶಸ್ವಿ

2014 ಎಪ್ರಿಲ್ 1ರಿಂದ 1000 ಬೀಡಿಗಳಿಗೆ ರೂ.21.15 ತುಟ್ಟಿಭತ್ತೆಯನ್ನು ಸರಕಾರ ಘೋಷಿಸಿದ್ದರೂ, ಬೀಡಿ ಉದ್ಯಮಗಳ ಮಾಲಿಕರು ಬೀಡಿ ಕಾರ್ಮಿಕರಿಗೆ ಘೋಷಿತ ತುಟ್ಟಿಭತ್ತೆಯನ್ನು ಪಾವತಿಸದೆ ವಂಚಿಸುತ್ತಿದ್ದರು. ದ.ಕ.ಜಿಲ್ಲೆಯಲ್ಲಿ ಬೀಡಿ ಕಾರ್ಮಿಕ ಸಂಘಟನೆಗಳು ಅಲ್ಲಿಂದೀಚೆಗೆ ಈ ಬಗ್ಗೆ ಮಾಲಿಕರಿಗೆ ನೆನಪಿಸಿ ಪ್ರತಿಭಟನೆಗಳನ್ನು ನಡೆಸಿದ್ದರೂ ಕಾರ್ಮಿಕರ ಹೆಚ್ಚುವರಿ ತುಟ್ಟಿಭತ್ತೆಯನ್ನು ನೀಡಲು ಮುಂದಾಗಿರಲಿಲ್ಲ. ಬೀಡಿ ಕಂಪೆನಿಗಳ ಈ ಕಾರ್ಮಿಕ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ಸಿಐಟಿಯು ಮತ್ತು ಎಐಟಿಯುಸಿ ನೇತೃತ್ವದ ದ.ಕ.ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ನುಗಳು ಅನಿರ್ದಿಷ್ಟ ಧರಣಿ ಸತ್ಯಾಗ್ರಹವನ್ನು ಪ್ರಮುಖ ಬೀಡಿ ಉದ್ಯಮ ಸಂಸ್ಥೆಗಳ ಕಚೇರಿ ಮುಂದೆ ಸಂಯುಕ್ತವಾಗಿ ಆಗಸ್ಟ್ 12 ರಿಂದ ಹಮ್ಮಿಕೊಂಡವು. ಜಿಲ್ಲೆಯ ಹತ್ತಾರು ಕಡೆಗಳಲ್ಲಿ ತೀವ್ರತರದ ಪ್ರತಿಭಟನೆಗಳು ಆರಂಭವಾದವು. ಕೆಲವು ಕಂಪೆನಿಗಳು ರೂ.15 ರಂತೆ ಬಾಕಿ ತುಟ್ಟಿಭತ್ತೆಯನ್ನು ಪಾವತಿಸಿ, ಉಳಿಕೆಯನ್ನು ಮುಂದಿನ ವರ್ಷ ನೀಡುವ ಭರವಸೆ ನೀಡಿ ಪಾವತಿಗೆ ಸನ್ನಾಹ ನಡೆಸುತ್ತಿದ್ದರು. ಆದರೆ ಬೀಡಿ ಕಾರ್ಮಿಕರು ಬಾಕಿಯಿರುವ ತುಟ್ಟಿಭತ್ತೆಯನ್ನು ಒಂದಿಷ್ಟೂ ಬಾಕಿ ಇಡದೆ ಪಾವತಿಸಬೇಕೆಂದು ಆಗ್ರಹಿಸಿ ಚಳುವಳಿಯನ್ನು ಮುಂದುವರೆಸಿದರು.



ಮಂಗಳೂರು :

ಮಂಗಳೂರು ಬಂಟ್ಸ್ ಹಾಸ್ಟೇಲ್ ವೃತ್ತದ ಬಳಿಯಿರುವ ಭಾರತ್ ಬೀಡಿ ವರ್ಕ್ಸ್ ಲಿಮಿಟೆಡ್ ಕಚೇರಿ ಮುಂದೆ ಹಾಕಿರುವ ಚಪ್ಪರ ಮೀರಿ ಸಾವಿರ ಸಂಖ್ಯೆಯಲ್ಲಿ ಬೀಡಿ ಕಾರ್ಮಿಕರು ಸತ್ಯಾಗ್ರಹಕ್ಕೆ ಇಳಿದಿದ್ದರು. ಮಾಜಿ ಕಾರ್ಪರೇಟರ್ ಹಾಗೂ ಸಿಐಟಿಯು ಬೀಡಿ ಕಾರ್ಮಿಕ ಫೆಡರೇಶನ್ನಿನ ಜಿಲ್ಲಾ ಉಪಾಧ್ಯಕ್ಷರಾದ ಜಯಂತಿ ಬಿ.ಶೆಟ್ಟಿ ಹಾಗೂ ಎಐಟಿಯುಸಿ ಫೆಡರೇಶನ್ನಿನ ಜಿಲ್ಲಾಧ್ಯಕ್ಷ ವಿ.ಕುಕ್ಯಾನ್ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಿಐಟಿಯು ಬೀಡಿ ಕಾರ್ಮಿಕ ಫೆಡರೇಶನ್ನಿನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್ ಮತ್ತಿತರರು ಭಾಗವಹಿಸಿದ್ದರು.

ಗುರುಪುರ :

ಗುರುಪುರ ಕೈಕಂಭದ ಟೆಲಿಫೋನ್ ಬೀಡಿ ಕಂಪೆನಿಯ ಡಿಪೋ ಎದುರು ನಡೆದ ಸಂಯುಕ್ತ ಪ್ರತಿಭಟನೆಯಲ್ಲಿ ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ಹೊನ್ನಯ್ಯ ಕುಲಾಲ್, ಸದಾಶಿವ ದಾಸ್, ಗಂಗಯ್ಯ ಅಮೀನ್, ಎಐಟಿಯುಸಿ ಜಿಲ್ಲಾ ಬೀಡಿ ಫೆಡರೇಶನ್ ಕಾರ್ಯದರ್ಶಿ ಕರುಣಾಕರ್ ಮತ್ತಿತರರು ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಗುರುಪುರ ಕೈಕಂಭದ ಮಾರ್ಕೆಟ್ ರಸ್ತೆಯಿಂದ ಟೆಲಿಫೋನ್ ಬೀಡಿಯ ಡಿಪೋವರೆಗೆ ಕಾರ್ಮಿಕರ ಮೆರವಣಿಗೆ ನಡೆಯಿತು.

ಉಳ್ಳಾಲ :

ಕೋಟೆಕಾರ್ ಸರ್ಕಲ್ ಬೀಡಿ ಲೇಬರ್ ಯೂನಿಯನ್(ಸಿಐಟಿಯು) ನೇತೃತ್ವದಲ್ಲಿ ಉಳ್ಳಾಲದ ಗುರುಕೃಪಾ ಬೀಡಿ ಗೋದಾಮಿನ ಎದುರು ಪ್ರತಿಭಟನೆ ನಡೆಯಿತು. ಉಳ್ಳಾಲದ ಅಬ್ಬಕ್ಕ ವೃತ್ತದಿಂದ ಬೀಡಿ ಕಾರ್ಮಿಕರು ಮೆರವಣಿಗೆಯಲ್ಲಿ ಚೋಟಾ ಮಂಗಳೂರಿನಲ್ಲಿರುವ ಗುರುಕೃಪಾ ಡಿಪೋವರೆಗೆ ಸಾಗಿ ಬಂದರು. ಯೂನಿಯನ್ ಅಧ್ಯಕ್ಷೆ ಪದ್ಮಾವತಿ ಎಸ್.ಶೆಟ್ಟಿ, ಕಾರ್ಯದರ್ಶಿ ಜಯಂತ ನಾಯಕ್, ಮುಖಂಡರಾದ ಕೃಷ್ಣಪ್ಪ ಸಾಲ್ಯಾನ್, ವಿಲಾಸಿನಿ ತೊಕ್ಕೋಟು, ನಾರಾಯಣ ತಲಪಾಡಿ, ರಫೀಕ್ ಹರೇಕಳ, ಸುಂದರ ಕುಂಪಲ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಬಂಟ್ವಾಳ :

ಸಿಐಟಿಯು ಮತ್ತು ಎಐಟಿಯುಸಿಗೆ ಸೇರಿದ ಬೀಡಿ ಕಾರ್ಮಿಕ ಸಂಘಟನೆಗಳು ಸಂಯುಕ್ತವಾಗಿ ಬಿ.ಸಿ.ರೋಡಿನ ಭಾರತ್ ಬೀಡಿ ಕಂಪೆನಿ ಎದುರು ಪ್ರತಿಭಟನೆ ಆರಂಭಿಸಿದವು. ಅದಕ್ಕೂ ಮೊದಲು ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿದರು. ಪ್ರತಿಭಟನೆಯಲ್ಲಿ ಸಿಐಟಿಯು ಬೀಡಿ ಕಾರ್ಮಿಕ ಸಂಘಟನೆಯ ಬಿ.ವಾಸುಗಟ್ಟಿ, ಬಿ.ನಾರಾಯಣ, ಜಾನಕಿ ಶಂಭೂರು, ಎಐಟಿಯುಸಿ ಬೀಡಿ ಕಾರ್ಮಿಕ ಫೆಡರೇಶನ್ನಿನ ಜಿಲ್ಲಾಧ್ಯಕ್ಷರಾದ ಪಿ.ಸಂಜೀವ, ಕಾರ್ಯದರ್ಶಿ ಎಚ್.ವಿ.ರಾವ್, ಬಿ.ಶೇಖರ್ ಮತ್ತಿತರರು ಭಾಗವಹಿಸಿದ್ದರು.

ಮೂಡಬಿದರೆ :

ಮೂಡಬಿದರೆ ಪ್ರದೇಶ ಬೀಡಿ ಕೆಲಸಗಾರರ ಸಂಘ (ಸಿಐಟಿಯು) ವತಿಯಿಂದ ಮೂಡಬಿದರೆಯ ಸೌತ್ ಕೆನರಾ ಹೋಂ ಇಂಡಸ್ಟ್ರೀಸ್ ಡಿಪೋ ಎದುರು ನಡೆದ ಪ್ರದರ್ಶನವನ್ನು ಸಿಐಟಿಯು ದ.ಕ.ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಸಂತ ಆಚಾರಿ ಉದ್ಘಾಟಿಸಿದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷರಾದ ರಮಣಿ ಮೂಡಬಿದರೆ, ಮುಖಂಡರುಗಳಾದ ಗಿರಿಜ, ರಾಧಾ, ಯಾದವ ಶೆಟ್ಟಿ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸುಳ್ಯ :

ಸುಳ್ಯದ ದೀಪಕ್ ಎಂಟರ್‌ಪ್ರೈಸಸ್ ಕಚೇರಿ ಎದುರು ಸುಳ್ಯ ಬೀಡಿ ಕೆಲಸಗಾರರ ಸಂಘ(ಸಿಐಟಿಯು) ವತಿಯಿಂದ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಯಿತು. ಪ್ರತಿಭಟನೆಗೂ ಮೊದಲು ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಬೀಡಿ ಕಾರ್ಮಿಕರು ಮೆರವಣಿಗೆ ನಡೆಸಿದರು. ಪ್ರತಿಭಟನೆಯನ್ನುದ್ದೇಶಿಸಿ ಸಂಘದ ಅಧ್ಯಕ್ಷ ಕೆ.ಪಿ.ರಾಬರ್ಟ್ ಡಿಸೋಜ ಮಾತನಾಡಿದರು. ಸುರಿಯುವ ಮಳೆಯಲ್ಲೂ ಕಾರ್ಮಿಕ ಮಹಿಳೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕಡಲತಡಿ

ವರದಿ : ವಾ. ಉಚ್ಚಿಲ್

ಬೆಳ್ತಂಗಡಿ :

ಬೆಳ್ತಂಗಡಿಯ ಭಾರತ್ ಬೀಡಿ ಡಿಪೋ ಎದುರು ಸಿಐಟಿಯು ಸಂಯೋಜಿತ ಬೆಳ್ತಂಗಡಿ ಹಾಗೂ ವೇಣೂರು ವಲಯ ಬೀಡಿ ಕಾರ್ಮಿಕ ಸಂಘಟನೆಗಳು ನಡೆಸಿದ ಪ್ರತಿಭಟನೆಯಲ್ಲಿ ದ.ಕ.ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ನಿನ ಜಿಲ್ಲಾಧ್ಯಕ್ಷರಾದ ಬಿ.ಎಂ.ಭಟ್, ಮುಖಂಡರಾದ ಶಿವ ಕುಮಾರ್, ಈಶ್ವರಿ, ರೋಹಿಣಿ, ಜಯರಾಮ ಮಯ್ಯ, ನೆಬಿಸಾ, ದೇವಕಿ, ಜಯಂತಿ, ಶೇಖರ ಲಾಯಿಲ, ವಸಂತ ನಡ ಮತ್ತಿತರರು ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ನಗರ ಮಧ್ಯದಲ್ಲಿ ಬೀಡಿ ಕಾರ್ಮಿಕರ ಮೆರವಣಿಗೆ ನಡೆಸಲಾಯಿತು.

ವಿಟ್ಲ :

ಸಿಐಟಿಯು ಸಂಯೋಜಿತ ವಿಟ್ಲ ಬೀಡಿ ಕಾರ್ಮಿಕರ ಸಂಘದ ನೇತೃತ್ವದಲ್ಲಿ ವಿಟ್ಲದ ನೆತ್ರಕೆರೆ ಎಂಬಲ್ಲಿರುವ ದೀಪಕ್ ಬೀಡಿ ಕಂಪೆನಿ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಬೀಡಿ ಕಾರ್ಮಿಕ ಮುಖಂಡರಾದ ರಾಮಣ್ಣ ವಿಟ್ಲ, ದಿನೇಶ್ ಆಚಾರಿ, ವೈ.ಕೆ.ನಾರಾಯಣ ಮತ್ತಿತರರು ಭಾಗವಹಿಸಿದ್ದರು.

ಪುತ್ತೂರು :

ಆಗಸ್ಟ್ 13 ರಂದು ಪುತ್ತೂರು ತಾಲೂಕು ಬೀಡಿ ಕಾರ್ಮಿಕರ ಸಂಘ (ಸಿಐಟಿಯು) ವತಿಯಿಂದ ಪುತ್ತೂರಿನ ನೆಹರೂ ನಗರದಲ್ಲಿರುವ ಗಣೇಶ್ ಬೀಡಿ ಡಿಪೋ ಎದುರು ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷರಾದ ಪಿ.ಕೆ.ಸತೀಶನ್, ಕಾರ್ಯದರ್ಶಿ ದಾಮೋದರ ಗೌಡ, ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ನಿನ ಅಧ್ಯಕ್ಷರಾದ ಬಿ.ಎಂ.ಭಟ್, ಮುಖಂಡರಾದ ಕೇಶವ ಭಾಗವಹಿಸಿದ್ದರು.

ಬೀಡಿ ಕಾರ್ಮಿಕರ ಹೋರಾಟಕ್ಕೆ ಜಯ:

ಎರಡು ದಿನಗಳ ಕಾಲ ನಡೆದಿದ್ದ ಬೀಡಿ ಕಾರ್ಮಿಕರ ಅನಿರ್ದಿಷ್ಟ ಧರಣಿ ಆಗಸ್ಟ್ 13ರ ಸಂಜೆಗೆ ಕೊನೆಗೊಂಡಿರುತ್ತದೆ. ಹೆಚ್ಚುವರಿ ತುಟ್ಟಿಭತ್ತೆಯನ್ನು ಸಪ್ಟೆಂಬರ್ 1ರಿಂದ ಕೊಡುವುದಾಗಿಯೂ ಬಾಕಿ ಇರುವ ಮೊಬಲಗನ್ನು ಅಕ್ಟೋಬರ್ 30 ರಂದು ಏಕಗಂಟಿನಲ್ಲಿ ಪಾವತಿ ಮಾಡುವುದಾಗಿ ಮಾತುಕತೆ ವೇಳೆಗೆ ಮಾಲಿಕ ವರ್ಗದವರು ಒಪ್ಪಿಕೊಂಡ ಮೇರೆಗೆ ಸಿಐಟಿಯು ಹಾಗೂ ಎಐಟಿಯುಸಿ ನೇತೃತ್ವದ ಜಂಟಿ ಸತ್ಯಾಗ್ರಹವನ್ನು ಎರಡನೇ ದಿನಕ್ಕೆ ಕೊನೆಗೊಳಿಸಲಾಯಿತು.

ಮಹಿಳಾ ಮತ್ತು ದಲಿತರ ಮೇಲಿನ ದೌರ್ಜನ್ಯದ ವಿರುದ್ಧ ಕರಾವಳಿ ಜಿಲ್ಲೆಗಳಲ್ಲಿ ಆಂದೋಲನ

ಪುಟ 15 ಕ್ಕೆ

ಮಂಗಳೂರಿನಲ್ಲಿ ಡಾ। ನರೇಂದ್ರ ದಾಬೋಲ್ಕರ್ ಹುತಾತ್ಮ ದಿನಾಚರಣೆ :



ಖ್ಯಾತ ವಿಚಾರವಾದಿ ಡಾ।ನರೇಂದ್ರ ದಾಬೋಲ್ಕರ್ ಅವರು ಹಿಂದೂತ್ವವಾದಿ ಮೂಲಭೂತವಾದಿ ಸಂಘಟನೆಗಳಿಂದ ನೆರವು ಪಡೆದ ಬಾಡಿಗೆ ಕೊಲೆಗಡುಕರಿಂದ ಹತ್ಯೆಗೀಡಾಗಿ ಆಗಸ್ಟ್ 20ಕ್ಕೆ ಒಂದು ವರ್ಷವಾಗಿದ್ದು, ಈ ಹಿನ್ನೆಲೆಯಲ್ಲಿ ಸಮುದಾಯ, ಡಿವೈಎಫ್ಐ, ಎಸ್‌ಎಫ್ಐ, ವಿಚಾರವಾದಿ ಸಂಘಗಳು ಡಾ।ನರೇಂದ್ರ ದಾಬೋಲ್ಕರ್ ಹುತಾತ್ಮ ದಿನವನ್ನು ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಜನಾಗ್ರಹ ದಿನವಾಗಿ ಆಚರಿಸಿದವು.

ಈ ಸಂದರ್ಭದಲ್ಲಿ ಮಾತನಾಡಿದ ಖ್ಯಾತ ವಿಚಾರವಾದಿ ಹಾಗೂ ವಿಚಾರವಾದಿ ಸಂಘಟನೆಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷರಾದ ಪ್ರೊ। ನರೇಂದ್ರ ನಾಯಕ್ ಅವರು ಮಾತನಾಡಿ, ಡಾ। ನರೇಂದ್ರ ದಾಬೋಲ್ಕರ್ ಅವರು ಹತ್ಯೆಗೀಡಾಗಿ ಒಂದು ವರ್ಷವಾಗಿದ್ದರೂ ಕೊಲೆಗಾರರನ್ನು ಪತ್ತೆ ಮಾಡಲಾಗದ ಪೊಲೀಸ್ ಇಲಾಖೆಯ ವೈಫಲ್ಯವನ್ನು ಖಂಡಿಸಿದರು. ಡಾ। ದಾಬೋಲ್ಕರ್ ಅವರ ಮರಣಾನಂತರ ಅಂಧಶ್ರದ್ಧಾ ಪ್ರತಿಬಂಧಕ ಕಾಯ್ದೆಯೊಂದು ಮಹಾರಾಷ್ಟ್ರದಲ್ಲಿ ಅಸ್ತಿತ್ವಕ್ಕೆ ಬಂದಿದೆ. ಆದರೆ ಕರ್ನಾಟಕದಲ್ಲಿ ಸಿದ್ಧಪಡಿಸಲಾದ ಮೂಢನಂಬಿಕೆ ಪ್ರತಿಬಂಧಕ ಮಸೂದೆ ಇನ್ನೂ ಶಾಸನವಾಗಿ ಜಾರಿಯಾಗಿಲ್ಲ. ಮೂಲಭೂತವಾದಿ ಸ್ಥಾಪಿತ ಹಿತಾಸಕ್ತಿಗಳು ಇದಕ್ಕೆ ವಿರುದ್ಧವಾಗಿವೆ. ಸರಕಾರ ಹಿಂಜರಿಯದೆ ಈ ಶಾಸನವನ್ನು ಜಾರಿ ಮಾಡಬೇಕು ಎಂದು ಆಗ್ರಹಿಸಿದರು.

ಡಾ। ನರೇಂದ್ರ ದಾಬೋಲ್ಕರ್ ಅವರೊಂದಿಗೆ ವಿಚಾರವಾದಿ ಚಳುವಳಿಯಲ್ಲಿ ಸಹಪರ್ಯಗನಾಗಿ,ಅವರು ಜಾತಿಮತ ಭೇದವಿಲ್ಲದೆ ಗ್ರಾಮಕ್ಕೊಂದು ಸಾಮಾನ್ಯ ಬಾವಿಗಾಗಿ ಹೋರಾಟ ಮಾಡಿ ಬಹುಪಾಲು ಯಶಸ್ವಿಯಾಗಿದ್ದಾರೆಂದೂ ಅವರು ವಿವರಿಸಿದರು.

ಡಾ। ದಾಬೋಲ್ಕರ್ ಹಂತಕರನ್ನು ಶೀಘ್ರವಾಗಿ ಪತ್ತೆ ಹಚ್ಚಿ ಶಿಕ್ಷಿಸಬೇಕೆಂದೂ, ಕರ್ನಾಟಕ ರಾಜ್ಯ ಸರ್ಕಾರವು ಮೂಢನಂಬಿಕೆ ಪ್ರತಿಬಂಧಕ ಕಾಯಿದೆಯನ್ನು ಜ್ಯಾರಿಗೊಳಿಸಬೇಕೆಂದೂ ಹುತಾತ್ಮ ದಿನದಲ್ಲಿ ಆಗ್ರಹಿಸಲಾಯಿತು. ಸಮುದಾಯದ ವಾಸುದೇವ ಉಚ್ಚಿಲ್, ಜೀವನ್‌ರಾಜ್ ಕುತ್ತಾರ್, ಡಿವೈಎಫ್ಐನ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಪಾಲಿಕೆ ಸದಸ್ಯ ಹಾಗೂ ಡಿವೈಎಫ್ಐ ಜಿಲ್ಲಾ ಕಾರ್ಯದರ್ಶಿ ದಯಾನಂದ ಶೆಟ್ಟಿ, ಸಂತೋಷ್ ಕುಮಾರ್ ಬಜಾಲ್, ಮಹಾಬಲ ದೆಪ್ಪೆಲಿಮಾರ್, ಎಸ್‌ಎಫ್ಐ ಜಿಲ್ಲಾ ಸಮಿತಿಯ ನಿತಿನ್ ಕುತ್ತಾರ್, ಚರಣ್ ಪಂಜಿಮೊಗರು, ವಿಚಾರವಾದಿ ಪ್ರಸನ್ನ, ಪಿ.ಹರಿಶ್ಚಂದ್ರ ರಾವ್, ಕೆ.ಸುಕುಮಾರ್, ರಮೇಶ್ ಸುವರ್ಣ, ಜನವಾದಿ ಮಹಿಳಾ ಸಂಘಟನೆಯ ಭಾರತಿ ಬೋಳಾರ್ ಮತ್ತಿತರರು ಭಾಗವಹಿಸಿದ್ದರು.

ಮೋದಿ ಪ್ರಶ್ನಾತೀತರಲ್ಲ - ಅವರನ್ನು ಟೀಕಿಸುವುದು ಅಪರಾಧವಲ್ಲ

ನಿತ್ಯಾನಂದಸ್ವಾಮಿ

'ಜನಶಕ್ತಿ' ವಾರಪತ್ರಿಕೆ ಇದೇ ಅಗಸ್ಟ್ 17ರಂದು ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ ಉತ್ಸವದ ಅಂಗವಾಗಿ 'ಮಾಧ್ಯಮ ಮತ್ತು ಸಾಮಾಜಿಕ ಹೊಣೆಗಾರಿಕೆ' ಎಂಬ ವಿಷಯದ ಕುರಿತು ವಿಚಾರ ಸಂಕಿರಣವೊಂದನ್ನು ಏರ್ಪಡಿಸಿತ್ತು. ಪತ್ರಿಕೆ-ಯ ಸಂಪಾದಕನಾಗಿ ನಾನು ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದೆ. ರಾಜ್ಯಸಭಾ ಸದಸ್ಯರು, 'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಸಂಪಾದಕರೂ ಆಗಿರುವ ಸೀತಾರಾಂ ಯೆಚೂರಿ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ್ದರು. ಹಿರಿಯ ಪತ್ರಕರ್ತರು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರೂ ಆಗಿರುವ ದಿನೇಶ್ ಅಮೀನ್‌ಮಟ್ಟು ಅವರು ವಿಚಾರ ಸಂಕಿರಣದ ಆಶಯ ಭಾಷಣ ಮಾಡಿದ್ದರು, 'ಮುದ್ರಣ ಮಾಧ್ಯಮದ ಸವಾಲುಗಳು ಮತ್ತು ಪರ್ಯಾಯ' ಎಂಬ ವಿಷಯವನ್ನು ಕುರಿತು ಪರ್ತಕರ್ತ ಎನ್.ಎ.ಎಂ. ಇಸ್ಮಾಯಿಲ್, 'ಎಲೆಕ್ಟ್ರಾನಿಕ್ ಮಾಧ್ಯಮದ ಸವಾಲುಗಳು ಮತ್ತು ಪರ್ಯಾಯ'ದ ಬಗ್ಗೆ ಪತ್ರಕರ್ತ ನವೀನ್ ಸೂರಿಂಜೆ ಮತ್ತು 'ಸಾಮಾಜಿಕ ಮಾಧ್ಯಮದ ಸವಾಲುಗಳು ಮತ್ತು ಪರ್ಯಾಯ'ದ ಕುರಿತು ಬರಹಗಾರರಾದ ಜಿ.ಎನ್. ನಾಗರಾಜ್ ಅವರು ತಮ್ಮ ಅಭಿಪ್ರಾಯಗಳನ್ನು ಮಂಡಿಸಿದ್ದರು. ವಿಚಾರ ಸಂಕಿರಣ ತುಂಬ ಅರ್ಥಪೂರ್ಣವಾಗಿ ನಡೆದಿತ್ತು. ವಿಚಾರ ಸಂಕಿರಣದಲ್ಲಿ ಒಂದು ವಿಶಾಲವಾದ ಒಮ್ಮತ ಮೂಡಿತ್ತು. ಅದು ಏನೆಂದರೆ – ಮಾಧ್ಯಮಗಳು ನಮ್ಮ ಪ್ರಜಾಪ್ರಭುತ್ವದ ನಾಲ್ಕನೇಯ ಅಂಗ. ದೇಶದ ಆಗು-ಹೋಗುಗಳ ಮೇಲೆ, ಜನಜೀವನದ ಮೇಲೆ ಅವು ಮಹತ್ತರವಾದ ಪ್ರಭಾವ ಬೀರುತ್ತವೆ, ಆದರೆ ಇಂದು ಕಾರ್ಪೊರೇಟ್ ಸಂಸ್ಥೆಗಳು ಹಾಗೂ ದೊಡ್ಡ ಉದ್ಯಮಿಗಳು ಅವುಗಳನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸುತ್ತಿವೆ. ಮಾಧ್ಯಮಗಳ ಮೂಲಕ ತಮ್ಮ ಅಭಿಪ್ರಾಯಗಳನ್ನೇ(Views) ಸುದ್ದಿ(News) ಗಳಾಗಿ ಬಿಂಬಿಸಿ ಜನರ ದಾರಿತಪ್ಪಿಸುತ್ತಿವೆ. ಮಾಧ್ಯಮ ರಂಗದ ಸ್ವಾತಂತ್ರ್ಯವನ್ನು ಬೆಂಬಲಿಸಿ ಬಲಪಡಿಸುವುದು ನಮ್ಮ ಕರ್ತವ್ಯ ಎಂದು ಒಪ್ಪಿಕೊಳ್ಳುತ್ತಾ ಮಾಧ್ಯಮಗಳು ಸಾಮಾಜಿಕ ಹೊಣೆಗಾರಿಕೆ ಆಧಾರಿತ ಸ್ವಯಂ ನಿಯಂತ್ರಣ ನೀತಿ ಸಂಹಿತೆಗೆ ಒಳಗಾಗಬೇಕಾಗಿದೆ ಎಂಬುದು ವಿಚಾರಸಂಕಿರಣದಲ್ಲಿ ಮೂಡಿಬಂದ ಒಟ್ಟಾಭಿಪ್ರಾಯವಾಗಿದೆ.

ಅಲ್ಲಸಲ್ಲದ ಆರೋಪ ;

ಅಂದು ಎಲ್ಲವೂ ಸುಸೂತ್ರವಾಗಿ ನಡೆಯಿತು. ಪ್ರೇಕ್ಷಕರೆಲ್ಲರು ತೃಪ್ತಿಭಾವನೆಯಿಂದ ಮರಳಿದರು. ಪ್ರೇಕ್ಷಕರಲ್ಲಿ ಪತ್ರಕರ್ತರು, ಎಲೆಕ್ಟ್ರಾನಿಕ್ ಮಾಧ್ಯಮಗಳಲ್ಲಿ ದುಡಿಯುತ್ತಿರುವವರು, ಪತ್ರಿಕೋದ್ಯಮದ ವಿದ್ಯಾರ್ಥಿಗಳು ಗಣನೀಯ ಸಂಖ್ಯೆಯಲ್ಲಿದ್ದರು. ಮರುದಿನ ಪತ್ರಿಕೆಗಳು ವಿಚಾರ ಸಂಕಿರಣದ ಕಲಾಪಗಳನ್ನು ಒಂದು ಪ್ರಮುಖ ಸುದ್ದಿಯಾಗಿ ಪ್ರಕಟಿಸಿದವು.

ಕನ್ನಡಪ್ರಭ ದಿನಪತ್ರಿಕೆಯು ಅಗಸ್ಟ್ 19ರ ತನ್ನ ಸಂಚಿಕೆಯ ಮುಖಪುಟದಲ್ಲಿ 'ಪೂರ್ವಗ್ರಹ ಪೀಡಿತ, ಬೇಜವಾಬ್ದಾರಿ ಹೇಳಿಕೆ – ವಿವಾದಕ್ಕೆ ಕಾರಣವಾದ ಮಟ್ಟು ಮಾತು, ಮಾಧ್ಯಮ ವಲಯದಲ್ಲಿ ಭಾರೀ ವಿರೋಧ' ಎಂಬ ತಲೆ ಬರಹದ ಅಡಿಯಲ್ಲಿ ತನ್ನ Viewsಗಳನ್ನು Newsಆಗಿ ಪ್ರಕಟಿಸಿತು. ಬೇರೆ ಯಾವ ಪತ್ರಿಕೆಯೂ ದಿನೇಶ್ ಅಮೀನ್ ಮಟ್ಟು ಅವರು ಆಡಿದ ಮಾತುಗಳ ಬಗ್ಗೆ ಈ ರೀತಿಯ ಟೀಕೆಯನ್ನಾಗಲಿ, ಅಲ್ಲಸಲ್ಲದ ಆರೋಪಗಳನ್ನಾಗಲಿ ಮಾಡಿಲ್ಲ. ಅಮೀನ್ ಮಟ್ಟು ಅವರ ಮಾತುಗಳಿಗೆ ಮಾಧ್ಯಮ ವಲಯದಲ್ಲಿ ಭಾರೀ ವಿರೋ ಧ ವ್ಯಕ್ತವಾಗಿದೆ ಎಂಬ ಸತ್ಯಕ್ಕೆ ದೂರವಾದ ತಮ್ಮ ಆರೋಪವನ್ನು ಸಾಬೀತುಪಡಿಸಲು ಮೂರು ನಾಲ್ಕು ಬರಹಗಳನ್ನು ಬರೆಯಿಸಿ ಕನ್ನಡ ಪ್ರಭದಲ್ಲಿ ಪ್ರಕಟಿಸಲಾಯಿತು.

ಪ್ರಧಾನಿ ಮೋದಿಯವರ ಬಗ್ಗೆ ಅಮೀನ್‌ಮಟ್ಟು ಅವರು ಅವಹೇಳನಕಾರಿ ಮಾತನ್ನಾಡಿದ್ದಾರೆ ಎಂಬುದೇ ಕನ್ನಡಪ್ರಭ ಪತ್ರಿಕೆಯ ಆರೋಪ. ಅಮೀನ್ ಮಟ್ಟು ಅವರ ಅಂದಿನ ಮಾತುಗಳನ್ನು ಕನ್ನಡಪ್ರಭ ಅಗಸ್ಟ್ 18ರ ಸಂಚಿಕೆಯಲ್ಲಿ ಪ್ರಕಟಿಸಿರುವುದನ್ನೇ ಗಮನಿಸಿದರೆ ಈ ಆರೋಪದಲ್ಲಿ ಹುರುಳಿಲ್ಲ ಎಂಬುದು ಸಾಬೀತಾಗುತ್ತದೆ. ಪ್ರಧಾನಿ ಮೋದಿಯವರ ಸ್ವಾತಂತ್ರ್ಯೋತ್ಸವದ ಭಾಷಣವನ್ನು ಕೆಲವು ಸುದ್ದಿ ವಾಹಿನಿಗಳು ದಿನವೀಡಿ ಬಿತ್ತರಿಸಿದ್ದರ ಕುರಿತು ಒಂದು ವಾಹಿನಿಯ ಮಿತ್ರರೊಬ್ಬರ ಬಳಿ ಮಾತನಾಡುತ್ತಾ ಕೇವಲ ಅಭಿಮಾನದಿಂದ ಈ ರೀತಿ ದಿನವಿಡೀ ಸುದ್ದಿ ಬಿತ್ತರಿಸುವುದಾದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬಗ್ಗೆಯೂ ಸುದ್ದಿ ಪ್ರಸಾರ ಮಾಡಬಹುದಲ್ಲ ಎಂದು ಅಮೀನ್ ಮಟ್ಟು ಕೇಳಿದಾಗ ಅವರ ಮಿತ್ರ 'ಅದು ಅಭಿಮಾನದಿಂದ ಅಲ್ಲ, ಪ್ಯಾಕೇಜ್ ಸುದ್ದಿ' ಎಂದಿದ್ದಾರೆ. ಈ ಮಾತುಗಳನ್ನು ಆಲಿಸಿದ ಪ್ರೇಕ್ಷಕರಿಗೆ ಆಶ್ಚರ್ಯವಾಗಲಿ ಅಘಾತವಾಗಲಿ ಆಗಲಿಲ್ಲ. ಕಾಸಿಗಾಗಿ ಸುದ್ದಿ, ಪ್ಯಾಕೇಜ್ ಡೀಲ್‌ಗಳಿಗೆ ಮಾಧ್ಯಮದವರು ಈಡಾಗುತ್ತಿರುವುದು ಅಮೀನ್ ಮಟ್ಟು ಅವರ ಸಂಶೋಧನೆ ಅಲ್ಲ.



ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾದ ಅ ಧ್ಯಕ್ಷರಾದ ನಿವೃತ್ತ ನ್ಯಾಯಮೂರ್ತಿ ಮಾರ್ಕಂಡೇಯ ಕಟ್ಜುರವರು ಮಾಧ್ಯಮ ರಂಗದಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆ ಹಲವು ಬಾರಿ ಮಾತನಾಡಿದ್ದಾರೆ. ಹಿರಿಯ ಪತ್ರಕರ್ತ ಕುಲದೀಪ್ ನಯ್ಯರ್ ಆ ವಿದ್ಯಮಾನವನ್ನು ಪ್ರಸ್ತಾಪಿಸಿ ಖೇದ ವ್ಯಕ್ತಪಡಿಸಿದ್ದಾರೆ. 16ನೇ ಲೋಕಸಭಾ ಚುನಾವಣೆಯಲ್ಲಿ ಮೋದಿ ಅವರ ಚುನಾವಣಾ ಪ್ರಚಾರಕ್ಕಾಗಿ 15 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಲಾಗಿರುವುದನ್ನು ಮಾಧ್ಯಮಗಳೇ ವರದಿ ಮಾಡಿವೆ. ಹೀಗೆ ವರದಿ ಮಾಡಿದ ಮಾಧ್ಯಮದವರನ್ನು ಕನ್ನಡ ಪ್ರಭ ಇದೇ ರೀತಿ ತರಾಟೆಗೆ ತೆಗೆದುಕೊಂಡಿತ್ತಾ? ಇತ್ತೀಚೆಗೆ ಮಾಧ್ಯಮಗಳ ಸಂಪಾದಕರ ಸಭೆಯಲ್ಲಿ 'ಕಾಸಿಗಾಗಿ ಸುದ್ದಿ'ಯ ವ್ಯವಹಾರದಲ್ಲಿ ಸಾವಿರಾರು ಕೋಟಿ ರೂಪಾಯಿ ಹಸ್ತಾಂತರ ಆಗಿರುವ ಬಗ್ಗೆ ಚರ್ಚೆಯಾಗಿದ್ದು ಕನ್ನಡಪ್ರಭ ಈ ಕುರಿತು ಯಾಕೆ ಆಕ್ಷೇಪಿಸಿಲ್ಲ?

ಈ ಹಿನ್ನೆಲೆಯಲ್ಲೇ, ಪತ್ರಿಕೆಗಳು ಮತ್ತು ಟಿ.ವಿ. ಚಾನೆಲ್‌ಗಳ ಸಂಪಾದಕರನ್ನು ಲೋಕಪಾಲ್ ವ್ಯಾಪ್ತಿಗೆ ಒಳಪಡಿಸಬೇಕೆಂದು ಅಮೀನ್ ಮಟ್ಟು ಹೇಳಿದ್ದು. ಇದೇ ಮಾತು ಕನ್ನಡಪ್ರಭಕ್ಕೆ ನುಂಗಲಾರದ ತುತ್ತು ಆಗಿದ್ದು, ಆದರೆ, ಅದನ್ನು ಪ್ರಸ್ತಾಪಿಸಿದರೆ ಎಲ್ಲಿ ತನ್ನ ಬಣ್ಣ ಬಯಲಾಗುತ್ತದೊ ಎಂಬ ಭೀತಿಯಿಂದ ಅಮೀನ್ ಮಟ್ಟು ಅವರು ಮೋದಿ ಅವರ ಬಗ್ಗೆ ಅವಹೇಳನಕಾರಿಯಾಗಿ ಮಾತನಾಡಿದ್ದಾರೆ ಎಂಬ ಸುಳ್ಳು ಆರೋಪ ಮಾಡಿದೆ. ಮೋದಿ ಈಗ ದೇಶದ ಪ್ರಧಾನಿ, ಅವರು ಪ್ರಶ್ನಾತೀತರಲ್ಲ. ಅವರ ನಡೆಯನ್ನು ಪ್ರಶ್ನಿಸುವ, ಟೀಕಿಸುವ ಅಧಿಕಾರ ಎಲ್ಲರಿಗೂ ಇದೆ. ಅವರ ಚುನಾವಣಾ ಪ್ರಚಾರಕ್ಕಾಗಿ ಖರ್ಚುಮಾಡಲಾದ ಮೊತ್ತ ಸಣ್ಣದೇನಲ್ಲ. ಅದು ಯಾರ ಹಣ? ಅದರ ಮೂಲ ಯಾವುದು? ಅದರ ಹಿಂದಿನ ಉದ್ದೇಶವೇನು? ಇದನ್ನು ಪ್ರಶ್ನೆ ಮಾಡುವುದು ಅಪರಾಧವಲ್ಲ.

ಇಷ್ಟಕ್ಕೆ ಅಮೀನ್ ಮಟ್ಟು ಅವರನ್ನು ವಜಾ ಮಾಡಬೇಕೆಂದು ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಶಿ ಕನ್ನಡಪ್ರಭದಲ್ಲಿ ಕೂಗಾಡಿದ್ದು ಆ ಪಕ್ಷದ ದಿವಾಳಿಕೋರತನದ ದ್ಯೋತಕವಾಗಿದೆ. ಅಮೀನ್ ಮಟ್ಟು ಅವರು ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರರು ಮಾತ್ರ. ಅವರು ಕೊಡುವ ಸಲಹೆಗಳನ್ನು ಮುಖ್ಯಮಂತ್ರಿ ಅನುಸರಿಸಲೇ ಬೇಕೆಂಬ ನಿಯಮವೇನಿಲ್ಲ. ಅವರು ಖಾಸಗಿ ವೇದಿಕೆಯಿಂದ ಮಾತನಾಡುವಾಗ ತಮ್ಮ ಅಭಿಪ್ರಾಯವನ್ನು ಹೇಳುವ ಸ್ವಾತಂತ್ರ್ಯ ಅವರಿಗಿದೆ. ಸ್ಪೀಕರ್ ಕಾಗೋಡು ತಿಮ್ಮಪ್ಪನವರು ತಮ್ಮ ಸರ್ಕಾರದ ವಿರುದ್ಧವೇ ಮಾತನಾಡುವ ಸ್ವಾತಂತ್ರ್ಯವನ್ನು ಬಳಸಿಕೊಳ್ಳುತ್ತಿರುವಾಗ ಅಮೀನ್ ಮಟ್ಟು ಅವರು ಇನ್ನೊಂದು ಸರ್ಕಾರ ಪ್ರಧಾನಿಯನ್ನು ಟೀಕಿಸುವ ಸ್ವಾತಂತ್ರ್ಯವನ್ನು ಬಳಸಬಾರದೆ?

ಉಚಿತ ಉಪದೇಶಗಳು :

ಕನ್ನಡ ಪ್ರಭ ತನ್ನ 'ಅನುಭವ ಮಂಟಪ'ಕ್ಕೆ ಕೆಲವು ಮಾಧ್ಯಮದವರನ್ನು, ಪತ್ರಕರ್ತರನ್ನು ಕ-ರೆತಂದು ಅಮೀನ್ ಮಟ್ಟು ಅವರಿಗೆ ಕೆಲವು ಉಚಿತ ಉಪದೇಶಗಳನ್ನು ಭೋಧಿಸುವ ಪ್ರಯತ್ನ ಮಾಡಿದೆ. ಸುವರ್ಣ ಸುದ್ದಿವಾಹಿನಿಯ ಸಂಪಾದಕರು 'ಅಮೀನ್ ಮಟ್ಟು ಅವರಿಗೆ ವಿದ್ಯುನ್ಮಾನ ಮಾಧ್ಯಮಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎನ್ನುವುದು ತಿಳಿದಿಲ್ಲ' ಎಂದಿದ್ದಾರೆ. ಇಡೀ ವಿಶ್ವಕ್ಕೆ ತಿಳಿದಿರುವ ಸಂಗತಿ ಅಮೀನ್ ಮಟ್ಟು ಅವರಿಗೆ ತಿಳಿದಿಲ್ಲ ಎನ್ನುವುದರಲ್ಲಿ ಕುಚೋದ್ಯವಿದೆ. 'ಒಂದೆರೆಡು ಕಪ್ಪು ಕುರಿಗಳು ಇದ್ದರೆ ಅದೇ ಪತ್ರಿಕೋದ್ಯಮ ಎಂದು ಕರೆಯಲು ಬರುವುದಿಲ್ಲ' ಎಂದು ಪಬ್ಲಿಕ್ ಟಿ.ವಿ. ಮುಖ್ಯಸ್ಥರು ಎಚ್ಚರಿಸಿದ್ದಾರೆ. ಎಲ್ಲಾ ಪತ್ರಿಕೋದ್ಯಮದವರು ಭ್ರಷ್ಟರಿದ್ದಾರೆ ಎಂದು ಅಮೀನ್ ಮಟ್ಟು ಹೇಳಿರಲಿಲ್ಲವಲ್ಲ. ಮಾಧ್ಯಮದಲ್ಲಿ ದುಡಿದವರೇ ಮಾಧ್ಯಮಗಳ ಮರ್ಯಾದೆ ಹರಾಜು ಹಾಕುವುದು ನಾಚಿಕೆಗೇಡಿನ ಸಂಗತಿ ಎಂದು ಸಮಯ ಚಾನೆಲ್ ಮುಖ್ಯಸ್ಥರು ಹೇಳಿದ್ದಾರೆ. ಅಂದರೆ ಮಾಧ್ಯಮದವರು ಮಾಡುತ್ತಿರುವ ತಪ್ಪುಗಳನ್ನು ಎತ್ತಿತೋರಿಸಿ ಮಾಧ್ಯಮ ವಲಯವನ್ನು ಶುದ್ಧೀಕರಿಸುವ ಬದಲಾಗಿ ತಪ್ಪುಗಳನ್ನು ಮುಚ್ಚಿಹಾಕಿ ಅದು ಕೊಳೆತು ನಾರುವಂತೆ ಮಾಡುವುದೇ ಲೇಸು ಎಂದಂತಾಯಿತು ಇವರ ಮಾತಿನ ಮರ್ಮ. ಇತ್ತೀಚೆಗೆ ಮಹಿಳೆಯೊಬ್ಬರ ಬಗ್ಗೆ ಫೇಸ್ ಬುಕ್‌ನಲ್ಲಿ ಕೆಟ್ಟದಾಗಿ ಪ್ರತಿಕ್ರಿಯೆ ನೀಡಿದ ವ್ಯಕ್ತಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ಅಮೀನ್ ಮಟ್ಟು ಅವರೇ ನಿಂತು ದೂರು ಕೊಡಿಸಿದ್ದು ತಪ್ಪು ಎಂಬಂತೆ ಪ್ರತಿಕ್ರಿಯಿಸಿದ್ದಾರೆ ಮಲೆನಾಡು ಮಿತ್ರ ಸಂಪಾದಕರು.!

ಜೆ.ಎಚ್. ಪಟೇಲರ ಪತ್ರಿಕಾ ಕಾರ್ಯದರ್ಶಿಯಾಗಿ ತುಂಬಾ ಯಶಸ್ವಿಯಾಗಿ ನಾಲ್ಕು ವರ್ಷ ಕೆಲಸ ಮಾಡಿದ್ದಾಗಿ ಹೇಳಿಕೊಂಡಿರುವ ಭರತಾದ್ರಿ ಅವರು ತಮ್ಮ ಯಶಸ್ಸಿಗೆ ಕಾರಣವಾದ ಅಷ್ಟ ಸೂತ್ರಗಳನ್ನು ಉಚಿತವಾಗಿ ನೀಡಿದ್ದಾರೆ. ಸರ್ಕಾರದ ಪತ್ರಿಕಾ ಕಾರ್ಯದರ್ಶಿ ತನ್ನ ಅಭಿಪ್ರಾಯಗಳನ್ನು ಸಾರ್ವಜನಿಕವಾಗಿ ಎಂದೂ ಬಿಂಬಿಸಬಾರದು ಎಂಬುದು ಅವರ ಹಿತವಚನಗಳಲ್ಲಿ ಒಂದು. ಅಂದರೆ ಮುಖ್ಯಮಂತ್ರಿಯ ಮಾಧ್ಯಮ ಸಲಹೆಗಾರ ಇದ್ದೂ ಸತ್ತಂತಿರಬೇಕು ಎಂಬುದೇ ಅದರ ತಾತ್ಪರ್ಯ. ಮಾಧ್ಯಮಗಳಲ್ಲಿ ಬರುವ ಸುದ್ದಿಗಳ ಹಿಂದೆ 'ಪ್ಯಾಕೇಜ್ ವ್ಯವಸ್ಥೆ' ಇದೆ ಎಂದು ಅಮೀನ್ ಮಟ್ಟು ಹೇಳಿದ್ದಾರೆ ಎಂದು ಆರೋಪಿಸಿರುವ ಸತೀಶ್ ಕುಮಾರ್ ಅವರು ಇದು ಅವರ ಹುಚ್ಚು ಕಲ್ಪನೆ ಎಂದಿದ್ದಾರೆ. ಈ ವಾದ ಸರಣಿಯ ಅಸಂಬದ್ಧತೆಯನ್ನು ಈಗಾಗಲೇ ಪ್ರಸ್ತಾಪಿಸಿದ್ದೇನೆ. ಇದೇ ಹಿನ್ನೆಲೆಯಲ್ಲಿ ನರೇಶ್ ಶೆಣೈ ಅವರು ಮುಖ್ಯಮಂತ್ರಿಗೆ 20 ಪ್ರಶ್ನೆಗಳನ್ನು ಹಾಕಿ ಅಮೀನ್ ಮಟ್ಟು ಅವರು ಆ ಸ್ಥಾನದಲ್ಲಿ ಮುಂದುವರೆಯಲು ಅರ್ಹರಲ್ಲ ಎಂದು ಪ್ರತಿಪಾದಿಸಲು ತುಂಬಾ ಕಷ್ಟಪಟ್ಟಿದ್ದಾರೆ. ಆದರೆ ಕುಂಬಳ ಕಳ್ಳ ಎಂದಾಕ್ಷಣ ಇವರೆಲ್ಲ ಯಾಕೆ ಹೆಗಲು ಮುಟ್ಟಿ ನೋಡಬೇಕು ಎನ್ನುವುದೇ ಇಲ್ಲಿ ಇರುವ ಪ್ರಶ್ನೆ. ▬

ಲಂಕೇಶರ ನಂತರ ಸಾಂಸ್ಕೃತಿಕ ಎಚ್ಚರ ಕಾಯ್ದುಕೊಂಡ ಅನಂತ ಮೂರ್ತಿಯವರು

ಜಿ.ಎನ್. ನಾಗರಾಜು

ಕನ್ನಡದ ಸಾಹಿತ್ಯ, ಸಾಂಸ್ಕೃತಿಕ ಲೋಕ ಪ್ರಧಾನವಾಗಿ ಪ್ರಗತಿಪರವಾಗಿ, ಜಾತಿ ವಿರೋಧವಾಗಿ, ಕೋಮುವಾದದ ವಿರೋಧವಾಗಿ ಬೆಳೆದು, ಉಳಿದು ಬಂದಿದೆ. ಇದಕ್ಕೆ ನವೋದಯ ಸಾಹಿತ್ಯದಲ್ಲಿ ಮಾನವೀಯತೆಯನ್ನು ಜಾಗೃತ ಗೊಳಿಸಿದ ಅನೇಕ ಸಾಹಿತಿಗಳ ಕೊಡುಗೆಯನ್ನು ಸ್ಮರಿಸಬೇಕು. ಮುಖ್ಯವಾಗಿ ಜಾತಿವ್ಯವಸ್ಥೆಯ ವಿರುದ್ಧ ಹಾಗೂ ವೈಜ್ಞಾನಿಕತೆ–ವೈಚಾರಿಕತೆಯ ಬಗ್ಗೆ ತಮ್ಮ ಕಾವ್ಯ, ಕಾದಂಬರಿ, ಮತ್ತು ಭಾಷಣ, ಲೇಖನಗಳ ಮೂಲಕ ನಾಡನ್ನು ಎಚ್ಚರಗೊಳಿಸಿದ ಕುವೆಂಪುರವರು. ನಂತರ ಪ್ರಗತಿಶೀಲ ಸಾಹಿತಿಗಳಾದ ನಿರಂಜನ, ಬಸವರಾಜ ಕಟ್ಟೀಮನಿಯವರು ಕನ್ನಡದ ಓದುಗರಲ್ಲಿ ಪ್ರತಿಕೂಲ ಸಂದರ್ಭದಲ್ಲಿಯೂ ಈ ಎಚ್ಚರವನ್ನು ಕಾಯ್ದುಕೊಳ್ಳಲು ಶ್ರಮಿಸಿದರು.


ನವ್ಯ ಸಾಹಿತ್ಯದ ಸಂದರ್ಭದಲ್ಲಿ ಸಾಮಾಜಿಕ ವಿಚಾರಗಳು ಮರೆಗೆ ಸರಿದರೂ ಅಂ–ದು ದೇಶದಲ್ಲಿ ಮೊಳೆಯುತ್ತಿದ್ದ ಅತೃಪ್ತಿಗೆ ದನಿ ಕೊಟ್ಟಿತು. ಆಳುವವರನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸುವುದನ್ನು ಕಲಿಸಿದರು. ಹೊಸ ಭಾಷೆ, ಶೈಲಿ, ವಿಮರ್ಶೆ ಅವರ ಮುಖ್ಯ ಕೊಡುಗೆ. ಆದರೆ ಅದೇ ಸಮಯದಲ್ಲಿ ಮಣ್ಣಿನ ವಾಸನೆಯೆನ್ನುತ್ತಲೇ ನೆಲಮೂಲದ ಜನರ ದುಃಖ ದುಮ್ಮಾನಗಳಿಂದ ದೂರ ಸರಿದು ತಂತಮ್ಮ ಲೋಲುಪತೆಗಳೇ ಜಗತ್ತಿನ ಸಮಸ್ಯೆಗಳೆಂದು ಬಗೆದರು. ಗೋಪಾಲ ಕೃಷ್ಣ ಅಡಿಗರ ನೇತೃತ್ವದಲ್ಲಿ ಅನಂತಮೂರ್ತಿ, ಲಂಕೇಶರು, ಚಂದ್ರಶೇಖರ ಪಾಟೀಲರು, ತೇಜಸ್ವಿಯವರೂ ಸೇರಿದಂತೆ ಅನೇಕ ಸಾಹಿತಿಗಳು ಈ ದಾರಿಯನ್ನೇ ಹಿಡಿದರು. ಇಂತಹ ನವ್ಯ ಸಾಹಿತ್ಯದ ಸ್ವ ಮಗ್ನತೆಯಿಂದ ಮೊದಲು ಹೊರ ಬಂದ ತೇಜಸ್ವಿಯವರು "ಹೊಸ ಬಾಳಿನೆಡೆಗೆ "ಎಂಬ ಪ್ರಣಾಳಿಕೆಯನ್ನು ಮಂಡಿಸಿದರು. ನಂತರ ಚಂಪಾ, ಲಂಕೇಶ್ ಒಬ್ಬೊಬ್ಬರಾಗಿ ಆ ಪ್ರಭಾವದಿಂದ ಹೊರಬಂದು ಜನರ ಜೀವನದ ಕಡೆಗೆ ಅದನ್ನು ಸಾಹಿತ್ಯದ ಮೂಲಕ ಶೋಧಿಸುವ ಕಡೆಗೆ ಗಮನ ನೀಡಿದರು.

ನಂತರದ ದಿನಗಳಲ್ಲಿ ತುರ್ತು ಪರಿಸ್ಥಿತಿ ಮತ್ತು ಅದರ ನಂತರ ಎದ್ದ ರೈತ ಚಳುವಳಿ, ಕಾರ್ಮಿಕ ಚಳುವಳಿ, ದಲಿತ ಚಳುವಳಿಗಳು ಕರ್ನಾಟಕದಲ್ಲಿ ಚಳುವಳಿಗಳ ವಾತಾವರಣವನ್ನು ಸೃಷ್ಟಿಸಿದವು. ರಾಜಕೀಯ ಬದಲಾವಣೆಗಳಿಗೆ ಕಾರಣವಾದವು. ಆಗ ದಲಿತ ಸಾಹಿತ್ಯ, ಬಂಡಾಯ ಸಾಹಿತ್ಯ ಒಂದು ಕಡೆ, ಲಂಕೇಶ ಪತ್ರಿಕೆಯ ಮೂಲಕ ರಾಜಕೀಯ, ಸಾಮಾಜಿಕ ಎಚ್ಚರ, ಸಾಂಸ್ಕೃತಿಕ ವಿಮರ್ಶೆ ಮತ್ತೊಂದು ಕಡೆ, ಕರ್ನಾಟಕದಲ್ಲಿ ಪ್ರಗತಿಪರ ಪರಿಸರವನ್ನು ಬೆಳೆಸಿತು ಉಳಿಸಿತು. ತಮ್ಮದೇ ವಿಶಿಷ್ಠ ರೀತಿಯಲ್ಲಿ ವಿಜ್ಞಾನ ಆ ಧಾರಿತ ಸಾಹಿತ್ಯವನ್ನು, ಸಾಮಾಜಿಕ ಸಮಸ್ಯೆಗಳ ಬಗೆಗಿನ ಕಥೆಗಳನ್ನು ಬರೆದು ಜನಪ್ರಿಯರಾದ ತೇಜಸ್ವಿಯವರುವ ಈ ಸೆಳೆತಗಳಿಗೆ ಒಳಗಾಗದ ವಿಜ್ಞಾನ ಕಲಿತ ಯುವ ವೃಂದವನ್ನು ಸೆಳೆದರು. ಕಾರಂತ–ಲಂಕೇಶ–ಕಂಬಾರರು ಕೂಡಿ ರಂಗ ಭೂಮಿಗೆ ತಂದ ಸಂಚಲನ, ಸಮುದಾಯದ ಸಾಂಸ್ಕೃತಿಕ ಜಾಥಾಗಳು ಇವು ಕೂಡ ತಮ್ಮದೇ ಆದ ಕೊಡುಗೆಯನ್ನು ನೀಡಿದವು.

ಅನಂತ ಮೂರ್ತಿಯವರನ್ನು, ಅವರ ಕೊಡುಗೆಯನ್ನು ನೆನಪಿಸಿಕೊಳ್ಳುವಾಗ ಕರ್ನಾಟಕದ ಸಾಂಸ್ಕೃತಿಕ ವಾತಾವರಣದ ಈ ಸಂದರ್ಭದಲ್ಲಿಟ್ಟು ನೋಡಿದಾಗ ಮಾತ್ರ ಅವರನ್ನು ಅರ್ಥ ಮಾಡಿಕೊಳ್ಳುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ. ವಸ್ತು ನಿಷ್ಠವಾಗುತ್ತದೆ.

ಅನಂತಮೂರ್ತಿಯವರು ನವ್ಯದ ಮುಖ್ಯ ಲೇಖಕರಂತೆ ನವೋದಯದ ಸಾಹಿತ್ಯದ ಪ್ರಭಾವದಲ್ಲಿಯೇ ಬೆಳೆದವರು. ಕೆಲ ಕಾಲ ಅವರು ಕಮ್ಯೂನಿಸ್ಟರಾದ ನಿರಂಜನರ ಸಹವಾಸದಲ್ಲಿದ್ದವರು. ನಂತರ ಬ್ರಿಟಿಷ್ ಸಾಹಿತಿ ನವ್ಯದ ನಾಯಕ ಎಲಿಯೆಟ್ ರವರ ಹಾಗೂ ಅಡಿಗರ ಪ್ರಭಾವಕ್ಕೊಳಗಾಗಿ ನವ್ಯ ಸಾಹಿತ್ಯಕ್ಕೆ ಒಲಿದವರು. ಅಡಿಗರ ಸಾಹಿತ್ಯವನ್ನುಅರ್ಥೈಸಿಕೊಳ್ಳಲು ಅದನ್ನು ಸಮರ್ಥಿಸಿಕೊಳ್ಳಲು ಗಮನಾರ್ಹ ಕೊಡುಗೆ ನೀಡಿದವರು. ಈ ಇಬ್ಬರ ನಡುವಣ ಮೈತ್ರಿ ಅಂದಿನ ನವ್ಯ ಸಾಹಿತ್ಯಕ್ಕೆ ತಾತ್ವಿಕ ವಿವರಣೆ ಕೊಡುವುದಕ್ಕೆ ಮತ್ತು ಅಂದಿನ ಸಾಹಿತ್ಯಿಕ ಪರಿಸರವನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿತು. ಅನಂತಮೂರ್ತಿಯವರು ಉತ್ತಮ ಇಂಗ್ಲಿಷ್ ಪ್ರಾಧ್ಯಾಪಕರಾಗಿ ವಿದ್ಯಾರ್ಥಿಗಳ ಮೇಲೆ ಸಮ್ಮೋಹಕ ಪ್ರಭಾವವನ್ನು ಬೀರುತ್ತಿದ್ದರು ಎಂಬುದೂ ಈ ವಾತಾವರಣವನ್ನು ನಿರ್ಮಿಸುವಲ್ಲಿ ಸಹಾಯ ಮಾಡಿತು.

ಅನಂತಮೂರ್ತಿಯವರ ಮೊದಲ ಕಾದಂಬರಿ "ಸಂಸ್ಕಾರ" ಕನ್ನಡದಲ್ಲಿ ದೊಡ್ಡ ಚ–ರ್ಚೆಗೆ ಕಾರಣವಾಯಿತು. ಸಿನೆಮಾ ಆಗಿ ಚಲನ ಚಿತ್ರಗಳ ಹೊಸ ಅಲೆಗೆ ತನ್ನ ಕೊಡುಗೆ ನೀಡಿತು.



ಅದರಲ್ಲಿ ಚಿತ್ರಿತವಾಗಿದ್ದ ವೈದಿಕ ಕಂದಾಚಾರದ ಚಿತ್ರಣ ಹಾಗೂ ಅದಕ್ಕೆ ಆಧುನಿಕ ಚಿಂತನೆ ಒಡ್ಡಿದ ಸವಾಲು ಕನ್ನಡ ಸಾಂಸ್ಕೃತಿಕ ಲೋಕದ ಮೇಲೆ ತನ್ನ ಅಚ್ಚನ್ನು ಒತ್ತಿದೆ. ಅವರ ಅನೇಕ ಕಥೆಗಳು ಕೂಡ ಕಂದಾಚಾರ ಮತ್ತು ಸಮಾಜದ ಮೇಲೆ, ಮಹಿಳೆಯರ ಮೇಲೆ ಅದರ ಹಿಡಿತವನ್ನು ಬಿಚ್ಚಿ ತೋರಿಸಿತು. "ಪ್ರಜ್ಞೆ ಮತ್ತು ಪರಿಸರ" ಎಂಬ ವಿಮರ್ಶಾ ಅಥವಾ ಸಾಂಸ್ಕೃತಿಕ ಪ್ರಬಂಧಗಳ ಸಂಕಲನ ನವ್ಯದ ವಿಮರ್ಶೆಗೆ ಸೈದ್ಧಾಂತಿಕ ಆಧಾರವನ್ನೊದಗಿಸಿತು. ಈ ಸಂಕಲನ ಒಂದು ರೀತಿಯಲ್ಲಿ ಮೊದಲ ಪ್ರಬಂಧದಿಂದಲೇ ಕಮ್ಯೂನಿಸ್ಟ್ ವಿಚಾರಗಳೊಡನೆ ಸಂಘರ್ಷ ಮತ್ತು ಸಂವಾದದ ಆರಂಭ ಎಂದು ಹೇಳಬಹುದು. ಕಮ್ಯೂನಿಸ್ಟ್ ಸಾಹಿತ್ಯ ವಿಮರ್ಶೆಗೆ ಒಂದು ಕಡೆ ಯೂರೋಪಿನ ನವ್ಯ ಸಿದ್ಧಾಂತಗಳು ಹಾಗೂ ಲೋಹಿಯಾ ಸಿದ್ಧಾಂತಗಳನ್ನು ಆಧರಿಸಿದ ಪ್ರತಿ ಸಿದ್ಧಾಂತವನ್ನು ರೂಪಿಸುವುದಕ್ಕೇ ವಿನಿಯೋಗಿಸಿದ್ದಾರೆನ್ನುವಂತಿದೆ. ಅಂದಿನಿಂದ ಆರಂಭವಾಗಿ ಇಂದಿನವರೆಗೂ ಕಮ್ಯೂನಿಸ್ಟ್ ಸಿದ್ಧಾಂತದ ಸಮಾಜ ರಚನೆಯ ಬಗೆಗಿನ ಕೆಲ ವಿಚಾರಗಳನ್ನು ಒಪ್ಪುತ್ತಲೇ ಲೆನಿನ್, ಸ್ಟಾಲಿನ್‌ರವರ ಬಗ್ಗೆ ತಮ್ಮ ವಿರೋಧವನ್ನು ವ್ಯಕ್ತ ಪಡಿಸುತ್ತಲೇ ಬಂದಿದ್ದಾರೆ. ಆಧುನಿಕ, ಕೈಗಾರಿಕೆಗಳ ಮೇಲೆ ಆಧಾರಿತವಾದ ನಗರ ನಾಗರೀಕತೆಯ ಬದ್ಧ ವಿರೋಧಿಗಳಾಗಿದ್ದಾರೆ.

ನವ್ಯದ ಜನ ವಿರೋಧೀ, ವ್ಯಕ್ತಿ ನಿಷ್ಠ, ಸ್ವ ಮಗ್ನ ಸಾಹಿತ್ಯವನ್ನು ಉಳಿದವರು ತ್ಯಜಿಸಿದರೂ ಅನಂತ ಮೂರ್ತಿಯವರು ಅದನ್ನು ಎತ್ತಿ ಹಿಡಿಯುತ್ತಲೇ ಬಂದರು. ಇದು ಅವರ ಬಗ್ಗೆ ಅವರ ಜೊತೆ–ಗಾರರಿಂದ ಒಂದು ದೂರವನ್ನು ಸೃಷ್ಟಿಸಿತು.

ಕರ್ನಾಟಕದಲ್ಲಿ ಮೊಳೆತ ಜಾತಿ ವಿನಾಶ ಚಳುವಳಿಯ ಬಗ್ಗೆ ಮತ್ತು ಜಾತಿ ವ್ಯವಸ್ಥೆಯ ಬಗ್ಗೆ ಅವರು ದ್ವಂದ್ವ ನಿಲುವು ತಳೆದರು. "ಜಾತಿಯನ್ನು ನಾವು ಮೀರಲೇ ಬೇಕಾಗಿದೆ. ಈ ಕಾಲಕ್ಕದು ಖಂಡಿತ ಸಲ್ಲುವ ವ್ಯವಸ್ಥೆಯಲ್ಲ" ಎಂದು ಹೇಳುತ್ತಲೇ "ನಮ್ಮ ಹಲವು ಜಾತಿಗಳು, ನಂಬಿಕೆಗಳು, ನಡವಳಿಕೆಗಳು ವಿಕೇಂದ್ರಿಕೃತ ವ್ಯವಸ್ಥೆಯ ಫಲಗಳು, ಜಾತಿ ಒಂದು ವೆಲ್ ಫೇರ್ ಸಿಸ್ಟಮ್‌ನ ಹಾಗೆ ಕೆಲಸ ಮಾಡುತ್ತಾ ಬಂದಿರುವುದರಿಂದಲೇ ಅದು ಇವತ್ತಿಗೂ ಆಯಾಯ ಜಾತಿಗಾದರೂ ಕ್ರಿಯೇಟಿವ್ ಆಗಿ ಉಳಿದುಕೊಂಡಿದೆ. ಒಂದು ರೀತಿಯ ಚಲನ ಶಕ್ತಿಯನ್ನು ಆಯಾ ಜಾತಿಗಳು ಉಳಿಸಿಕೊಂಡಿವೆ ಎನ್ನಿಸುತ್ತದೆ." ಎನ್ನುತ್ತಾರೆ. ಹಾಗೆಯೆ ಮೂಢ ನಂಬಿಕೆಗಳು ಯಾಕೆ ತಪ್ಪು ಎಂದ–ರೆ ನಮ್ಮ ಅರಿವಿನ ಮಟ್ಟ ಏರದೇ ಇದ್ದ ಹಾಗೆ ತಡೆಯುತ್ತವೆ ಆದ್ದರಿಂದ. ಆದರೆ ವೈಜ್ಞಾನಿಕ ವೈಚಾರಿಕತೆಯೂ ಮೂಢ ನಂಬಿಕೆಯಷ್ಟೇ ನಮ್ಮ ಅರಿವನ್ನು ಮೊಡುಗೊಳಿಸಬಲ್ಲುದೆಂಬುದನ್ನು ಮರೆಯಬಾರದು "ಎನ್ನುತ್ತಾರೆ. ಧರ್ಮಸ್ಥಳ ಮತ್ತು ಆ ರೀತಿಯ ಧಾರ್ಮಿಕ ಕೇಂದ್ರಗಳು ಮತ್ತು ಪ್ರತಿ ಹಳ್ಳಿಯಲ್ಲಿರುವ ಭೂತವೂ ಒಂದು ಶಕ್ತಿ ಕೇಂದ್ರವೇ "ಆದ್ದರಿಂದ ಜನರ ನಂಬಿಕೆಗಳನ್ನು ವಿರೋಧಿಸಬಾರದೋ ಏನೋ ಅಂತ ಅನ್ನಿಸಿತು. "ಎನ್ನುತ್ತಾರೆ. ವಿಚಾರವಾದ ಮರೆಯುತ್ತಿರುವುದು ಆಧುನಿಕ ನಾಗರೀಕತೆಗೆ ಮತ್ತು ಕೇಂದ್ರೀಕರಣಕ್ಕೆ ನಮ್ಮ ಮನಸ್ಸುಗಳನ್ನು ಜನ ಸಾಮಾನ್ಯರಿಂದ ನಮ್ಮನ್ನು ದೂರ ಮಾಡುವಂತಹ ಉಪಾಯಗಳು ಎಂದು ಎನ್ನಿಸಿದಾಗ ಅನುಮಾನಗಳು ಸಂದಿಗ್ಧಗಳು ಹುಟ್ಟಿಕೊಳ್ಳುತ್ತವೆ "ಪಶ್ಚಿಮದ ಜ್ಞಾನ ದುರಹಂಕಾರ, ಸಾಂಸ್ಕೃತಿಕ ವಿಸ್ಮೃತಿ ಎಂಬ ಕಲ್ಪನೆಗಳ ಮೂಲಕ ಪೂರ್ವಾಗ್ರಹಗಳ ಆಶೀಶ್ ನಂದಿಯವರ ರಿವೈವಲಿಸ್ಟ್ ವಿಚಾರಗಳನ್ನು ಬಿತ್ತಲು ಅವರು ಸಾಧನವಾಗಿದ್ದು ಕೂಡ ಇಂತಹ ಕ್ರಿಯೆಗಳ ಜೊತೆಗೆ ಸೇರಿತು.

ಇಂತಹ ಅವರ ಅಭಿಪ್ರಾಯಗಳು ದ್ವಂದ್ವಗಳು, ಎಡಬಿಡಂಗಿತನ ಎಂದು ಅವರನ್ನು ಲಂಕೇಶರ, ಚಂಪಾರವರ, ಕೆಲವೊಮ್ಮೆ ತೇಜಸ್ವಿಯವರ ಕಟು ಟೀಕೆಗೆ ತುತ್ತಾಗಿಸಿತು. ಬಂಡಾಯ ಸಾಹಿತ್ಯ ಚಳುವಳಿಯಿಂದಲೂ ಟೀಕೆಗೆ ಒಳಗಾದರು. ಹೀಗೆ ಕನ್ನಡ ಪ್ರಗತಿಪರ ಧಾರೆಗಳಿಂದ ದೂರ ಉಳಿಸಿತು. ಹಾಗೆಯೇ ತೀರಾ ಇತ್ತೀಚಿನವರೆಗೂ ಅವರನ್ನು ಕಮ್ಯೂನಿಸ್ಟ್ ಚಳುವಳಿಯ ಯಾವ ಸಂಪರ್ಕದಿಂದಲೂ ದೂರ ಉಳಿಸಿತು. ಲಂಕೇಶರು, ತೇಜಸ್ವಿ ಮುಂತದ ಸಾಹಿತಿಗಳು ಮತ್ತು ಹೇಗ್ಗೋಡಿನ ನೀನಾಸಂನಲ್ಲಿ ನಡೆ–ಯುತ್ತಿದ್ದ ವಾರ್ಷಿಕ ಸಂಸ್ಕೃತಿ ಶಿಬಿರಗಳು ಮತ್ತು ಋಜುವಾತು ಪತ್ರಿಕೆಗಳ ಮೂಲಕ ಸಾಹಿತ್ಯ ಚರ್ಚೆಗಳಲ್ಲಿ ಭಾಗವಹಿಸುತ್ತಾ ಆ ರಂಗಕ್ಕೆ ಸೀಮಿತವಾಗಿ ಕ್ರಿಯಾಶೀಲರಾಗಿ ಉಳಿದರು.

ಆದರೆ ಕರ್ನಾಟಕದಲ್ಲಿ ಕೋಮುವಾದದ ಬೆಳವಣಿಗೆ ಹಾಗೂ ಜಾಗತೀಕರಣದ ಪರಿಣಾಮಗಳು, ಕನ್ನಡ ಮಾಧ್ಯಮದಂತಹ ಪ್ರಶ್ನೆಗಳು ಇತ್ತೀಚಿನ ಎರಡು ದಶಕಗಳಲ್ಲಿ ತೀವ್ರಗೊಳ್ಳುತ್ತ ಬಂದದು ಅವರನ್ನು ಸಾಹಿತ್ಯಿಕವಾಗಿ ಮಾತ್ರವಲ್ಲ ಸಾಮಾಜಿಕವಾಗಿ ಕ್ರಿಯಾಶೀಲವಾಗಿಸಿತು. ನಿರಂತರವಾಗಿ ಅಂದಂದಿನ ಪ್ರಶ್ನೆಗಳ ಮೇಲೆ ಕೋಮುವಾದದ ವಿರುದ್ಧ ಧೃಡ ನಿಲುವುಗಳನ್ನು ತಳೆದು ಅದನ್ನು ಜನರ ಮುಂದಿಡುತ್ತಾ ಹೋದರು. ಇದೇ ಸಮಯದಲ್ಲಿ ಲಂಕೇಶರು ನಿಧನರಾಗಿದ್ದು ಅವರ ಪತ್ರಿಕೆಯ ಓದುಗರಾಗಿದ್ದ ಪ್ರಗತಿಪರ ವಿಚಾರಗಳಿಗೊಲಿದ ಯುವಜನರ ನಡುವೆ ಒಂದು ಶೂನ್ಯವನ್ನು ಸೃಷ್ಟಿಸಿತ್ತು. ಬಂಡಾಯ ಸಾಹಿತ್ಯ ಚಳುವಳಿ ದಲಿತ ಚಳುವಳಿ ಹಾಗೂ ರೈತ ಚಳುವಳಿಗಳು ತಮ್ಮ ಬಿರುಸನ್ನು ಕಳೆದುಕೊಂಡಿದ್ದವು. ಇಂತಹ ಶೂನ್ಯವನ್ನು ಅವರು ಭಾಗಶಃ ತಮ್ಮ ಧೃಡ ನಿಲುವುಗಳು ಮತ್ತು ಕೋಮುವಾದದ ವಿರುದ್ಧ ಪ್ರತಿಭಟನೆಗಳ ಮೂಲಕ ತುಂಬಿದರು.

ಆ ಮೂಲಕ ಒಬ್ಬ ಸಾಮಾಜಿಕ ಕ್ರಿಯಾಶೀಲ ಬುದ್ಧಿಜೀವಿಯಾಗಿ ಕರ್ನಾಟಕದ ಜಾತ್ಯಾತೀತ ಸಾಂಸ್ಕೃತಿಕ ಪರಿಸರವನ್ನು ಆರೋಗ್ಯಕರವಾಗಿ ಉಳಿಸಿಕೊಳ್ಳಲು ಶ್ರಮಿಸಿದರು. ಅವರ ತೀವ್ರ ಅನಾರೋಗ್ಯ, ಎರಡೂ ಮೂತ್ರ ಪಿಂಡ ಸಮಸ್ಯೆಯ ನಡುವೆಯೂ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ತಮ್ಮ ವಿಚಾರಗಳನ್ನು ಜನರ ಮುಂದಿಟ್ಟರು. ಹೀಗೆ ಪ್ರಗತಿಪರರ ನಡುವೆ ಸಂಬಂಧ ಬೆಳೆಯಿತು ಮತ್ತು ಅವರ ಗೌರವಗಳಿಗೆ ಪಾತ್ರರಾದರು. ಸಾಮಾನ್ಯ ಜನರ ಮಾನಸದಲ್ಲಿ ಕೂಡ ಪ್ರವೇಶ ಪಡೆದರು. ಇದರಿಂದ ಕೋಮುವಾದಿಗಳ ಅನುಚಿತ ಟೀಕೆಗಳಿಗೂ ತುತ್ತಾದರು. "ನರೇಂದ್ರ ಮೋದಿಯವರು ಪ್ರಧಾನಿಯಾದರೆ ಅಂತಹ ದೇಶದಲ್ಲಿ ನಾನು ಇರ ಬಯಸುವುದಿಲ್ಲ" ಎಂಬ

ಜನಶಕ್ತಿ
ಕನ್ನಡ ವಾರಪತ್ರಿಕೆ

→

ಅವರ ಹೇಳಿಕೆ ರಾಜ್ಯಾದ್ಯಂತ ಮಾತ್ರವಲ್ಲ ದೇಶಾದ್ಯಂತ ಚರ್ಚೆಯನ್ನುಂಟು ಮಾಡಿತು. ಅದೇ ಸಮಯದಲ್ಲಿ ಕೋಮುವಾದಿಗಳ ಅಸಹ್ಯ ಧಾಳಿಗೆ ತುತ್ತಾಗುವಂತೆ ಮಾಡಿತು.



ಹೀಗೆ ಕೋಮುವಾದದ ವಿರುದ್ಧ ಸೆಣಸುತ್ತಿರುವಾಗಲೇ ಜಾತಿ ವ್ಯವಸ್ಥೆ, ಮೂಢ ನಂಬಿಕೆಗಳ ಬಗ್ಗೆ ಮೇಲೆ ವಿವರಿಸಿದ ಅವರ ಚಿಂತನೆಯೇನೂ ಬದಲಾಗಿರಲಿಲ್ಲ. ಉಳಿದ ಪ್ರಗತಿಪರರಂತೆ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟಗಳಲ್ಲಿ ಭಾಗವಹಿಸಲಿಲ್ಲ. ಕಾಗೋಡು ಸತ್ಯಾಗ್ರಹದಲ್ಲಿ ಭಾಗವಹಿಸಿದ ಅನುಭವವಿದ್ದರೂ ಅವರ ಜೀವನದುದ್ದಕ್ಕೂ ಮತ್ತೆ ಎಂದೂ ಭೂಸುಧಾರಣೆಯ ಬಗ್ಗೆ ದನಿ ಎತ್ತಲಿಲ್ಲ. ಅಡಿಗರಂತವರು ಭೂಸುಧಾರಣೆಯ ವಿರುದ್ಧ ಮತ್ತು ಅನೇಕ ವಿಷಯಗಳಲ್ಲಿ ಜನ ವಿರೋಧೀ ನಿಲುವು ತೆಗೆದುಕೊಂಡರೂ ಅವರನ್ನು ಟೀಕೆಗೊಳಪಡಿಸಲಿಲ್ಲ. ಅನಂತಮೂರ್ತಿಯವರ ನಿಧನದ ನಂತರ ಅವರ ಬಗ್ಗೆ ಮಾತಿನ ಹೊಳೆ ಹರಿಯುತ್ತಿದೆ. ಅದರಲ್ಲಿ ಕನ್ನಡದ ಸಾಂಸ್ಕೃತಿಕ ಆರೋಗ್ಯಕ್ಕೆ ಸಾಧಕವಾದ ಅನೇಕ ವಿಚಾರಗಳಿದ್ದರೂ ಅದರ ಜೊತೆಗೆ ಫಲವತ್ತಾದ ಮಣ್ಣೂ ಹರಿದು ಹೋಗಬಾರದು ಎಂಬ ಎಚ್ಚರ ಇರಬೇಕು.

ಇಂತಹ ಅವರ ನಿಲುವುಗಳನ್ನು ವಿಮರ್ಶಿಸುತ್ತಲೇ ಅವರ ಸಂಸ್ಕಾರ ಕಾದಂಬರಿ, ಅವರ ಘಟಶ್ರಾದ್ಧ, ಸೂರ್ಯನ ಕುದುರೆ, ಪ್ರಶ್ನೆ ಮೊದಲಾದ ಕಥೆಗಳು ಮುಂತಾದ ಸಾಹಿತ್ಯಿಕ ಕೊಡುಗೆಗಳು ಮತ್ತು ಸಾಮಾಜಿಕ ಕ್ರಿಯಾಶೀಲತೆ ಅವರನ್ನು ಕನ್ನಡ ಜನ ಮಾನಸದ ನೆನಪಿನಲ್ಲಿ ಮಾಸದಂತೆ ಉಳಿಸುತ್ತವೆ. •



ಶ್ರದ್ಧಾಂಜಲಿ

ಡಾ.ಯು.ಆರ್. ಅಂನಂತಮೂರ್ತಿ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೋ ಸಂತಾಪ:

ಖ್ಯಾತ ಬರಹಗಾರರೂ, ಸಾಮಾಜಿಕ ಚಿಂತಕರು ಆಗಿದ್ದ ಡಾ. ಯು.ಆರ್. ಅನಂತಮೂರ್ತಿ ಅವರ ನಿಧನಕ್ಕೆ ಸಿಪಿಐ(ಎಂ) ಪೊಲಿಟ್ ಬ್ಯೂರೊ ತೀವ್ರ ಸಂತಾಪವನ್ನು ವ್ಯಕ್ತಪಡಿಸಿದೆ. ಸಾಮಾಜಿಕ ಪ್ರಸ್ತುತತೆಯೊಂದಿಗೆ ಬರೆಯುವ ಅವರ ಶೈಲಿಯು ಭಾರತದ ಸಾಹಿತ್ಯದ ಮೇಲೆ ದೊಡ್ಡ ಪರಿಣಾಮವನ್ನು ಬೀರಿತ್ತು. ಸಮಾಜವಾದಿ ವಿಚಾರಧಾರೆಗೆ ಬದ್ಧರಾಗಿದ್ದ ಅವರು ಜಾತ್ಯಾತೀತ ಮೌಲ್ಯಗಳು, ಬಹುಮುಖಿ ಸಂಸ್ಕೃತಿ ಮತ್ತು ಸಾಮಾಜಿಕ ನ್ಯಾಯದ ಪ್ರಬಲ ಪ್ರತಿಪಾದಕರಾಗಿದ್ದರು. ಅವರ ನಿಧನದಿಂದಾಗಿ ದೇಶ ಅಪ್ರತಿಮ ಪ್ರತಿಭೆಯ ಬುದ್ಧಿಜೀವಿಯೊಬ್ಬರನ್ನು ಕಳೆದುಕೊಂಡಂತಾಗಿದೆ. ಸಿಪಿಐ(ಎಂ) ಪೊಲಿಟ್ ಬ್ಯೂರೊ ದುಃಖದಲ್ಲಿರುವ ಅವರ ಪತ್ನಿ, ಮಗ ಮತ್ತು ಮಗಳಿಗೆ ಹೃದಯಪೂರ್ವಕ ಸಾಂತ್ವನ ವ್ಯಕ್ತಪಡಿಸುತ್ತದೆ.

ಸಿಪಿಐ(ಎಂ) ರಾಜ್ಯ ಸಮಿತಿ

ಸಿಪಿಐ(ಎಂ) ರಾಜ್ಯ ಸಮಿತಿಯು ಖ್ಯಾತ ಸಾಹಿತಿ, ಸಮಾಜವಾದಿ ಚಿಂತಕ ಡಾ. ಯು. ಆರ್. ಅನಂತಮೂರ್ತಿ ಅವರ ನಿಧನಕ್ಕೆ ತೀವ್ರ ಸಂತಾಪ ವ್ಯಕ್ತಪಡಿಸಿದೆ. ಅವರ ನಿಧನದಿಂದ ಭಾರತ ಸಂವಿಧಾನದ ಪ್ರಧಾನ ಆಶಯಗಳಾದ ಜಾತ್ಯತೀತತೆ–ಪ್ರಜಾಪ್ರಭುತ್ವ–ಸಮಾನತೆಗಳ ಒಬ್ಬ ಪ್ರಬಲ ಪ್ರತಿಪಾದಕನನ್ನು ಕಳೆದುಕೊಂಡಿದೆ ಎಂದು ಕಂಬನಿ ಮಿಡಿದಿದೆ.

ಜನಪರ ಸಂಘಟನೆಗಳಿಂದ ಶ್ರದ್ಧಾಂಜಲಿ

ಶ್ರೇಷ್ಠ ಸಾಹಿತಿ, ಚಿಂತಕ ಡಾ|ಯು.ಆರ್. ಅನಂತಮೂರ್ತಿಯವರು ಆಗಸ್ಟ್ 22 ರಂದು ನಿಧನರಾದ ವೃತ್ತಾಂತ ಕೇಳಿ ದೇಶದ ಅದರಲ್ಲೂ ಕರ್ನಾಟಕದ ಜನತೆ ತೀವ್ರ ದು:ಖ, ಆಘಾತವನ್ನು ಅನುಭವಿಸಿತು. ಹಿಂದೂತ್ವವಾದಿ ಕೋಮುವಾದದ ವಿರುದ್ಧ ಇತ್ತೀಚೆಗಿನ ವರ್ಷಗಳಲ್ಲಿ ತೀವ್ರವಾದ ಪ್ರತಿರೋಧವನ್ನು ಅವರು ದಾಖಲಿಸಿದ್ದಾರೆ. ಅವರ ಹರಿತವಾದ ಚಿಂತನೆಗಳನ್ನು ತಾತ್ವಿಕವಾಗಿ ಎದುರಿಸಲಾಗದ ಸಂಘಪರಿವಾರ, ಅವರ ವಿರುದ್ಧ ವಾಗ್ದಾಳಿಯಲ್ಲದೆ ತಮ್ಮ ವಲಯದ ಪುಂಡರಿಂದ ಜೀವಬೆದರಿಕೆಗಳನ್ನು ಹಾಕಿಸಿದೆ. ಈ ಪುಂಡರು ಸಾವಿನಲ್ಲೂ ಅವರಿಗೆ ಅಗೌರವ ತೋರಿಸಿದ್ದಾರೆ. ಮಂಗಳೂರಿನ ಕೆಲವೆಡೆ ಹಾಗೂ ಮೂಡಿಗೆರೆಯಲ್ಲಿ ಭಜರಂಗದಳದ ಹಾಗೂ ಹಿಂದೂಜಾಗರಣ ವೇದಿಕೆಯ ಕಿಡಿಗೇಡಿಗಳು ಪಟಾಕಿ ಸಿಡಿಸಿ, ಸಿಹಿಹಂಚಿ ಸಂಭ್ರಮಿಸಿದ್ದಾರೆ. ಈ ಕುಕೃತ್ಯವನ್ನು ಖಂಡಿಸಿ ಜನಪರ ಸಂಘಟನೆಗಳು ಮಂಗಳೂರು ಮತ್ತು ಕುಂದಾಪುರದಲ್ಲಿ ಪ್ರತಿಭಟನೆ ಹಾಗೂ ಡಾ|ಅನಂತಮೂರ್ತಿಯವರಿಗೆ ಶ್ರದ್ಧಾಂಜಲಿ ಸಲ್ಲಿಸಿವೆ.

ಮಂಗಳೂರು:

ಮಂಗಳೂರು ಜಿಲ್ಲಾಧಿಕಾರಿ ಕಚೇರಿ ಎದುರು ಆಗಸ್ಟ್ 23 ರಂದು ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಡಿವೈಎಫ್ಐ, ಎಸ್ಎಫ್ಐ,ಸಮುದಾಯ, ದಸಂಸ(ಕೃಷ್ಣಪ್ಪ ಸ್ಥಾಪಿತ) ಸಿಪಿಐ(ಎಂ), ವಿಚಾರವಾದಿ ಸಂಘಗಳು ಭಾಗವಹಿಸಿದ್ದವು. ಈ ಸಂದರ್ಭದಲ್ಲಿ ಖ್ಯಾತ ಸಾಹಿತಿ ಸಾರಾ ಅಬೂಬಕರ್, ಖ್ಯಾತ ವಿಚಾರವಾದಿ ನರೇಂದ್ರ ನಾಯಕ್, ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಡಿಎಸ್ಎಸ್‌ನ ಕೃಷ್ಣಾನಂದ ಮತ್ತು ಶೇಖರ ಹೆಜ್ಮಾಡಿ ಮತ್ತು ಸಿಪಿಐ(ಎಂ)ನ ರಾಜ್ಯ ಸಮಿತಿ ಸದಸ್ಯ ವಸಂತ ಆಚಾರಿ ಮಾತನಾಡಿದರು. ಮಂಗಳೂರು ಕದ್ರಿ ಪೋಲೀಸ್ ಠಾಣೆಯ ಅಧಿಕಾರಿಗಳು ಸ್ವಯಂಪ್ರೇರಿತರಾಗಿ ಪಟಾಕಿ ಸಿಡಿಸಿದವರ ವಿರುದ್ಧ ಪ್ರಕರಣ ದಾಖಲಿಸಿದ್ದರೂ, ಗೂಂಡಾ ಕಾಯ್ದೆಯನ್ವಯ ಕೇಸು ದಾಖಲಿಸಿ ಕಿಡಿಗೇಡಿಗಳಿಗೆ ಕಠಿಣ ಶಿಕ್ಷೆ ಕೊಡಬೇಕೆಂದು ಈ ಸಂದರ್ಭದಲ್ಲಿ ಆಗ್ರಹಿಸಲಾಯಿತು.

ಕುಂದಾಪುರ:

ಡಾ|ಯು.ಆರ್.ಅನಂತಮೂರ್ತಿಯವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮ ಕುಂದಾಪುರದಲ್ಲಿ ಆಗಸ್ಟ್ 25 ರಂದು ನಡೆಯಿತು. ಈ ಕಾರ್ಯಕ್ರಮದಲ್ಲಿ ಮಂಗಳೂರು ಹಾಗೂ ಮೂಡಿಗೆರೆಗಳಲ್ಲಿ ಹಿಂದುತ್ವ ಪ್ರೇರಿತ ಕಿಡಿಗೇಡಿಗಳು ಅನಂತಮೂರ್ತಿಯವರ ಸಾವಿಗೆ ಸಂಭ್ರಮಿಸಿದ್ದನ್ನು ಖಂಡಿಸಿ ಪ್ರತಿಭಟನೆ ನಡೆಸಲಾಯಿತು. ಡಿವೈಎಫ್ಐ ಉಡುಪಿ ಜಿಲ್ಲಾ ಉಪಾಧ್ಯಕ್ಷ ಸುರೇಶ್ ಕಲ್ಲಾಗರ ಮತ್ತು ಕಾರ್ಯದರ್ಶಿ ರಾಜೇಶ್ ವಡೇರಹೋಬಳಿ ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

ಬೆಂಗಳೂರು:

ಕರ್ನಾಟಕ ಲೇಖಕಿಯರ ಸಂಘ ಸಮುದಾಯ ಡಿವೈಎಫ್ಐ, ಎಸ್ಎಫ್ಐ, ಭಾರತ ಜ್ಞಾನ ವಿಜ್ಞಾನ ಸಮಿತಿ, ಜನವಾದಿ ಮಹಿಳಾ ಸಂಘಟನೆ ಮತ್ತು ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು 'ಡಾ| ಯು.ಆರ್. ಅನಂತಮೂರ್ತಿ ನೆನಪಿನಲ್ಲಿ ಒಂದು ಸಂಜೆ' ಎಂಬ ಕಾರ್ಯಕ್ರಮವನ್ನು ಏರ್ಪಡಿಸಿ ಅಗಲಿದ ಹಿರಿಯ ಸಾಹಿತಿ ಸಮಾಜ ವಿಜ್ಞಾನಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಲಾಯಿತು.

ಸಾಹಿತಿ ಕೆ ಮರುಳಸಿದ್ದಪ್ಪ, ಪ್ರೊ.ಜಿ.ಕೆ. ಗೋವಿಂದರಾವ್, ಚಿತ್ರ ನಿರ್ದೇಶಕ ಗಿರೀಶ್ ಕಾಸರವಳ್ಳಿ, ಹಿರಿಯ ಛಾಯಾಗ್ರಾಹಕ ಕೆ.ಎಸ್, ರಾಜಾರಾಂ ಅನಂತಮೂರ್ತಿಯವರ ಕುರಿತು ನೆನಪಿನ ಬುತ್ತಿಯನ್ನು ಹಂಚಿಕೊಂಡರು.

ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ವಸುಂಧರಾ ಭೂಪತಿ, ಸಮುದಾಯ ಸಂಘಟನೆಯ ಕೆ.ಎಸ್. ವಿಮಲ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಕಾರ್ಯದರ್ಶಿ ಲಕ್ಷ್ಮಿ ಮತ್ತಿತರರು ಉಪಸ್ಥಿತರಿದ್ದರು, •

ಅನಂತ ಮೂರ್ತಿ, ಪ್ರತಿಭಟನೆಗಳು, ವಿವಾದಗಳು ಮತ್ತು ಸಾರ್ತ್ ಎಂಬ ಸಾಹಿತಿ :

ಇಂದು ಅನಂತ ಮೂರ್ತಿಯವರ ಬಗೆಗೆ ಬೇಕಾದಷ್ಟು ಮಾತುಗಳ ಹೊಳೆ ಹರಿದಿದೆ. ಅವರು ಸಮಾಕಾಲೀನ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಸಂಗತಿಗಳಿಗೆ ಪ್ರತಿಕ್ರಿಯಿಸುತ್ತಾ ವಿವಾದಗಳಿಗೆ ಸಿಕ್ಕಿ ಹಾಕಿಕೊಳ್ಳುತ್ತಿದ್ದ ಬಗ್ಗೆ, ತಾವೇ ವಿವಾದಗಳನ್ನು ಆಹ್ವಾನಿಸಿಕೊಳ್ಳುತ್ತಿದ್ದ ಬಗ್ಗೆ ಸಾಕ್ಷೀ ಪ್ರಜ್ಞೆಯಾಗಿದ್ದ ಬಗ್ಗೆ ಇತ್ಯಾದಿ .ಅವರ ಈ ಗುಣಗಳಿಗೆ ಪ್ರೇರಣೆ ನೀಡಿದ ತತ್ವಗಳು, ವ್ಯಕ್ತಿಗಳ ಬಗ್ಗೆ ಈ ಚರ್ಚೆಗಳು ಮಾತುಗಳು ಹೊಳಹು ನೀಡಲಿಲ್ಲ ಎಂದೆನ್ನಿಸಿತು.

ನಾನು ಅವರ ಸಾಹಿತ್ಯ ಬರಹಗಳನ್ನು ಬಹಳ ಹಿಂದೆಯೇ ಓದಿದ್ದೆನಾದರೂ ಕೊನೆಯ ಎರಡು ದಶಕಗಳಲ್ಲಿ , ಮುಖ್ಯವಾಗಿ ಅವರ ಸಾಹಿತ್ಯೇತರ ಕ್ರಿಯಾಶೀಲತನದ ಅವಧಿಯಲ್ಲಿಯೇ ಅವರೊಂದಿಗೆ ಬಹಳ ಒಡನಾಡಿದ್ದು. ಈ ಸಮಯದಲ್ಲಿ ಅವರ ವರ್ತನೆಯಲ್ಲಿ ಒಂದು ಪ್ಯಾಟರ್ನ್ ಗಮನಿಸಿದ್ದೇನೆ. ಅನೇಕ ಕಾರ್ಯಕ್ರಮಗಳಿಗೆ ಜನರು ಅವರನ್ನು ಅತಿಥಿಯಾಗಿ ಆಹ್ವಾನಿಸಲು ಬರುತ್ತಿದ್ದರು. ಅದರಲ್ಲಿ ಅನಂತಮೂರ್ತಿಯವರು ಯಾವುದನ್ನು ಒಪ್ಪಿಕೊಳ್ಳುತ್ತಿದ್ದರು ಎಂಬುದು ಕುತೂಹಲಕಾರಿ.

ಈ ಕಾರ್ಯಕ್ರಮ ಅವರಿಗೆ ಪ್ರಿಯವಾದದ್ದು, ಮುಖ್ಯವಾದದ್ದು ಆದ್ದರಿಂದ ಅವರು ಒಪ್ಪಿಕೊಳ್ಳುತ್ತಾರೆ ಎಂದು ನೀರೀಕ್ಷಿಸುವ ಅನೇಕ ಕಾರ್ಯಕ್ರಮಗಳನ್ನು ನಯವಾಗಿ ತಿರಸ್ಕರಿಸಿಬಿಡುತ್ತಿದ್ದರು. ಅಂದು ನಡೆಯುತ್ತಿದ್ದ ಕೆಲವು ಘಟನೆ, ಪ್ರಸಂಗಗಳ ಬಗ್ಗೆ ಅವರಿಗೆ ತಮ್ಮ ವಿಚಾರಗಳನ್ನು ಹಂಚಿಕೊಳ್ಳಬೇಕು, ಒಂದು ಚರ್ಚೆ ಎಬ್ಬಿಸಬೇಕು ಎಂದು ಎನ್ನಿಸುತ್ತದೆಯೋ ಅದ–ಕ್ಕೆ ಅವಕಾಶವಾಗುವ ಕಾರ್ಯಕ್ರಮ ಅದು ಎಷ್ಟೇ ಅಮುಖ್ಯವಾದುದಾದರೂ ಒಪ್ಪಿಕೊಳ್ಳುತ್ತಿದ್ದರು. ಅಲ್ಲಿ ಬೇಕೆಂತಲೇ ವಿವಾದವಾಗುವ ರೀತಿಯಲ್ಲಿಯೇ ಪದಗಳ ಬಳಕೆ ಮಾಡುತ್ತಿದ್ದರು. ಉದ್ದೇಶ ಸ್ಪಷ್ಟ. ಆ ವಿಚಾರಗಳು ಬಹಳ ಕಾಲ ಚರ್ಚೆಯಾಗಬೇಕು. ಸುಮ್ಮನೆ ಪತ್ರಿಕೆಗಳಿಗೆ ಒಂದು ದಿನದ ಸುದ್ದಿಯಾಗುವುದರಲ್ಲಿ ಮುಗಿದುಹೋಗಬಾರದು. ಹೀಗಾಗಿಯೇ ಅವರು ಕರ್ನಾಟಕದಲ್ಲಿ ಒಂದು ಎಚ್ಚರ ಮೂಡಿಸಲು ಸಾಧ್ಯವಾಗಿದ್ದು.

ಹೀಗೆ ಸಾಕ್ಷೀ ಪ್ರಜ್ಞೆಯಾಗುವ ಉಮೇದು, ಸಾಮಾಜಿಕ ಕ್ರಿಯಾಶೀಲತೆಯ ಮಾದರಿ ಅವರಿಗೆ ದೊರಕಿದ್ದು ಪ್ರಸಿದ್ಧ ಫ್ರೆಂಚ್ ಸಾಹಿತಿ ಸಾರ್ತ್ರ ಅವರಿಂದ ಮತ್ತು ಇಂಗ್ಲೆಂಡಿನ ಹೊಸ ಎಡ ಪಂಥದ ಸಾಹಿತಿಗಳಿಂದ. ಸಾರ್ತ್ರ ಅವರಿಗೆ ಪ್ರಿಯವಾದ ಲೇಖಕರಲ್ಲಿ ಒಬ್ಬ. ಅಸ್ತಿತ್ವವಾದದ ನಿರೂಪಕ. ನನಗೆ ಗೊತ್ತಿರುವಂತೆ ಅವರ ತ್ರಿವಳಿ ಅನಂತಮೂರ್ತಿಯವರಿಗೆ ಪ್ರಿಯವಾದ ಕೃತಿಗಳು. ಅವರು ಫ್ರಾನ್ಸ್ ನಲ್ಲಿ ಏಕ ವ್ಯಕ್ತಿ ಸೈನ್ಯವಾಗಿದ್ದವರು. ಒಬ್ಬ ಲೇಖಕ ತನ್ನ ಜೀವನದಲ್ಲಿ ಅವರಷ್ಟು ಧಾಳಿಗಳಿಗೆ–ಬಹಳ ವೈವಿಧ್ಯಮಯ ಶತ್ರುಗಳಿಂದ, ಬಹಳ ಬಲಶಾಲಿಗಳಿಂದ–ಒಳಗಾದವರು ಮತ್ಯಾರೂ ಇಲ್ಲ. ಎಂಬ ಹೆಸರು ಪಡೆದಿದ್ದವರು.

ಸಾರ್ತ್ ರವರ ಜೀವನ ತತ್ವ ಹೀಗಿತ್ತು :

ತಾನು ಜೀವಿಸುವ ಸಮಾಜದ ಕಾಳಜಿಗಳ ಬಗ್ಗೆ ಭಾವನಾತ್ಮಕ ಬದ್ಧತೆ, ಅವುಗಳ ಮೂಲಕ ಇಂದಿನ ಜೀವನದಲ್ಲಿ ಒಂದು ವೇಗವರ್ಧಕವಾಗಿ ಮತ್ತು ಭವಿಷ್ಯಕ್ಕೆ ಒಂದು ಕೊಂಡಿಯಾಗಿ ಬದುಕುವುದು. ಅವರು ಬರೆಯುತ್ತಾರೆ: ಒಬ್ಬ ಲೇಖಕನಿಗೆ ಈ ಪ್ರಮಾಣವನ್ನು ಶಿಫಾರಸು ಮಾಡುತ್ತೇನೆ.ಅವನ ಕೃತಿಗಳು ಸಿಟ್ಟನ್ನು, ತಳಮಳವನ್ನು, ನಾಚಿಕೆಯನ್ನು ದ್ವೇಷವನ್ನು, ಪ್ರೀತಿಯನ್ನು ಉಂಟುಮಾಡಬೇಕು ಆಗ ಅವನು ಜೀವಿಸುತ್ತಾನೆ.

ಅನಂತ ಮೂರ್ತಿಯವರೂ ಈ ಆಶಯಗಳಲ್ಲಿ ಹಲವನ್ನು ಜೀವಿಸಲು ಪ್ರಯತ್ನಿಸಿದ್ದಾರೆ ಎಂಬುದು ಸ್ವಯಂ ಸ್ಪಷ್ಟ. ಹಾಗೆಯೇ ಬ್ರಿಟನ್ನಿನ ರೇಮಂಡ್ ವಿಲಿಯಮ್ಸ್, ಮತ್ತಿತರರು ಕೂಡ ವಿವಿಧ ವಿಷಯಗಳ ಬಗ್ಗೆ ಪ್ರಶ್ನೆಗಳನ್ನೆತ್ತುವುದು, ಪ್ರತಿಭಟನೆಗಳಲ್ಲಿ ಪಾಲ್ಗೊಳ್ಳುವುದು ಇವುಗಳ ಮೂಲಕ ಅವರಿಗೆ ಸಾಮಾಜಿಕ ಕ್ರಿಯಾಶೀಲತೆಯ ವಿಷಯದಲ್ಲಿ ಮಾದರಿಯಾಗಿದ್ದರು. ಆದರೆ ಅವರ ಮೇಲೆ ಗಾಢವಾಗಿ ಪ್ರಭಾವ ಬೀರಿದ ಅವರ ವ್ಯಕ್ತಿತ್ವದಲ್ಲಿ ಅತ್ಯಂತ ಪ್ರಭಾವಶಾಲಿಯಾದ ಇಂತಹ ಅನೇಕ ವಿಷಯಗಳೂ ಇಂದಿನ ಚರ್ಚೆಗಳಲ್ಲಿ ಕಾಣದಾಯಿತು.

ಕಾಮ್ರೆಡ್ ಪಿ. ಕೃಷ್ಣ ಪಿಳ್ಳ



ಮಹಾನ್ ಕ್ರಾಂತಿಕಾರಿ ಸ್ವಾತಂತ್ರ್ಯ ಹೋರಾಟಗಾರ, ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ಸ್ಥಾಪಕರಲ್ಲಿ ಒಬ್ಬರಾದ ಕಾಮ್ರೆಡ್ ಪಿ. ಕೃಷ್ಣ ಪಿಳ್ಳ ನಿಧನರಾಗಿ ಇದೇ ಅಗಸ್ಟ್ 18 ಕ್ಕೆ 66 ವರ್ಷಗಳಾಗುತ್ತವೆ. 1937 ರಲ್ಲಿ, ಕೃಷ್ಣ ಪಿಳ್ಳ, ಇ.ಎಂ.ಎಸ್. ನಂಬೂದರಿಪಾದ್, ಕೆ. ದಾಮೋದರನ್ ಮತ್ತು ಎನ್.ಸಿ. ಶೇಖರ್ ಸೇರಿಕೊಂಡು ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಶಾಖೆಯೊಂದನ್ನು ರಚಿಸಿದರು. 2 ವರ್ಷಗಳ ನಂತರ ನಡೆದ ಪಕ್ಷದ ಪ್ರಥಮ ರಾಜ್ಯ ಸಮ್ಮೇಳನದಲ್ಲಿ ಪ್ರಥಮ ರಾಜ್ಯ ಕಾರ್ಯದರ್ಶಿಯಾಗಿ ಆಯ್ಕೆಯಾದ ಕೃಷ್ಣ ಪಿಳ್ಳ ಸಾಯುವ ವರೆಗೂ 9 ವರ್ಷಗಳ ಕಾಲ ಆ ಸ್ಥಾನದ ಜವಾಬ್ದಾರಿಯನ್ನು ನಿರ್ವಹಿಸಿದರು. ಅವರನ್ನು ಎಲ್ಲರೂ 'ಕಾಮ್ರೆಡ್' ಎಂದೇ ಕರೆ–ಯುತ್ತಿದ್ದರು.

ಕೃಷ್ಣ ಪಿಳ್ಳ ಇಂದಿನ ಕೊಟ್ಟಾಯಂ ಜಿಲ್ಲೆಯ ವೈಕಂ ಎಂಬಲ್ಲಿ 1906 ರಲ್ಲಿ ಒಂದು ಒಂದು ಕೃಷಿಕ ಕುಟುಂಬದಲ್ಲಿ ಜನಿಸಿದ್ದರು. ಚಿಕ್ಕವಯಸ್ಸಿನಲ್ಲೇ ಅವರು ತಮ್ಮ ತಂದೆ ಹಾಗೂ ತಾಯಿಯನ್ನು ಕಳೆದುಕೊಂಡಿದ್ದರು. ಕುಟುಂಬ ನಿರ್ವಹಣೆಯ ಹೊಣೆ ಹೊತ್ತು ಅವರು ಆಲಪ್ಪಿ ಎಂಬಲ್ಲಿ ನಾರು ಫ್ಯಾಕ್ಟರಿಯೊಂದರಲ್ಲಿ 2 ವರ್ಷಗಳ ಕೆಲಸ ಮಾಡಿದರು. ನಂತರ ಅವರು ತಮ್ಮ ಸ್ವಗ್ರಾಮಕ್ಕೆ ಹಿಂತಿರುಗಿ ಕೃಷಿ ಕೆಲಸದಲ್ಲಿ ತೊಡಗಿಸಿಕೊಂಡರು.

ಅದು ಮೊದಲ ಮಹಾಯುದ್ಧದ ಕಾಲಘಟ್ಟ. ಅಗತ್ಯ ವಸ್ತುಗಳ ಕೊರತೆ, ಕೃಷಿ ಉತ್ಪನ್ನಗಳ ಬೆಲೆ ಕುಸಿತ ಹಾಗೂ ಜಮಿನ್ದಾರಿ ಭೂಮಾಲಿಕರ ಶೋಷಣೆಯಿಂದ ಜನಸಾಮಾನ್ಯರ ಜೀವನ ದುಸ್ತರವಾಗಿತ್ತು. ಇದೇ ಸಮಯದಲ್ಲಿ ಕೇರಳವೂ ಸೇರಿದಂತೆ ದೇಶದೆಲ್ಲೆಡೆ ರಾಷ್ಟ್ರೀಯ ಆಂದೋಲನ ಬೆಳೆದು ಬರತೊಡಗಿತ್ತು.

ಕೇರಳದಲ್ಲಿ ರಾಷ್ಟ್ರೀಯ ಆಂದೋಲನವು ಸಮಾಜ ಸುಧಾರಣಾ ಆಂದೋಲನವಾಗಿ ಆರಂಭವಾಯಿತು. ಅಸ್ಪೃಶ್ಯತೆಯನ್ನು ಅಂತ್ಯಗೊಳಿಸುವುದು ಅದರ ಪ್ರಮುಖ ಘೋಷಣೆಯಾಗಿತ್ತು. ದಲಿತರಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ನೀಡಬೇಕು ಎಂಬುದು ಒಂದು ಪ್ರಮುಖ ಬೇಡಿಕೆಯಾಗಿತ್ತು. ದಲಿತರಿಗೆ ದೇವಸ್ಥಾನ ಪ್ರವೇಶ ನೀಡಬೇಕೆಂದು ಒತ್ತಾಯಿಸಿ ವೈಕಂ ಗ್ರಾಮದಲ್ಲೇ ಕಾಂಗ್ರೆಸಿಗರು ಸತ್ಯಾಗ್ರಹವೊಂದನ್ನು ಹಮ್ಮಿಕೊಂಡರು. ಗಾಂಧಿಜೀ ವಿಷಯ ತಿಳಿದು ವೈಕಂ ಗ್ರಾಮಕ್ಕೆ ಆಗಮಿಸಿ ಸತ್ಯಾಗ್ರಹದಲ್ಲಿ ಭಾಗವಹಿಸಿದರು. ಇದರೊಂದಿಗೆ ಕೃಷ್ಣ ಪಿಳ್ಳ ಗಾಂಧೀಜಿ ನೇತೃತ್ವ ನೀಡುತ್ತಿದ್ದ ರಾಷ್ಟ್ರೀಯ ಚಳುವಳಿಯತ್ತ ಆಕರ್ಷಿತರಾದರು.

1927 ರಲ್ಲಿ ಕೃಷ್ಣ ಪಿಳ್ಳೆ ಅಲಾಹಾಬಾದ್‌ಗೆ ತೆರಳಿದರು. ಆಗ ಅಲಾಹಾಬಾದ್ ರಾಷ್ಟ್ರೀಯ ಚಳುವಳಿಯ ಒಂದು ಪ್ರಮುಖ ಕೇಂದ್ರವಾಗಿತ್ತು. ಅಲ್ಲಿ ಅವರು ಹಿಂದಿ ಭಾಷೆಯನ್ನು ಅಧ್ಯಯನ ಮಾಡಿ ಸಾಹಿತ್ಯ ವಿಶಾರದ ಪದವಿಯನ್ನು ಪಡೆದರು. ಅಲ್ಲಿಂದ ಅವರು ಬ್ರಿಟಿಷ್ ಸಾಮ್ರಾಜ್ಯವಾದಿಗಳ ವಿರುದ್ಧದ ಭಾವನೆಗಳನ್ನು ಮೈಗೂಡಿಸಿಕೊಂಡು ಕೇರಳಕ್ಕೆ ಮರಳಿದರು. ಅಷ್ಟರಲ್ಲಿ ಗಾಂಧಿಜೀ 'ಉಪ್ಪಿನ ಸತ್ಯಾಗ್ರಹ' ವನ್ನು ಘೋಷಿಸಿದ್ದರು. ಕೇರಳದಲ್ಲಿಯೂ ಅದೇ ಮಾದರಿಯಲ್ಲಿ ಕಲ್ಲಿಕೋಟೆ ಸಮುದ್ರ ತೀರಕ್ಕೆ ಪಾದಯಾತ್ರೆಯೊಂದನ್ನು ಸಂಘಟಿಸಲಾಯಿತು. ಕೆ. ಕೇಳಪ್ಪನ್ ನೇತೃತ್ವವಹಿಸಿದ್ದರು. ಜಾಥಾದಲ್ಲಿ ಪಾಲ್ಗೊಳ್ಳಲಿದ್ದ ಸ್ವಯಂ ಸೇವಕರಲ್ಲಿ ಕೃಷ್ಣ ಪಿಳ್ಳೆ ಒಬ್ಬರಾಗಿದ್ದರು. ಜಾಥಾ ಕಡಲ ತೀರ ತಲುಪಿದಾಗ ಪೊಲೀಸರು ಸತ್ಯಾಗ್ರಹಿಗಳ ಮೇಲೆ ಎರಗಿ ಭೀಕರವಾಗಿ ಲಾಠಿಪ್ರಹಾರ ಮಾಡಿದರು. ಕೃಷ್ಣ ಪಿಳ್ಳ ಅವರ ಮೇಲೆ ಪೊಲೀಸರು ಕಣ್ಣಿಟ್ಟಿದ್ದರು. ಸುಮಾರು 2 ಮೈಲು ದೂರದ ವರೆಗೂ ಅವರನ್ನು ರಸ್ತೆಯ ಮೇಲೆ ಎಳೆದುತರಲಾಯಿತು. ಇತರ ಮುಖಂಡರೊಂದಿಗೆ ಅವರನ್ನು ಕಣ್ಣೂರು ಜೈಲಿಗೆ ತಳ್ಳಲಾಯಿತು.

ಕಣ್ಣೂರು ಜೈಲಿನಲ್ಲಿ ಬಂಗಾಳದ ಕೆಲವು ಕ್ರಾಂತಿಕಾರಿಗಳನ್ನು ಬಂಧಿಸಿಡಲಾಗಿತ್ತು. ಅವರೊಂದಿಗೆ ನಡೆದ ಚರ್ಚೆಯ ಪರಿಣಾಮವಾಗಿ ಕೃಷ್ಣ ಪಿಳ್ಳ ಅವರು ಗಾಂಧಿಜೀ ಸಿದ್ಧಾಂತವನ್ನು ಮೀರಿ ಯೋಚಿಸಲಾರಂಭಿಸಿದರು. 1931 ರಲ್ಲಿ ಗಾಂಧಿಜೀ ಅವರು ಅಸಹಕಾರ ಚಳುವಳಿಯನ್ನು ಹಿಂತೆಗೆದುಕೊಂಡಾಗ ಚಳುವಳಿಗಾರರನ್ನು ಬಿಡುಗಡೆ ಮಾಡಲಾಯಿತು. ಜೈಲಿನಿಂದ ಹೊರಬಂದ ಕೃಷ್ಣ ಪಿಳ್ಳ ತಮ್ಮ ಚಟುವಟಿಕೆಗಳನ್ನು ಮುಂದುವರೆಸಿದರು. ಈ ಅವಧಿಯಲ್ಲಿ ಎ.ಕೆ. ಗೋಪಾಲನ್ ನೇತೃತ್ವದಲ್ಲಿ ನಡೆದ ಐತಿಹಾಸಿಕ 'ಗುರುವಾಯೂರು ದೇವಸ್ಥಾನ ಪ್ರವೇಶ' ಹೋರಾಟದಲ್ಲಿ ಕೃಷ್ಣ ಪಿಳ್ಳ ಭಾಗವಹಿಸಿದ್ದರು. ಈ ನಡುವೆ ಅವರು ಕಾರ್ಮಿಕರನ್ನು ಮತ್ತು ರೈತರನ್ನು ಸಂಘಟಿಸತೊಡಗಿದರು. 1934 ರಲ್ಲಿ ಮುಂಬೈನಲ್ಲಿ ಜರುಗಿದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಅವರು ಭಾಗವಹಿಸಿದ್ದರು. ಇದೇ ಅಧಿವೇಶನದಲ್ಲಿ ಕಾಂಗ್ರೆಸ್ ಸೋಶಿಯಲಿಸ್ಟ್ ಪಕ್ಷದ ಸ್ಥಾಪನೆಯಾಯಿತು. ಅದರ ನಾಲ್ಕು ಜನ ಜಂಟಿ ಕಾರ್ಯದರ್ಶಿಗಳಲ್ಲಿ ಇ.ಎಂ.ಎಸ್. ಒಬ್ಬರಾಗಿ ಆಯ್ಕೆಯಾದರು. ಮುಂದೆ ಕೃಷ್ಣ ಪಿಳ್ಳ ಸಿಎಸ್‌ಪಿ ಕೇರಳ ಘಟಕದ ಕಾರ್ಯದರ್ಶಿಯಾದರು. ಕೃಷ್ಣ ಪಿಳ್ಳ ಮತ್ತು ಇ.ಎಂ.ಎಸ್. ಸೇರಿಕೊಂಡು ರಾಜ್ಯಾದ್ಯಂತ ಒಡಾಡಿ ಸಿಎಸ್‌ಪಿ ಘಟಕಗಳನ್ನು ರಚಿಸಿದರು. ರೈತರ ಮತ್ತು ಕಾರ್ಮಿಕರ ಸಂಘಗಳನ್ನು ಕಟ್ಟಿದರು. ಕ್ರಮೇಣ ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಎಡಪಂಥೀಯರು ಬಹುಸಂಖ್ಯಾತರಾದರು.

ಅಂದು ಕಮ್ಯೂನಿಸ್ಟ್ ಪಕ್ಷ ನಿಷೇದಿಸಲ್ಪಟ್ಟಿತ್ತು. ಸಿಎಸ್‌ಪಿಯ ಅನೇಕ ಮುಖಂಡರು ಭೂಗತರಾಗಿ ಕೆಲಸ ಮಾಡುತ್ತಿದ್ದ ಕಮ್ಯೂನಿಸ್ಟ್ ಮುಖಂಡರ ಸಂಪರ್ಕಕ್ಕೆ ಬಂದರು. 1937 ರಲ್ಲಿ ಕೇರಳದಲ್ಲಿ ಕಮ್ಯೂನಿಸ್ಟ್ ಪಕ್ಷದ ಪ್ರಥಮ ಶಾಖೆ ಆರಂಭವಾಯಿತು. ಇ.ಎಂ.ಎಸ್. ಮತ್ತು ಕೃಷ್ಣ ಪಿಳ್ಳೆ ಸಿಎಸ್‌ಪಿ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ಇದ್ದುಕೊಂಡೇ ಕಮ್ಯೂನಿಸ್ಟ್ ಪಕ್ಷವನ್ನು ಕಟ್ಟಿ ಬೆಳೆಸಲು ಶ್ರಮಿಸುತ್ತಿದ್ದರು. 1939 ರಲ್ಲಿ ಎರಡನೇ ಮಹಾಯುದ್ಧ ಪ್ರಾರಂಭವಾಯಿತು. ಕಾಂಗ್ರೆಸ್ ಈ ಸಂದರ್ಭವನ್ನು ಬ್ರಿಟಿಷ್ ಸರ್ಕಾರದೊಂದಿಗೆ ಚೌಕಾಸಿ ಮಾಡಿಕೊಳ್ಳಲು ಬಳಸಿಕೊಂಡಿತು. ಸಿಎಸ್‌ಪಿ ಯುದ್ಧವನ್ನು ಬೆಂಬಲಿಸಲೂ ಇಲ್ಲ, ವಿರೋಧಿಸಲೂ ಇಲ್ಲ. ಕಮ್ಯೂನಿಸ್ಟ್ ಪಕ್ಷ ಮಾತ್ರ ಯುದ್ಧವನ್ನು ಬಲವಾಗಿ ವಿರೋಧಿಸಿತು. ಹೋರಾಟವನ್ನು ತೀವ್ರಗೊಳಿಸಲು ಅದು ಕರೆನೀಡಿತು. ಸಿಎಸ್‌ಪಿಯ ಅನೇಕ ಕಾರ್ಯಕರ್ತರು ಸಿಪಿಐ ನ ನಿಲುಮೆಗೆ ಆಕರ್ಷಿತರಾದರು. ಅವರು ಸಿಎಸ್‌ಪಿ ಯನ್ನು ತೊರೆದು ಸಿಪಿಐ ರಾಜ್ಯ ಘಟಕವನ್ನು ಸ್ಥಾಪಿಸಲು ತೀರ್ಮಾನ ಮಾಡಿದರು. 1939 ರಲ್ಲಿ ಗುಪ್ತವಾಗಿ ಸಭೆ ಸೇರಿದ ಸಿಎಸ್‌ಪಿಯ ಸುಮಾರು 90 ಜನ ಕಾರ್ಯಕರ್ತರು ಸಿಎಸ್‌ಪಿ ರಾಜ್ಯ ಘಟಕವನ್ನು ಸಿಪಿಐ ರಾಜ್ಯ ಘಟಕವನ್ನಾಗಿ ಪರಿವರ್ತಿಸಲು ತೀರ್ಮಾನಿಸಿದರು.

ರಾಜ್ಯಾದ್ಯಂತ ಕಮ್ಯೂನಿಸ್ಟ್ ಪಕ್ಷವನ್ನು ಸಂಘಟಿಸುವುದರಲ್ಲಿ ಕೃಷ್ಣ ಪಿಳ್ಳ ಪ್ರಮುಖ ಪಾತ್ರವನ್ನು ನಿರ್ವಹಿಸಿದರು. ರಾಜ್ಯಾದ್ಯಂತ ಒಡಾಡಿ ಅವರು ಅನೇಕ ಕಾರ್ಮಿಕ ಸಂಘಗಳನ್ನು, ಕಿಸಾನ್ ಸಭಾಗಳನ್ನು ಕಟ್ಟಿದರು. ಇದರ ಪರಿಣಾಮವಾಗಿ ಈ ಅವಧಿಯಲ್ಲಿ ಅನೇಕ ಸಮರಶೀಲ ಚಳುವಳಿಗಳು ಬೆಳೆದು ಬಂದವು. ಉತ್ತರ ಮಲಬಾರ್ ರೈತರ ಹೋರಾಟ, ಕಯ್ಯೂರು ಹೋರಾಟ, ಪುನ್ನಪ್ರ ವಯಾಲಾರ್ ಹೋರಾಟ ಮೊದಲಾದ ಚಾರಿತ್ರಿಕ ಹೋರಾಟಗಳಲ್ಲಿ ಕೃಷ್ಣ ಪಿಳ್ಳೆ ಪಾತ್ರವಿತ್ತು. ಅವರೊಬ್ಬ ಉತ್ತಮ ಸಂಘಟನಾಕಾರರು. ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತನನ್ನು ಆತನ ವ್ಯಕ್ತಿಗತ ಸಮಸ್ಯೆಗಳನ್ನು ಅವರು ಬಲ್ಲವರಾಗಿದ್ದರು. ಪಕ್ಷದ ಮೇಲೆ ಕಾಂಗ್ರೆಸ್ ದಾಳಿ ಮಾಡುತ್ತಿದ್ದಾಗ ಪ್ರತಿದಾಳಿಯನ್ನು ಸಂಘಟಿಸುವ ಅಪ್ರತಿಮ ಸಾಮರ್ಥ್ಯ ಅವರಲ್ಲಿತ್ತು. ಸಂಘರ್ಷಗಳಲ್ಲಿ ಮುಂಚೂಣಿಯ ಪಾತ್ರವನ್ನು ಅವರು ನಿರ್ವಹಿಸುತ್ತಿದ್ದರು. ಅನೇಕ ಸಲ ಅವರು ಭೂಗತರಾಗಿದ್ದುಕೊಂಡೇ ಪಕ್ಷವನ್ನು ಕಟ್ಟಿ ಬೆಳೆಸಿದರು. ಸದಾ ಶೋಷಿತರ ವಿಮೋಚನೆಗಾಗಿ ಪರಿತಪಿಸುತ್ತಿದ್ದ ಅವರು 1948 ಅಗಸ್ಟ್ 18 ರ ರಾತ್ರಿ ಕೊನೆಯುಸಿರೆಳೆದರು. ಆಗ ಅವರಿಗೆ ಕೇವಲ 42 ವರ್ಷ ವಯಸ್ಸು. ಹಾವು ಕಡಿತದಿಂದ ಅವರು ಸಾವನ್ನಪ್ಪಿದರು. ಅವರಿಗೆ ತನ್ನ ಜೀವವನ್ನು ಉಳಿಸಿಕೊಳ್ಳಲು ಸಾಧ್ಯವಿರಲಿಲ್ಲ. ಸಾವಿಗಾಗಿ ಕಾಯುತ್ತಾ ಅವರು ಒಂದು ಕಾಗದದ ಮೇಲೆ ಈ ಕೆಲವು ಮಾತುಗಳನ್ನು ಬರೆದರು. "ನಾನು ದೃಷ್ಠಿಯನ್ನು ಕಳೆದುಕೊಳ್ಳುತ್ತಿದ್ದೇನೆ, ಕ್ಷಣಕ್ಷಣಕ್ಕೂ ನಿಶಕ್ತನಾಗುತ್ತಿದ್ದೇನೆ. ನನಗೆ ಏನಾಗಲಿದೆ ಎಂಬುದನ್ನು ನಾನು ಬಲ್ಲೆ. ಮುನ್ನಡೆಯಿರಿ ಸಂಗಾತಿಗಳೆ, ಲಾಲ್ ಸಲಾಂ". ■

ಜನಶಕ್ತಿ
ಕನ್ನಡ ವಾರಪತ್ರಿಕೆ

ಭೂ ಸುಧಾರಣೆಯಿಂದ ಕೃಷಿ ಕೂಲಿಕಾರರ ಸಮಸ್ಯೆಗೆ ಪರಿಹಾರ

ಕೆ. ಹನುಮೇಗೌಡ

ಅಖಿಲ ಭಾರತ ಕೃಷಿ ಕೂಲಿಕಾರರ ಸಂಘ (AIAWU) ರಾಷ್ಟ್ರಮಟ್ಟದ ಸಂಘಟನೆಯಾಗಿದ್ದು ರಾಜ್ಯದಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘಟನೆಯು ಕೃಷಿ ಕೂಲಿಕಾರರನ್ನು ಸಂಘಟಿಸಿ ಕೂಲಿಕಾರರ ವಿವಿಧ ಸಮಸ್ಯೆಗಳನ್ನು ಹೋರಾಟದ ಮೂಲಕ ಇತ್ಯರ್ಥಪಡಿಸುವ ಸಂಘಟನೆಯಾಗಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕು ಶೇ. 95ರಷ್ಟು ಬಡ ಕೃಷಿ ಕೂಲಿಕಾರರಿರುವ ಹುಲ್ಲೇಗಾಲ ಗ್ರಾಮದಲ್ಲಿ ಸುಮಾರು 1998–99ರ ಸಂದರ್ಭದಲ್ಲಿ ರಾಜ್ಯ ಮುಖಂಡರಾದ ಕಾಂ.ಜಿ.ಎನ್. ನಾಗರಾಜ್‌ರವರು ಧ್ವಜಸ್ಥಂಭವನ್ನು ಉದ್ಘಾಟನೆ ಮಾಡುವ ಮೂಲಕ ಸಂಘವನ್ನು ಕಟ್ಟಿಬೆಳೆಸಲು ಚಾಲನೆ ನೀಡಿದರು. ಆ ದಿನಗಳಲ್ಲಿ ಹೆಚ್ಚು ವಿದ್ಯಾರ್ಥಿ ರಂಗ, ಯುವಜನ ರಂಗದಲ್ಲಿ ಕೆಲಸ ಮಾಡುತ್ತಿದ್ದ ಪ್ರಮುಖ ಮುಖಂಡರಾದ ಪುಟ್ಟಮಾದು, ಹನುಮಂತು, ನಾಗೇಗೌಡ, ಜವರಪ್ಪರವರ ಆಸಕ್ತಿಯಿಂದ ಕೃಷಿ ಕೂಲಿಕಾರರ ಸಂಘವು ಪ್ರಾರಂಭವಾಯಿತು.

ಪೂರ್ಣ ಪ್ರಮಾಣದಲ್ಲಿ ಕೂಲಿಯನ್ನು ಮಾಡಿ ಜೀವನ ನಡೆಸುತ್ತಿದ್ದ ಶೇ. 95ರಷ್ಟು ಕೃಷಿ ಕೂಲಿಕಾರರಿದ್ದ ಹುಲ್ಲೇಗಾಲ ಗ್ರಾಮದಲ್ಲಿ ಸಂಘವನ್ನು ಪ್ರಾರಂಭ ಮಾಡಿದ ನಂತರ ಶ್ರೀಮಂತ ರೈತರ ದಾಳಿಗಳು ನಿರಂತರವಾಗಿ ಕೃಷಿ ಕೂಲಿಕಾರರು ಮತ್ತು ಸಂಘದ ಮುಖಂಡರ ಮೇಲೆ ನಡೆಯಲಾರಂಭಿಸಿದವು. ಹುಲ್ಲೇಗಾಲ ಗ್ರಾಮದ ಮೂಲಕ ಹಂತ ಹಂತವಾಗಿ ತಳಗವಾದಿ, ಕಾಗೇಪುರ, ಕಾಳಕೆಂಪನದೊಡ್ಡಿ ಗ್ರಾಮಗಳಿಗೆ ಸಂಘವೂ ವಿಸ್ತಾರವಾಗಿ ಕೃಷಿ ಕೂಲಿಕಾರರ ಕೂಲಿ ಹೆಚ್ಚಳ, ಮನೆ ನಿವೇಶನ, ರೇಷನ್ ಕಾರ್ಡ್, ಉಚಿತ ಭಾಗ್ಯಜ್ಯೋತಿ ವಿದ್ಯುತ್ ಮತ್ತು ಆಕ್ರಮ–ಸಕ್ರಮಕ್ಕಾಗಿ, ಕುಡಿಯುವ ನೀರಿಗಾಗಿ, ರಸ್ತೆ ದುರಸ್ತಿಗಾಗಿ, ಗ್ರಾಮಗಳಿಗೆ ಬಸ್ ಸೌಕರ್ಯಕ್ಕಾಗಿ, ಜಾತಿ ದೌರ್ಜನ್ಯದ ವಿರುದ್ಧ, ಪೋಲಿಸ್ ದೌರ್ಜನ್ಯದ ವಿರುದ್ಧ ನಿರಂತರವಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ಮಳವಳ್ಳಿ ತಾಲೂಕಿನಲ್ಲಿ, ಹೋರಾಟಗಳನ್ನು ಮಾಡುವ ಮೂಲಕ ಕೃಷಿ ಕೂಲಿಕಾರರ, ಜನಸಾಮಾನ್ಯರ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಯಶಸ್ವಿಯಾಯಿತು. ನಂತರ ಸಂಘವು ಮಳವಳ್ಳಿ ತಾಲ್ಲೂಕಿನ ವಿವಿಧ ಹಳ್ಳಿಗಳಲ್ಲಿ ಪ್ರಾರಂಭವಾಗಿ ಹಂತ ಹಂತವಾಗಿ ಮದ್ದೂರು ತಾಲ್ಲೂಕು, ಮಂಡ್ಯ ತಾಲ್ಲೂಕು, ಶ್ರೀರಂಗಪಟ್ಟಣ ತಾಲ್ಲೂಕು, ನಾಗಮಂಗಲ ತಾಲ್ಲೂಕು, ಕೆ.ಆರ್. ಪೇಟೆ ತಾಲ್ಲೂಕು, ಪಾಂಡವಪುರ ತಾಲ್ಲೂಕು, ಮೈಸೂರು ಜಿಲ್ಲೆಯ ಟಿ. ನರಸೀಪುರ ತಾಲ್ಲೂಕುಗಳಲ್ಲಿ ವಿಸ್ತರಣೆಯಾಗಿ ಮಂಡ್ಯ ಜಿಲ್ಲೆಯಲ್ಲಿ ಸುಮಾರು 40ಸಾವಿರ ಸದಸ್ಯತ್ವ ಹೊಂದಿರುವ ಕೃಷಿ ಕೂಲಿಕಾರರ ನಡುವೆ ಕೆಲಸ ಮಾಡುವ ಏಕೈಕ ಪ್ರಗತಿಪರ ಸಂಘಟನೆಯಾಗಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಜಿಲ್ಲೆಯಲ್ಲಿ ಹೆಸರುವಾಸಿಯಾಯಿತು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಮೊದಲನೇ ಜಿಲ್ಲಾ ಸಮ್ಮೇಳನ ಮಂಡ್ಯದಲ್ಲಿ, 2ನೇ ಜಿಲ್ಲಾ ಸಮ್ಮೇಳನ ಮದ್ದೂರಿನಲ್ಲಿ, ಈಗ ಮೂರನೇ ಜಿಲ್ಲಾ ಸಮ್ಮೇಳನವು "ನಿವೇಶನ ರಹಿತ ಬಡವರಿಗೆ ನಿವೇಶನ ಮತ್ತು ಮನೆ ನೀಡಲು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಸಮರ್ಪಕವಾಗಿ ಜಾರಿಗೊಳಿಸಲು, ಕೃಷಿ ಕೂಲಿಕಾರರಿಗೆ ಪ್ರತ್ಯೇಕ ಕೇಂದ್ರೀಯ ಶಾಸನಕ್ಕಾಗಿ ಮತ್ತು ನಶಿಸುತ್ತಿರುವ ಕೃಷಿ ಕ್ಷೇತ್ರವನ್ನು ರಕ್ಷಿಸಲು ಒತ್ತಾಯಿಸಿ" 2014 ಜುಲೈ 19ರಂದು ಮಳವಳ್ಳಿಯಲ್ಲಿ ನಡೆಯಿತು. ಮಳವಳ್ಳಿ ಪಟ್ಟಣದ ತಾಲ್ಲೂಕು ಪಂಚಾಯಿತಿ ಕಛೇರಿಯಿಂದ ಸಾವಿರಾರು ಕೃಷಿ ಕೂಲಿಕಾರರು ಮುಖ್ಯ ರಸ್ತೆ ಮಾರ್ಗವಾಗಿ

– ದಿನೇಶ್ ಅಮೀನ್‌ಮಟ್ಟು

ಮೆರವಣಿಗೆ ಮೂಲಕ ರೋಟರಿ ಶಾಲಾ ಅವರಣಕ್ಕೆ ಆಗಮಿಸಿದರು. ಬಹಿರಂಗಸಭೆಯನ್ನು ಹಿರಿಯ ಪತ್ರಕರ್ತರರು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಶ್ರೀ. ದಿನೇಶ್



ಅಮಿನ್‌ಮಟ್ಟುರವರು ಉದ್ಘಾಟಿಸಿದರು. ಅವರು ಮಾತನಾಡುತ್ತಾ ಪ್ರತಿನಿತ್ಯ ಜನಸಾಮಾನ್ಯರು ಉಪಯೋಗಿಸುವ ಆಹಾರ ವಸ್ತುಗಳು, ಇತರೆ ವಸ್ತುಗಳ ಬೆಲೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿದೆ. ಕೃಷಿ ಕೂಲಿಕಾರರಾಗಿ ದಲಿತರೇ ಹೆಚ್ಚು ಇದ್ದಾರೆ. ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗುತ್ತಿದೆ, ರಾಜ್ಯದಲ್ಲಿ ಭೂ ಸುಧಾರಣೆ ಸಮರ್ಪಕವಾಗಿ ಜಾರಿಯಾಗುವ ತನಕ ಕೂಲಿಕಾರರ ಸಮಸ್ಯೆ ಬಗೆಹರಿಯುವುದು ಕಷ್ಟಕರವಾಗಿದೆ. ರಾಜ್ಯದಲ್ಲಿ ಭೂ ಸುಧಾರಣೆ ಕಾಯ್ದೆ 1974ರಲ್ಲಿ ಜಾರಿಗೆ ಬಂದಿದ್ದರೂ ಈ ಕಾಯ್ದೆಯನ್ನು ಸಮರ್ಪಕ ರೀತಿಯಲ್ಲಿ ರಾಜ್ಯದಲ್ಲಿ ಅನುಷ್ಠಾನಗೊಳಿಸಲಿಲ್ಲ. ಭೂ ಸುಧಾರಣಾ ಕಾಯ್ದೆಯನ್ನು ಹೆಚ್.ಡಿ. ದೇವೇಗೌಡರು ದುರ್ಬಲಗೊಳಿಸಿದರು. ರೈತರ ಭೂಮಿಯು ಮುಕ್ತ ಆರ್ಥಿಕ ನೀತಿಗಳಿಂದ ಕೈಗಾರಿಕೆಗಳ ಪಾಲಾಗುತ್ತಿದ್ದು ರೈತರು ಸಹ ಕೃಷಿ ಕೂಲಿಕಾರರಾಗುತ್ತಿದ್ದಾರೆ. ಇದನ್ನು ತಡೆಗಟ್ಟಲು ಕೃಷಿಗೆ ಹೆಚ್ಚಿನ ಆದ್ಯತೆಯನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನೀಡಬೇಕು.

ರೈತರು ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗೆ, ರಿಯಲ್ ಎಸ್ಟೇಟ್‌ಗಳಿಗೆ ಮಾರಾಟ ಮಾಡಿದ ನಂತರ ಬಂದ ಹಣದಲ್ಲಿ ಆಡಂಬರದ ಖರ್ಚುಗಳನ್ನು ಮಾಡಿ ಭೂಮಿಯೂ ಇಲ್ಲದೆ, ಹಣವೂ ಇಲ್ಲದೆ ರೈತರು ಕೂಲಿಕಾರರಾಗುತ್ತಿರುವುದನ್ನು ರಾಜ್ಯದಲ್ಲಿ ದಿನನಿತ್ಯ ನಾವು ನೋಡುತ್ತಲೇ ಇದ್ದೇವೆ. ಇದರ ಜೊತೆಗೆ ರೈತರು ಕೃಷಿಯಿಂದ ಯಾವುದೇ ಲಾಭಬರುವುದಿಲ್ಲ ಎಂದು ತಿಳಿದು ತಮ್ಮ ಜಮೀನುಗಳನ್ನು ಮಾರಾಟ ಮಾಡುತ್ತಾರೆ. ರೈತರು ಬೆಳೆದ ಬೆಳೆಗಳಿಗೆ ವೈಜ್ಞಾನಿಕ ಬೆಲೆಯನ್ನು ಸರ್ಕಾರ ನಿಗದಿಮಾಡಿದರೆ ರೈತರು, ಕೃಷಿಕೂಲಿಕಾರರು ನೆಮ್ಮದಿಯಾಗಿರಲು ಸಾ ಧ್ಯ ಎಂದು ಹೇಳಿದರು.

ಇತ್ತೀಚೆಗೆ ತಾನೆ ಅಧಿಕಾರಕ್ಕೆ ಬಂದ ನರೇಂದ್ರ ಮೋದಿಯವರ ಬಿಜೆಪಿ ಸರ್ಕಾರ ಮಂಡಿಸಿದ ಬಜೆಟ್ ಭಾರತದ ರೈತರಿಗೆ – ಕೂಲಿಕಾರರ ಬದುಕಿಗೆ ದೊಡ್ಡ ಹೊಡೆತವನ್ನೇ ಕೊಡಲಿದೆ. ನೂರು ಸ್ಮಾರ್ಟ್ ಸಿಟಿಗಳ ಹೆಸರಿನಲ್ಲಿ ಲಕ್ಷಾಂತರ ಬಡರೈತರ ಭೂಮಿಯನ್ನೂ ಕಿತ್ತು–ಕೊಂಡು ಬೃಹತ್ ಬಹುರಾಷ್ಟ್ರೀಯ ಮತ್ತು ರಾಷ್ಟ್ರೀಯ ಕಂಪನಿಗಳ ಕೈಗೆ ಒಪ್ಪಿಸುವ ಹುನ್ನಾರ ನಡೆದಿದೆ. ರೈತರು ಮತ್ತು ಕೃಷಿ ಕೂಲಿಕಾರರ ಜೀವನಾಧಾರವನ್ನೇ ಕಳೆದುಕೊಳ್ಳುತ್ತಾರೆ. ಇವುಗಳ

ಪುಟ 15 ಕ್ಕೆ

ಮಂಡ್ಯಾ ಜಿಲ್ಲಾ ಪಂಚಾಯಿತಿಗೆ ಕೃಷಿ ಕೂಾಲಿಕಾರರು – ರೈತರ ಮುತ್ತಿಗೆ :–

ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸ & ಬಾಕಿ ಕೂಲಿ ಹಣ ಪಾವತಿಸಲು, ಮನೆ ನಿವೇಶನ & ಹಕ್ಕು ಪತ್ರ ನೀಡಲು ಹಾಗೂ ಮದ್ದೂರಿನಲ್ಲಿ ಆಲಭುಜನಹಳ್ಳಿ ಕೆರೆ ಒತ್ತುವರಿ ತೆರವುಗೊಳಿಸಲು ಒತ್ತಾಯಿಸಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ 3 ನೇ ಜಿಲ್ಲಾ ಸಮ್ಮೇಳನದಲ್ಲಿ ನಿರ್ಣಯಿಸಿದಂತೆ ಆಗಸ್ಟ್ – 11 ರಂದು ಜಿಲ್ಲೆಯ 7 ತಾಲೂಕುಗಳ ಸಾವಿರಾರು ಕೃಷಿ ಕೂಲಿಕಾರರು, ರೈತರು ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಮೂಲಕ ಬೇಡಿಕೆಗಳ ಬಗ್ಗೆ ಘೋಷಣೆ ಕೂಗುತ್ತಾ ಮಂಡ್ಯ ಜಿಲ್ಲಾ ಪಂಚಾಯಿತಿ ಕಛೇ–ರಿಯ ಪ್ರಮುಖ ಗೇಟಗಳನ್ನು ತಳ್ಳಿಕೊಂಡು ಕಛೇರಿ ಆವರಣದೊಳಗೆ ನುಗ್ಗಿ ಜಿಲ್ಲೆಯ ಸಿಇಓ ವಿರುದ್ಧ & ಬೇಡಿಕೆಗಳ ಘೋಷಣೆಯನ್ನು ಕೂಗುತ್ತ ಜಿಲ್ಲಾ ಪಂಚಾಯತಿ ಸಭಾಂಗಣದಲ್ಲಿ ಜಿಲ್ಲೆಯ ಕೆಡಿಪಿ ಸಭೆ ನಡೆಯುತ್ತಿದ್ದನು ಅಡ್ಡಿ ಪಡಿಸಲುಪ್ರಯತ್ನಿಸಿದರು.



ಸಾವಿರಾರು ಕೃಷಿ ಕೂಲಿಕಾರರು ಜಿಲ್ಲಾ ಪಂಚಾಯತಿ ಕಛೇರಿ ಆವರಣದೊಳಗೆ ನುಗ್ಗಿದಾಗ ಸಂಘದ ಮುಖಂಡರಿಗೂ ಪೊಲೀಸ್ ಅಧಿಕಾರಿಗಳಿಗೂ ಮಾತಿನ ಚಕಮಕಿ ನಡೆದು ಪೊಲೀಸ್ ಅಧಿಕಾರಿಗಳು ಪ್ರತಿಭಟನಾಕಾರರನ್ನು ಬಂಧಿಸಲು ಪ್ರಯತ್ನಿಸಿದರು. ನಂತರ ಜಿಲ್ಲಾ ಪಂಚಾಯತಿ ಅದ್ಯಕ್ಷರು, ಉಪಾಧ್ಯಕ್ಷರು, ಜಿಲ್ಲಾ ಉಪಕಾರ್ಯದರ್ಶಿಯವರು ಸ್ಥಳಕ್ಕೆ ಆಗಮಿಸಿ ನಿಮ್ಮ ಸಮಸ್ಯೆಗಳನ್ನು ಈಡೇರಿಸುತ್ತೇವೆ, ಸಂಜೆ 3 ಗಂಟೆಗೆ ಸಂಘದ ಮುಖಂಡರ ಜೊತೆ ಸಭೆಯಲ್ಲಿ ಮಾತುಕತೆ ನಡೆಸುವುದಾಗಿ ಹೇಳಿದರು. ನಂತರ ಕೃಷಿ ಕೂಲಿಕಾರರು – ರೈತರು ಜಿಲ್ಲಾ ಪಂಚಾಯತಿ ಕಛೇರಿಯ ಮುಂಭಾಗದಲ್ಲಿ ಕುಳಿತು ಪ್ರತಿಭಟನೆ ಪ್ರಾರಂಭ ಮಾಡಿದರು. ಪ್ರತಿಭಟನಾಕಾರರನ್ನು ಉದ್ದೇಶಿಸಿ ಕೆ. ಬಸವರಾಜು, ಎಂ. ಪುಟ್ಟಮಾದು, ಟಿ. ಯಶವಂತ್, ನಂಜುಂಡ ಸ್ವಾಮಿ ರವರು ಮಾತನಾಡಿದರು.

ಜಿಲ್ಲೆಯಾದ್ಯಂತ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಕೂಲಿಕಾರರು ಉದ್ಯೋಗ ಚೀಟಿ ಪಡೆಯಲು, ನಮೂನೆ–6ನ್ನು ಸ್ವೀಕರಿಸಲು, ಕೆಲಸ ಮತ್ತು ಕೂಲಿ ಹಣ ಪಡೆಯಲು ಹೀಗೆ ಪ್ರತಿ ಹಂತದಲ್ಲೂ ಹೋರಾಟ ಮಾಡಬೇಕಾದ ಪರಿಸ್ಥಿತಿ ಬಂದಿದೆ. ಪ್ರಸಕ್ತ 2014–15ನೇ ಸಾಲು ಪ್ರಾರಂಭಗೊಂಡು 4 ತಿಂಗಳುಗಳು ಕಳೆದಿದ್ದರೂ ಕೆಲಸ ಕೇಳಿ ಅರ್ಜಿ ಸಲ್ಲಿಸಿರುವ ಕೂಲಿಕಾರರಿಗೆ ಒಂದು ವಾರದ ಕೆಲಸವನ್ನು ಸಹ ನೀಡಿಲ್ಲ. ಮಳೆಯ ಅಭಾವದಿಂದ ಜಿಲ್ಲೆಯಲ್ಲಿ ಕೃಷಿ ಚಟುವಟಿಕೆ ಕುಂಠಿತಗೊಂಡು ಕೂಲಿಕಾರರು ಕೆಲಸವಿಲ್ಲದೆ ಪರಿತಪಿಸುತ್ತಿರುವಾಗ ಒಓ–ಖಇಉಂ ದಡಿ ಕೆಲಸ ನೀಡುವ ಮೂಲಕ ಕೂಲಿಕಾರರ ನೆರವಿಗೆ ನಿಲ್ಲಬೇಕಾದ ಸ್ಥಳೀಯ ಮತ್ತು ಜಿಲ್ಲಾಡಳಿತ ಕೆಲಸ ನಿರಾಕರಿಸುವ ಮೂಲಕ ಕೂಲಿಕಾರರನ್ನು ಸಂಕಷ್ಟಕ್ಕೀಡುಮಾಡಿವೆ.

ಸರ್ಕಾರಿ ಭೂಮಿಯಲ್ಲಿ ವಾಸವಿರುವ ಬಡವರಿಗೆ ಹಕ್ಕು ಪತ್ರ ನೀಡಲು ಮತ್ತು ನಿವೇಶನ ರಹಿತಗೆ ನಿವೇಶಗಳನ್ನು ನೀಡಲು ಹಾಗೂ ಮದ್ದೂರು ತಾಲ್ಲೂಕು ಆಲಭುಜನಹಳ್ಳಿ ಕೆರೆ ಒತ್ತುವರಿ ತೆರವುಗೊಳಿಸಲು ಒತ್ತಾಯಿಸಿ ಕಳೆದ 3 ವರ್ಷಗಳಿಂದಲೂ ನಿರಂತರವಾಗಿ ಹೋರಾಟ ಮಾಡಿ ಮನವಿ ಸಲ್ಲಿಸಲಾಗಿದೆ. ಹೋರಾಟದ ಸಂದರ್ಭಗಳಲ್ಲಿ ಸಂಘದ ಮುಖಂಡರುಗಳೊಟ್ಟಿಗೆ ಸಭೆ ನಡೆಸಿದ್ದನ್ನು ಬಿಟ್ಟರೆ ಸಭೆಯ ತೀರ್ಮಾನಗಳನ್ನು ಜಾರಿ ಮಾಡುವಲ್ಲಿ ಜಿಲ್ಲಾಡಳಿತ ಸಂಪೂರ್ಣ ವಿಫಲವಾಗಿರುವುದನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಮತ್ತು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸುತ್ತವೆ ಮತ್ತು ತಕ್ಷಣದಲ್ಲಿ ಕೂಲಿಕಾರರ ಮತ್ತು ನಿವೇಶನ ರಹಿತರ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸುತ್ತವೆ

ಸಂಜೆ 3–30 ಕ್ಕೆ ಪ್ರತಿಭಟನೆ ನಡೆಸುತ್ತಿದ್ದ ಸ್ಥಳಕ್ಕೆ ಜಿಲ್ಲಾ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಜಿಲ್ಲಾ ಉಪ ಕಾರ್ಯದರ್ಶಿ, ತಾಲೂಕಿನ ಎಲ್ಲಾ ಇಔ ಅಧಿಕಾರಿಗಳು ಜಿಲ್ಲಾ ಪಂಚಾಯತಿಯ ಪ್ರಮುಖ ಅಧಿಕಾರಿಗಳು ಸ್ಥಳಕ್ಕೆ ಬಂದು ಸಂಘದ ಪ್ರತಿಯೊಂದು ಬೇಡಿಕೆಗಳ ಬಗ್ಗೆ ಚರ್ಚಿಸಿ ಸಮಸ್ಯೆಯನ್ನು ಬಗೆಹರಿಸಲು ಮುಂದಾದರು. ಮರುದಿನದಿಂದಲೇ 12 ಗ್ರಾಮ ಪಂಚಾಯತಿಗಳಲ್ಲಿ ಉದ್ಯೋಗಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ನೀಡುವುದಾಗಿಭರವಸೆ ನೀಡಿದರು.


ಈ ಪ್ರತಿಭಟನೆಯ ನೇತೃತ್ವವನ್ನು ಕೃಷಿ ಕೂಲಿಕಾರ ಸಂಘದ ಮುಖಂಡರಾದ ಎಂ. ಪುಟ್ಟಮಾದು, ಕೆ. ಬಸವರಾಜು, ನಂಜುಂಡಸ್ವಾಮಿ, ಕೆ. ಹನುಮೇಗೌಡ, ಸರೋಜಮ್ಮ, ಶಿವಮಲ್ಲಯ್ಯ, ಸುರೇಂದ್ರ, ಚಂದ್ರಣ್ಣ, ಪುಟ್ಟಮಾದೇಗೌಡ, ಹನುಮೇಶ್, ಪ್ರದೀಪಕುಮಾರ್, ಶಂಕ್ರಪ್ಪ, ಕೃಷ್ಣ ಹಾಗೂ ಕರ್ನಾಟಕ ಪ್ರಾಂತ ರೈತ ಸಂಘದ ಯಶವಂತ್, ಶಿವಣ್ಣರವರು ವಹಿಸಿದರು. ಕೊಟ್ಟ ಭರವಸೆಯಂತೆ ಮರುದಿನದಿಂದಲೇ 12 ಗ್ರಾಮ ಪಂಚಾಯತಿಗಳಲ್ಲಿ ಕೆಲಸ ಕೊಡಲು ಆರಂಭಿಸಲಾಯಿತು.



ಕಂಬಾಲಪಲ್ಲಿ : ನ್ಯಾಯಾಲಯದ ತೀರ್ಪು ನಿರಾಶಾದಾಯಕ

ಹದಿನಾಲ್ಕು ವರ್ಷಗಳ ಹಿಂದೆ ಚಿಂತಾಮಣಿ ತಾಲೂಕಿನ ಕಂಬಾಲಪಲ್ಲಿಯಲ್ಲಿ ಮೇಲ್ಜಾತಿ ಭೂಮಾಲಿಕರು ಏಳು ಜನ ದಲಿತರನ್ನು ಜೀವಂತ ಸುಟ್ಟುಹಾಕಿದ ಅಮಾನುಷ ಪ್ರಕರಣವನ್ನು ಮರು ವಿಚಾರಣೆಗೆ ಒಳಪಡಿಸಬೇಕೆಂಬ ಮೇಲ್ಮನವಿಗಳನ್ನು ತಿರಸ್ಕರಿಸಿ ರಾಜ್ಯ ಉಚ್ಚನ್ಯಾಯಾಲಯ ನೀಡಿದ ತೀರ್ಪು ರಾಜ್ಯದಲ್ಲಿ ಜಾತಿ ದಮನದ ವಿರುದ್ದ ಹೋರಾಡುತ್ತಿರುವ ಸಂಘಟನೆಗಳಿಗೆ ತೀವ್ರ ನಿರಾಶೆಯನ್ನು ಉಂಟುಮಾಡಿದೆ. ಕಂಬಾಲಪಲ್ಲಿ ಹತ್ಯಾಕಾಂಡದ 32 ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯ ಕಾರಣಕ್ಕಾಗಿ ಅಧೀನ ನ್ಯಾಯಾಲಯ 2006ರಲ್ಲೇ ಖುಲಾಸೆ ಮಾಡಿತ್ತು. ಅಧೀನ ನ್ಯಾಯಾಲಯದ ಆದೇಶ ರದ್ದುಗೊಳಿಸಿ ಮರು ವಿಚಾರಣೆಗೆ ನಿರ್ದೇಶಿಸಬೇಕೆಂದು ಸರ್ಕಾರ ಮತ್ತು ವೆಂಕಟರಾಯಪ್ಪ ಎಂಬವರು ಸಲ್ಲಿಸಿದ್ದ ಮೇಲ್ಮನವಿಗಳನ್ನು ನ್ಯಾ. ಮೋಹನ ಶಾಂತನಗೌಡರ್ ಮತ್ತು ನ್ಯಾ.ಸಿ.ಆರ್. ಕುಮಾರಸ್ವಾಮಿ ಅವರಿದ್ದ ವಿಭಾಗೀಯ ಪೀಠ ವಜಾಗೊಳಿಸಿದೆ.

ಪ್ರಕರಣದ ಮರ ವಿಚಾರಣೆಗೆ ಒತ್ತಾಯಿಸಿ ಸಿಪಿಐ(ಎಂ) ಚಿಂತಾಮಣಿಯಿಂದ ಬೆಂಗಳೂರಿಗೆ ಕಾಲ್ನಡಗೆ ಜಾಥಾವನ್ನು ಸಂಘಟಿಸಿತ್ತು. ದಲಿತ ಸಂಘರ್ಷ ಸಮಿತಿಗಳು ಹೋರಾಟಗಳನ್ನು ಹಮ್ಮಿಕೊಂಡಿದ್ದವು. ಸಾರ್ವಜನಿಕ ಒತ್ತಡಕ್ಕೆ ಮಣಿದ ರಾಜ್ಯ ಸರ್ಕಾರ ಅಧೀನ ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ನ್ಯಾಯಾಲಕ್ಕೆ ಸಲ್ಲಿಸಲಾದ ದೋಷಾರೋಪ ಪಟ್ಟಿಯಲ್ಲಿ ಹೆಸರಿಸಲಾಗಿದ್ದ ಎಲ್ಲ ಸಾಕ್ಷಿಗಳ ವಿಚಾರಣೆ ನಡೆಸಲಾಗಿಲ್ಲ; ಪ್ರತ್ಯಕ್ಷ ಸಾಕ್ಷಿಗಳು ತೆಲುಗು ಭಾಷೆಯಲ್ಲಿ ನೀಡಿದ ಹೇಳಿಕೆಗಳನ್ನು ಕನ್ನಡಕ್ಕೆ ಭಾಷಾಂತರ ಮಾಡುವಾಗ ಗೊಂದಲಗಳಾಗಿವೆ; ತನಿಖಾಧಿಕಾರಿ ಮತ್ತು ವೈದ್ಯಾಧಿಕಾರಿಗಳ ಸೂಕ್ತ ವಿಚಾರಣೆ ನಡೆದಿಲ್ಲ; ನಾಗರಿಕ ಸಮಾಜವೇ ತಲೆತಗ್ಗಿಸುವಂತಹ ಘಟನೆಯಾಗಿದ್ದು ಪ್ರಕರಣದ ಮರು ವಿಚಾರಣೆಗೆ ಅನುಮತಿ



ಮೃತಪಟ್ಟವರ ಸಂಬಂಧಿ

ನೀಡಬೇಕು ಎಂದು ಸರ್ಕಾರ ಮೇಲ್ಮನವಿ ಸಲ್ಲಿಸಿತ್ತು. ಘಟನೆಯ ಪ್ರತ್ಯಕ್ಷ ಸಾಕ್ಷಿಗಳು ಅಧೀನ ನ್ಯಾಯಾಲದಲ್ಲಿ ಪ್ರತಿಕೂಲ ಹೇಳಿಕೆ ನೀಡಿದ್ದಾರೆ. ಮೃತರ ಕುಟುಂಬ ವರ್ಗದವರೂ ವಿಚಾರಣೆಗೆ ಸೂಕ್ತ ರೀತಿಯಲ್ಲಿ ಸಹಕರಿಸಿಲ್ಲ. ಆರೋಪಿಗಳ ಆರೋಪ ಸಾಬೀತು ಪಡಿಸುವಂತಹ ಪ್ರಬಲ ಸಾಕ್ಷಿಗಳನ್ನು ಪೊಲೀಸರು ಒದಗಿಸಿಲ್ಲ. ಘಟನೆಯನ್ನು ಪ್ರತ್ಯಕ್ಷವಾಗಿ ಕಂಡಿರದ ಪೊಲೀಸರ ಹೇಳಿಕೆಗಳನ್ನು ಪ್ರಬಲ ಸಾಕ್ಷಿ ಎಂದು ಪರಿಗಣಿಸಲು ಬರುವುದಿಲ್ಲ. ಸಾಕ್ಷಿಗಳು ತಟಸ್ಥರಾದಲ್ಲಿ ಅವರನ್ನು ಸಾಕ್ಷಿ ಹೇಳುವಂತೆ ಬಲವಂತಪಡಿಸಲು ಅಧೀನ ನ್ಯಾಯಾಲಯಕ್ಕೆ ಅಧಿಕಾರವಿಲ್ಲ. ಆದ್ದರಿಂದ ಆರೋಪಿಗಳನ್ನು ಖುಲಾಸೆಗೊಳಿಸಿದ ಅಧೀನ ನ್ಯಾಯಾಲಯದ ತೀರ್ಪು ಸರಿಯಾಗಿದೆ ಎಂದು ಉಚ್ಚನ್ಯಾಯಾಲಯದ ವಿಭಾಗೀಯ ಪೀಠ ಅಭಿಪ್ರಾಯ ಪಟ್ಟಿದೆ. ಹೀಗೆ ಅನ್ಯಾಯವಾಗಿ ಸುಟ್ಟು ಭಸ್ಮವಾದ ಕಂಬಾಲಪಲ್ಲಿ ದಲಿತರಗೆ ಮತ್ತೊಮ್ಮೆ ನ್ಯಾಯವನ್ನು ನಿರಾಕರಿಸಿದಂತಾಗಿದೆ.

ನಡೆದದ್ದೇನು?

ಕಂಬಾಲಪಲ್ಲಿ ನರಮೇಧ ನಡೆದದ್ದು 2000ರ ಮಾರ್ಚ್11 ರಂದು, ದಲಿತ ಸಂಘರ್ಷ ಸಮಿತಿಯ ಚಟುವಟಕೆಗಳು ವಿಸ್ತಾರಗೊಳ್ಳುತ್ತಿದ್ದ ಕಾಲಘಟ್ಟ, ದಲಿತರ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿರುವ ಅವಿಭಾಜಿತ ಕೋಲಾರ ಜಿಲ್ಲೆಯಲ್ಲಿಯೂ ಡಿ.ಎಸ್.ಎಸ್. ಗ್ರಾಮಮಟ್ಟದಲ್ಲಿ ದಲಿತರನ್ನು ಸಂಘಟಸತೊಡಗಿತ್ತು. ಖ.ಎಸ್.ಎಸ್. ಘಟಕಗಳ ಸ್ಥಾಪನೆಗೆ ಮೇಲ್ಜಾತಿ ಶ್ರೀಮಂತರ ವಿರೋಧವೂ ಬೆಳೆಯತೊಡಗಿತ್ತು.

ಕಂಬಾಲಪಲ್ಲಿ ಗ್ರಾಮದ ದಲಿತ ಯುವಕರಲ್ಲಿಯೂ ಜಾಗೃತಿ ಮೂಡಲಾರಂಭಿಸಿತ್ತು. ಗ್ರಾಮದಲ್ಲಿ ಡಿ.ಎಸ್.ಎಸ್. ಘಟಕ ಸ್ಥಾಪನೆಗೆ ಮೇಲ್ಜಾತಿ ಯುವಕರು ವಿರೋಧ ವ್ಯಕ್ತಪಡಿಸುತ್ತಿದ್ದದ್ದು ದಲಿತ ಯುವಕರ ಅಸಮಾಧಾನಕ್ಕೆ ಕಾರಣವಾಗಿತ್ತು. ದಲಿತ ಯುವಕರು ಒಂದಿಷ್ಟು ವಿದ್ಯ ಹಾಗೂ ಹಣ ಸಂಪಾದನೆ ಮಾಡಿಕೊಂಡು ತಲೆಎತ್ತಿ ಒಡಾಡುವುದನ್ನು ಮೇಲ್ಜಾತಿ ಯುವಕರಿಗೆ ಸಹಿಸಲಾಗಲಿಲ್ಲ. ಈ ಹಿನ್ನೆಲೆಯಲ್ಲಿ ದಲಿತ ಮತ್ತು ಮೇಲ್ಜಾತಿ ಯುವಕರ ಗುಂಪುಗಳ ನಡುವೆ ಆಗಾಗ ಚಕಮಕಿಗಳು ಎರ್ಪಡುತ್ತಿದ್ದವು.

ಅಂದು ನಡೆದ ಒಂದು ಚಕಮಕಿಯಲ್ಲಿ ಮೇಲ್ಜಾತಿ ಯುವಕರು ಶ್ರೀರಾಮಪ್ಪ ಎಂಬ ದಲಿತ ಯುವಕನ ಗುಂಪಿಗೆ ಸೇರಿದ್ದ ಹುಡುಗರ ಮೇಲೆ ಹಲ್ಲೆ ಮಾಡಿದರು. ಹಲ್ಲೆಗೊಳಗಾದ ದಲಿತ ಯುವಕರು ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದರು. ಇದರಿಂದ ಕುಪಿತರಾದ ಮೇಲ್ಜಾತಿ ಯುವಕರು ಪೊಲೀಸ್ ಠಾಣೆಯಿಂದ ವಾಪಸ್ಸಾಗುತ್ತಿದ್ದ ದಲಿತರ ಯುವಕರ ಮೇಲೆ ದಾಳಿ ಮಾಡಿದರು. ಹೊಡೆದಾಟದಲ್ಲಿ ಕೃಷ್ಣರೆಡ್ಡಿ ಎಂಬ ಯುವಕ ಸಾವನ್ನಪ್ಪಿದ. ಕ್ಷಣಾರ್ಧದಲ್ಲಿ ಕಂಬಾಲಪಲ್ಲಿ ರಣರಂಗವಾಯಿತು. ಪ್ರಾಣ ಉಳಿಸಿಕೊಳ್ಳಲು ದಲಿತ ಯುವಕ ಶ್ರೀರಾಮಪ್ಪ ಮತ್ತು ಆತನ ಸಹೋದರ ಆಂಜನಪ್ಪ ತಮ್ಮ ಮನೆಗೆ ಹೋಗಿ ಬಾಗಿಲು ಹಾಕಿಕೊಂಡರು ಕೇಕೆಹಾಕುತ್ತಾ ದಲಿತ ಕೇರಿಗೆ ನುಗ್ಗಿದ ಮೇಲ್ಜಾತಿ ಜನಜಂಗುಳಿ ಸೀಮೆಎಣ್ಣೆ ವ್ಯಾಪಾರಿಯಿಂದ ಬ್ಯಾರೆಲ್ ಸೀಮೆ ಎಣ್ಣೆ ತಂದು ಶ್ರೀರಾಮಪ್ಪ ಅವರ ಮನೆಯ ಮೇಲೆ ಸುರಿದು ಮನೆಗೆ ಬೆಂಕಿ ಇಟ್ಟರು. ಏನಾಗುತ್ತಿದೆ ಎಂದು ತಿಳಿಯುವುದರೊಳಗಾಗಿ ಮನೆಯೊಳಗಿದ್ದ ಶ್ರೀರಾಮಪ್ಪ ಆತನ ಸಹೋದರ ಆಂಜನಪ್ಪ, ಅವರ ತಾಯಿ ರಾಮಕ್ಕ, ಅಕ್ಕ ಸುಬ್ಬಮ್ಮ ಸಂಬಂಧಿಕರಾಗಿದ್ದ ಪಾಪಮ್ಮ, ನರಸಿಂಹ ಮತ್ತು ಅಂಗವಿಕಲ ಪಾಪಣ್ಣ ಎಂಬ ಏಳು ಜನ ಸುಟ್ಟು ಕರಕಲಾದರು. ಬೆಂಕಿ ನಂದಿಸಲು ಬಂದಿದ್ದ ಅಗ್ನಿಶಾಮಕ ಸಿಬ್ಬಂದಿಯನ್ನೂ ತಡೆಯಲಾಯಿತು. ಗ್ರಾಮಗಳಲ್ಲಿ ಸವರ್ಣೀಯರು ಮತ್ತು ದಲಿತರ ನಡುವೆ ಹೆಚ್ಚುತ್ತಿರುವ ಘರ್ಷಣೆಗಳ ಸಂದರ್ಭದಲ್ಲಿ ಆಡಳಿತ ತುರ್ತು ಹಾಗೂ ದೃಢವಾದ ಕ್ರಮಗಳನ್ನು ಕೈಗೊಳ್ಳದಿದ್ದಾಗ ಇಂತಹ ದುರಂತಗಳು ಮರಕಳಿಸುತ್ತವೆ.

ದೌರ್ಜನ್ಯ ಪ್ರಕರಣಗಳ ಇತ್ಯರ್ಥಕ್ಕೆ ಕಾಲಮಿತಿ ನಿಗದಿಯಾಗಬೇಕು!

ಕಂಬಾಲಪಲ್ಲಿ ದಲಿತರ ಸಜೀವ ದಹನ ಪ್ರಕರಣದಲ್ಲಿ ದಲಿತರಿಗೆ ನ್ಯಾಯ ಸಿಗದಿರಲು ಪ್ರಕರಣದ ವಿಚಾರಣೆಗೆ ದೀರ್ಘ ಸಮಯ ತೆಗೆದುಕೊಂಡಿರುವುದು ಒಂದು ಪ್ರಮುಖ ಕಾರಣವಾಗಿದೆ. ಈ ದೀರ್ಘ ಅವದಿಯಲ್ಲಿ ಶ್ರೀಮಂತ ಆರೋಪಿಗಳಿಗೆ ಸಾಕ್ಷಿದಾರರನ್ನು ಬೆದರಿಸಲು ದುಡ್ಡು ಕೊಟ್ಟು ಬಾಯಿ ಮುಚ್ಚಿಸಲು ಸಾಧ್ಯವಾಯಿತು ಹೀಗಾಗಿ ಪ್ರತ್ಯಕ್ಷ ಸಾಕ್ಷಿಗಳೂ ಪ್ರತಿಕೂಲವಾಗಿ ಬದಲಾದರು. ಈಗ, ಕೊನೆಯ ಪ್ರಯತ್ನದ ಭಾಗವಾಗಿ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸುವುದು ಅನಿವಾರ್ಯವಾಗಿದೆ.

ದಲಿತರ ಮೇಲೆ ಇಂತಹ ದೌರ್ಜನ್ಯಗಳನ್ನು ತಡೆಗಟ್ಟುವ ಭಾಗವಾಗಿ ಎಸ್.ಸಿ./ಎಸ್.ಟಿ. ದೌರ್ಜನ್ಯ ತಡೆಕಾಯ್ದೆಯನ್ನು ತಿದ್ದುಪಡಿ ಮಾಡಿ ಬಲಪಡಿಸಬೇಕಾಗಿದೆ. ಕಾಯ್ದೆಯಲ್ಲಿ ಗುರುತಿಸದಿರುವ ಅಪರಾಧಗಳನ್ನು ಸ್ಪಷ್ಟವಾಗಿ ಸೇರ್ಪಡೆ ಮಾಡಬೇಕಾಗಿದೆ. ಅಪರಾಧಿಗಳಿಗೆ ವಿಧಿಸುವ ಶಿಕ್ಷೆಯನ್ನು ಮತ್ತಷ್ಟು ಕಠಿಣಗೊಳಿಸಬೇಕಾಗಿದೆ, ದೌರ್ಜನ್ಯ ವೆಸಗುವವರಿಗೆ ನ್ಯಾಯಾಲಯದಲ್ಲಿ ಸುಲಭವಾಗಿ ಜಾಮೀನು ಸಿಗುವುದನ್ನು ತಡೆಯ ಬೇಕಾಗಿದೆ. ದೌರ್ಜನ್ಯಕ್ಕೊಳಗಾದ ದಲಿತರಿಗೆ ವಿಳಂಬ ಮಾಡಿದೆ ಪರಿಹಾರ ಪುನರ್ವಸತಿ ಕಲ್ಪಿಸಬೇಕಾಗಿದೆ. ಹೆಚ್ಚು ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸಿ ದೌರ್ಜನ್ಯ ಪ್ರಕರಣಗಳನ್ನು ಕಾಲಮಿತಿಯೊಳಗೆ ತ್ವರಿತವಾಗಿ ಇತ್ಯರ್ಥಗೊಳಿಸಲು ಹೆಚ್ಚು ವಿಶೇಷ ಸಾರ್ವಜನಿಕ ಅಭಿಯೋಜಕರನ್ನು (ಪಬ್ಲಿಕ್ ಪ್ರಾಸಿಕ್ಯೂಟರ್) ನೇಮಿಸಬೇಕು. ದೌರ್ಜನ್ಯಕ್ಕೊಳಗಾದವರ ಮತ್ತು ಸಾಕ್ಷಿದಾರರ ಹಕ್ಕುಗಳನ್ನು ಕಾಯ್ದೆಯಲ್ಲಿ ಸ್ಪಷ್ಟಪಡಿಸಬೇಕು. ದೂರು ಕೊಟ್ಟವರಿಗೆ ಮತ್ತು ಸಾಕ್ಷಿದಾರರಿಗೆ ಅಗತ್ಯ ರಕ್ಷಣೆಯನ್ನು ಒದಗಿಸಬೇಕು. ಜಾತಿ ತಾರತಮ್ಯ ಮಾಡುವ ಎಲ್ಲ ಆಚರಣೆಗಳನ್ನು ಶಿಕ್ಷಾರ್ಹ ಅಪರಾಧಗಳೆಂದು ಪರಿಗಣಿಸುವಂತಾಗಬೇಕು. ಈ ನಿಟ್ಟಿನಲ್ಲಿ ವ್ಯಾಪಕ ಜನಾಂದೋಲನವನ್ನು ರೂಪಿಸಲು ಸಾಧ್ಯವಾಗಬೇಕು. ದಲಿತರನ್ನು ಪ್ರತ್ಯೇಕವಾಗಿ ಸಂಘಟಿಸುವುದನ್ನು ಕೈಬಿಟ್ಟು ಜಾತಿ ಅಸ್ಪೃಶ್ಯತೆ ವಿರುದ್ಧ ಹೋರಾಡಲು ಬಯಸುವವರೆಲ್ಲರನ್ನು ಒಳಗೊಳ್ಳವ ಚಳುವಳಿಯನ್ನು ಬಲಪಡಿಸಬೇಕು. •

ಪ್ರಕಟಣೆ

ಜನಶಕ್ತಿ ವಾರಪತ್ರಿಕೆಯ ವಿಶೇಷ ಸಂಚಿಕೆಗೆ ಜಾಹಿರಾತು ನೀಡಬಯಸುವವರಿಗೆ ಮತ್ತು ಜಾಹಿರಾತು ಸಂಗ್ರಹಕಾರರಿಗೆ ಈ ಮೂಲಕ ತಿಳಿಸುವುದೇನೆಂದರೆ,

ಜನಶಕ್ತಿ ವಿಶೇಷ ಸಂಚಿಕೆಗೆ ಜಾಹಿರಾತು ನೀಡಲು ಕಾಲಾವಕಾಶವನ್ನು 2014 ಸಪ್ಟಂಬರ್ 15ರ ವರೆಗೂ ವಿಸ್ತರಿಸಲು ನಿರ್ಧರಿಸಲಾಗಿದೆ, ಈ ಅವಕಾಶವನ್ನು ಬಳಸಿಕೊಂಡು ಜಾಹಿರಾತುಗಳನ್ನು ನೀಡುವ ಮೂಲಕ ಪತ್ರಿಕೆಯನ್ನು ಪ್ರೋತ್ಸಾಹಿಸಬೇಕೆಂದು ಕೋರುತ್ತೇವೆ.

ರೂ. 500 ರಂತೆ ಪತ್ರಿಕೆಗೆ ನೆರವು ಸಂಗ್ರಹಿಸಿ ನೀಡುವ ಸಿಪಿಐ(ಎಂ) ಶಾಖೆಗಳಿಗೆ ಒಂದು ವರ್ಷದ ವರೆಗೆ ಪತ್ರಿಕೆಯನ್ನು ಕಳುಹಿಸಲು ತೀರ್ಮಾನಿಸಲಾಗಿದ್ದು ಇದರ ಪ್ರಯೋಜನ ಪಡೆಯಬೇಕೆಂದು ಕೋರಲಾಗಿದೆ.



ಚಂದ್ರಶೇಖರ್ .ಜಿ
ವ್ಯವಸ್ಥಾಪಕರು

ಜನಶಕ್ತಿ
ಕನ್ನಡ ವಾರಪತ್ರಿಕೆ

ನವ-ಉದಾರವಾದಿ ಯುಗದ ಕಲ್ಲಿದ್ದಲು ಗಣಿ ಹಂಚಿಕೆಯೆಲ್ಲ ಕಾನೂನುಬಾಹಿರ

ಎನ್‌ಡಿಎ ಯನ್ನೂ ಯುಪಿಎ ಜತೆಗೆ ಕಟಕಟೆಯಲ್ಲಿ ನಿಲ್ಲಿಸಿರುವ ಸುಪ್ರಿಂ ಕೋರ್ಟ್ ತೀರ್ಪು

1993ರಿಂದ 2011ರ ವರೆಗೆ ಮಾಡಿರುವ 218 ಕಲ್ಲಿದ್ದಲು ಗಣಿ ಹಂಚಿಕೆಗಳೆಲ್ಲವೂ ಕಾನೂನುಬಾಹಿರ ಎಂದು ದೇಶದ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೂ ಇರುವ ಮೂವರು ನ್ಯಾಯಾಧೀಶರ ಪೀಠ ತೀರ್ಪಿತ್ತಿದೆ.

ಜುಲೈ 1992ರಲ್ಲಿ, ನವ–ಉದಾರೀಕರಣ ಯುಗದ ಆರಂಭದಲ್ಲೇ ಕಲ್ಲಿದ್ದಲು ಗಣಿಗಳನ್ನು, ಮುಖ್ಯವಾಗಿ ಖಾಸಗಿಯವರಿಗೆ, ಅವರ ಸ್ವಂತ ವಿದ್ಯುತ್ ಉತ್ಪಾದನೆಗೆಂದು ನೀಡಲು ಸ್ರೀನಿಂಗ್ ಕಮಿಟಿ ಅಂ–ದರೆ ತಪಾಸಣೆ ಸಮಿತಿಯೊಂದನ್ನು ರಚಿಸಿ ಮೊದಲು ಬಂದವರಿಗೆ ಮೊದಲು ಆದ್ಯತೆ' ಎಂಬ ಹೆಸರಿನಲ್ಲಿ ದೇಶದ ಕಲ್ಲಿದ್ದಲು ಸಂಪತ್ತನ್ನು ಹಂಚಲಾಗುತ್ತಿದೆ. ಇದರಿಂದ ಕೆಲವೇ ಕಂಪನಿಗಳಿಗೆ, ಹೆಚ್ಚಾಗಿ ಖಾಸಗಿ ಕಂಪನಿಗಳಿಗೆ 10.7ಲಕ್ಷ ಕೋಟಿ ರೂ.ಗಳಷ್ಟು 'ಅನಿರೀಕ್ಷಿತ ಲಾಭದ ಸುರಿಮಳೆ' ಲಭಿಸುವಂತಾಗಿದೆ, ಹಾಗೂ ದೇಶದ ಖಜಾನೆಗೆ 1.86ಲಕ್ಷ ಕೋಟಿ ರೂ. ನಷ್ಟವಾಗಿದೆ ಎಂದು ಭಾರತದ ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳ (ಸಿಎಜಿ) ಕಚೇರಿ ಲೆಕ್ಕ ಹಾಕಿತ್ತು. ಅದನ್ನು ಆಗಿನ ಪ್ರಧಾನ ಮಂತ್ರಿಗಳೇ ಪ್ರಶ್ನಿಸಿದ್ದರು. ಅಗಿನ ಪ್ರಧಾನ ಪ್ರತಿಪಕ್ಷ ಹಾಗೂ ಈಗಿನ ಆಳುವ ಪಕ್ಷ ಇದು ಕೇವಲ ಆಗಿನ ಸರಕಾರದ ದುಷ್ಕೃತ್ಯ ಎಂಬಂತೆ ಬಿಂಬಿಸಿತ್ತು.

ಆದರೆ ಈಗ ಸುಪ್ರಿಂ ಕೋರ್ಟಿನ ತೀರ್ಪು ಹಿಂದಿನ ಕಾಂಗ್ರೆಸ್ ನೇತೃತ್ವದ ಸರಕಾರಗಳೊಂದಿಗೆ, ಈಗಿನ ಆಳುವ ಪಕ್ಷ ಬಿಜೆಪಿಯ ನೇತೃತ್ವದ ಎನ್‌ಡಿಎ ಸರಕಾರಗಳನ್ನೂ ಕಟಕಟೆಯಲ್ಲಿ ನಿಲ್ಲಿಸಿದೆ. "ಈ ಹಂಚಿಕೆಗಳು ಏಕಪ್ರಕಾರವಾಗಿ ಇರಲಿಲ್ಲ, ಪಾರದರ್ಶಕವಾಗಿ ಇರಲಿಲ್ಲ, ಯಾವುದೇ ಆಧಾರವಿಲ್ಲದೆ, ಸಂಬಂಧಿತ ಅಂಶಗಳನ್ನು ಪರಿಶೀಲಿಸದೆ, ಸರಿಯಾಗಿ ಯೋಚಿಸದೆ, ಮಾರ್ಗದರ್ಶಕ ಸೂತ್ರಗಳೇನಾದರೂ ಇದ್ದರೆ ಅವನ್ನು ಉಲ್ಲಂಘಿಸಿ ಮನಬಂದಂತೆ, ನಿರ್ಲಕ್ಷ್ಯದಿಂದ ಮಾಡಲಾಗಿದೆ. ಇದರಿಂದಾಗಿ ಎಲ್ಲರ ಒಳಿತಿಗೆ, ಸಾರ್ವಜನಿಕ ಹಿತಾಸಕ್ತಿಗೆ ವಿಪರೀತ ತೊಂದರೆಯಾಗಿದೆ"ಎಂದು ಸುಪ್ರಿಂ ಕೋರ್ಟ್ ತೀರ್ಪು ತೀವ್ರವಾಗಿ ಟೀಕಿಸಿದೆ. ಇದರಿಂದಾಗಿ ಯುಪಿಎ ಸರಕಾರದ ಭ್ರಷ್ಟಾಚಾರವನ್ನು ಒಂದು ಪ್ರಮುಖ ಚುನಾವಣಾ ಪ್ರಶ್ನೆಯಾಗಿ ಪ್ರಚಾರ ನಡೆಸಿ ಅದರ ಪ್ರಯೋಜನವನ್ನೂ ಪಡೆದಿರುವ ಬಿಜೆಪಿಯ ''ಒಳ್ಳೆಯ ದಿನಗಳ' ಸರಕಾರ ಈ ತೀರ್ಪಿನ ಬಗ್ಗೆ ಮೆಲುದನಿಯ ಪ್ರತಿಕ್ರಿಯೆಯನ್ನಷ್ಟೇ ನೀಡಿದೆ, ಆಳುವ ಪಕ್ಷ ಮೌನವಾಗಿದೆ. ಇಂತಹ ಹಗರಣಗಳಿಂದಾಗಿ, ಅದಕ್ಕೆ ಕಾರಣವಾದ ನವ–ಉದಾರವಾದಿ ಧೋರಣೆಗಳಿಂದಾಗಿ ಅಧಿಕಾರ ಕಳಕೊಂಡಿರುವ ಕಾಂಗ್ರೆಸ್ ಪಕ್ಷಕ್ಕೆ ಬಿಜೆಪಿ ನೇತೃತ್ವದ ಕೇಂದ್ರ ಸರಕಾರಗಳೂ ಈ ದುಷ್ಕೃತ್ಯದಲ್ಲಿ ತಮ್ಮ ಜೊತೆಗಿವೆ ಎಂಬುದು ಸಮಾಧಾನ ತಂದಿರುವಂತೆ ಕಾಣುತ್ತದೆ. ಅದೇನೇ ಇರಲಿ, ಆರ್ಥಿಕ ಧೋರಣೆಗಳಿಗೆ ಸಂಬಂಧಪಟ್ಟಂತೆ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಏನೇನೂ ವ್ಯತ್ಯಾಸವಿಲ್ಲ ಎಂಬುದೀಗ ಮತ್ತೊಮ್ಮೆ ದೃಢಪಟ್ಟಿದೆ.

ಉದಾರೀಕರಣ ಧೋರಣೆಗಳ ಭಾಗವಾಗಿ ಖಾಸಗಿಯವರಿಗೆ ಪ್ರಯೋಜನ ಒದಗಿಸಲು ಕಲ್ಲಿದ್ದಲು ಗಣಿ ರಾಷ್ಟ್ರೀಕರಣದ ಕಾನೂನನ್ನು ತಿದ್ದುಪಡಿ ಮಾಡಿದಂದಿನಿಂದಲೇ ಇದನ್ನು ವಿರೋಧಿಸಿಕೊಂಡು ಬಂದಿರುವ ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯು ಈ ತೀರ್ಪನ್ನು ಸ್ವಾಗತಿಸುತ್ತ ನವ–ಉದಾರೀಕರಣದ ಧೋರಣೆಗಳಲ್ಲೇ ಹಗರಣಗಳು ಅಡಕವಾಗಿವೆ ಎಂಬುದು ಈಗ ಸಾಬೀತಾದಂತೆ ಆಗಿದೆ ಎಂದಿದೆ. ಅಲ್ಲದೆ 1993ರಿಂದ 2011ರ ವರೆಗೆ ನೀಡಿದ 200ಕ್ಕೂ ಹೆಚ್ಚು ಕಲ್ಲಿದ್ದಲು ಗಣಿಗಳಲ್ಲಿ 21 ವರ್ಷಗಳ ನಂತರವೂ ಹೆಚ್ಚೆಂದರೆ 30 ಮಾತ್ರ ಕೆಲಸ ಮಾಡುತ್ತಿವೆ ಎಂಬ ಸಂಗತಿಯೇ ಇದು ಸರಿಯಾದ ಕ್ರಮ ಅಲ್ಲ ಎಂಬುದನ್ನು ತೋರಿಸುತ್ತದೆ ಎಂದು ಸಿಐಟಿಯು ಹೇಳಿದೆ.

1972 ಮತ್ತು 1973ರ ಕಲ್ಲಿದ್ದಲು ರಾಷ್ಟ್ರೀಕರಣ ಶಾಸನಗಳು ನಿರ್ದಿಷ್ಟವಾಗಿ ನಿಷೇಧಿಸಿದ್ದ ಆರ್ಥಿಕ ವ್ಯವಹಾರಗಳನ್ನು ಕಾನೂನುಬದ್ಧಗೊಳಿಸಿದ್ದ ಕ್ರಮ ಇದು ಎಂಬುದೀಗ ಈ ತೀರ್ಪಿನಿಂದ ಸಾಬೀತಾಗಿದೆ ಎಂದು ಆಕ್ರಮವನ್ನು ವಿರೋಧಿಸಿದ್ದ ಅಖಿಲ ಭಾರತ ಕಲ್ಲಿದ್ದಲು ಕಾರ್ಮಿಕರ ಒಕ್ಕೂಟದ ಪ್ರಧಾನ ಕಾರ್ಯದರ್ಶಿ ಜೀಬನ್ ರಾಯ್ ಒಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಈಗ ಯೋಜನಾ ಆಯೋಗವನ್ನು ರದ್ದು ಪಡಿಸುವ ಹೇಳಿಕೆ ನೀಡಿ ಇಂತಹುದೇ ಉಲ್ಲಂಘನೆ ನಡೆಸಲು ಮುಂದಾಗಿರುವ ಪ್ರಸಕ್ತ ಸರಕಾರ ಸುಪ್ರಿಂ ಕೋರ್ಟ್ ಕಾನೂನು ಬಾಹಿರಎಂದಿರುವ ಈ ವ್ಯವಹಾರಗಳನ್ನೂ ಕಾನೂನು ಬದ್ಧಗೊಳಿಸಲು ಸಂವಿಧಾನವನ್ನು, ಈಗಿರುವ ಕಾನೂನುಗಳನ್ನು ಬದಲಿಸಲು ಮುಂದಾಗಬಹುದು, ಅದಕ್ಕೆ ಅವಕಾಶ ನೀಡದಂತೆ ಭಾರತದ ಜನತೆ ಮತ್ತು ಕಲ್ಲಿದ್ದಲು ಕಾರ್ಮಿಕರು ಎಚ್ಚರದಿಂದ ಇರಬೇಕು ಎಂದು ಜೀಬನ್ ರಾಯ್ ಕರೆ ನೀಡಿದ್ದಾರೆ.

'ಒಳ್ಳೆಯ ದಿನ'ಗಳ ಡೈರಿ

ವೇದರಾಜ ಎನ್.ಕೆ.



ಉಪಚುನಾವಣೆಗಳ ಫಲಿತಾಂಶ: ನೂರು ದಿನ ಪೂರೈಸುವುದರೊಳಗೇ 'ಒಳ್ಳೆಯ ದಿನಗಳ' ಬಗ್ಗೆ ಸಂದೇಹ?

ಕರ್ನಾಟಕವೂ ಸೇರಿದಂತೆ ನಾಲ್ಕು ರಾಜ್ಯಗಳಲ್ಲಿ ನಡೆದ 18 ವಿಧಾನ ಸಭಾ ಉಪಚುನಾವಣೆಗಳಲ್ಲಿ ಬಿಜೆಪಿ ಕೂಟಕ್ಕೆ 8ರಲ್ಲಿ ಮಾತ್ರ ಗೆಲ್ಲಲು ಸಾಧ್ಯವಾಗಿದೆ.

ಬಿಹಾರದ 10 ಸ್ಥಾನಗಳಲ್ಲಿ ಜೆಡಿ(ಯು), ಆರ್‌ಜೆಡಿ ಮತ್ತು ಕಾಂಗ್ರೆಸ್ ಮೈತ್ರಿ ಕೂಟಕ್ಕೆ 6 ಸ್ಥಾನಗಳು ದೊರೆತಿವೆ. ಬಿಜೆಪಿಗೆ 4ಸ್ಥಾನಗಳು ಮಾತ್ರ ದೊರೆತಿವೆ. ಅದರಲ್ಲಿ 2 ಸ್ಥಾನಗಳನ್ನು ಅದು ಗೆದ್ದುಕೊಂಡದ್ದು ಕೇವಲ 400–500 ಮತಗಳಿಂದ.

ಕರ್ನಾಟಕದ 3 ಉಪಚುನಾವಣೆಗಳಲ್ಲಿ ಎರಡನ್ನು ಕಾಂಗ್ರೆಸ್ ಗೆದ್ದುಕೊಂಡಿದೆ, ಒಂದರಲ್ಲಿ ಮಾತ್ರ ತನ್ನ ಸ್ಥಾನವನ್ನು ಉಳಿಸಿಕೊಳ್ಳಲು ಬಿಜೆಪಿಗೆ ಸಾಧ್ಯವಾಗಿದೆ. ಇದು ಮಾಜೀ ಮುಖ್ಯಮಂತ್ರಿ ಯೆಡ್ಯೂರಪ್ಪನವರ ಸ್ಥಾನ. ಕಾಂಗ್ರೆಸಿನ 'ವಂಶಾಡಳಿತ'ದ ಬಗ್ಗೆ ಹರಿಹಾಯುತ್ತಿದ್ದ ಬಿಜೆಪಿ ಇಲ್ಲಿ ಯೆಡ್ಯೂರಪ್ಪನವರ ಮಗನನ್ನೇ ಅಭ್ಯರ್ಥಿಯಾಗಿ ನಿಲ್ಲಿಸಿತ್ತು. ಆದರೂ ಬಹಳ ಕಡಿಮೆ ಅಂತರದಿಂದ ಅದಕ್ಕೆ ಈ ಬಾರಿ ತನ್ನ ಈ ಭದ್ರಕೋಟೆಯನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ಗಣಿಧಣಿಗಳ ಸಾಮ್ರಾಜ್ಯವಾದ ಬಳ್ಳಾರಿ ಬಿಜೆಪಿ ಕೈತಪ್ಪಿ ಹೋಗಿದೆ.

ಪಂಜಾಬಿನಲ್ಲಿ ಎರಡು ಸ್ಥಾನಗಳಲ್ಲಿ ಒಂದರಲ್ಲಿ ಕಾಂಗ್ರೆಸ್, ಇನ್ನೊಂದರಲ್ಲಿ ಬಿಜೆಪಿ ಗೆದ್ದಿವೆ. ಮಧ್ಯಪ್ರದೇಶದಲ್ಲಿ ಬಿಜೆಪಿ ಎರಡು ಸ್ಥಾನಗಳನ್ನು , ಕಾಂಗ್ರೆಸ್ ಕೂಡ ಒಂದು ಸ್ಥಾನವನ್ನು ಗಳಿಸಿದೆ.

ಲೋಕಸಭಾ ಚುನಾವಣೆಗಳಲ್ಲಿ ಗೆದ್ದ ಶಾಸಕರ ಸ್ಥಾನಗಳನ್ನು ತುಂಬಲು ಈ ಉಪಚುನಾವಣೆಗಳು ನಡೆದವು. ಬಿಜೆಪಿ ಆ ಚುನಾವಣೆಗಳಲ್ಲಿ ಒಳ್ಳೆಯ ಬಹುಮತ ಪಡೆದಿರುವುದರಿಂದಾಗಿ ಹೆಚ್ಚಿನ ಸ್ಥಾನಗಳನ್ನು ಗೆಲ್ಲಬೇಕಾಗಿತ್ತು. ಉದಾಹರಣೆಗೆ, ಬಿಹಾರದಲ್ಲಿ 40 ಲೋಕಸಭಾ ಸೀಟುಗಳಲ್ಲಿ 31 ನ್ನು ಬಿಜೆಪಿ ಕೂಟ ಗೆದ್ದುಕೊಂಡಿತ್ತು, ಆ ಚುನಾವಣೆಗಳಲ್ಲಿ ಈ 10 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿ 8ರಲ್ಲಿ ಮುಂದಿತ್ತು. ಅಂದರೆ 8 ಸೀಟುಗಳನ್ನು ಗೆಲ್ಲಬೇಕಾಗಿತ್ತು. ಆದರೆ ಗೆದ್ದಿರುವುದು 4 ಮಾತ್ರ, ಅದರಲ್ಲೂ ಎರಡನ್ನು 1000ಕ್ಕಿಂತಲೂ ಕಡಿಮೆ ಮತಗಳಿಂದ.

ಇದಕ್ಕೆ ಮೊದಲು ಉತ್ತರಾಖಂಡದಲ್ಲಿ ನಡೆದ ಉಪಚುನಾವಣೆಗಳಲ್ಲೂ ಮೂರರಲ್ಲೂ ಬಿಜೆಪಿ ಸೋತಿತ್ತು. ಇವುಗಳಲ್ಲಿ ಎರಡು ಅದರದ್ದೇ ಸೀಟುಗಳು ಕಾಂಗ್ರೆಸಿನ ಪಾಲಾದವು. ಇದು ಒಂದು ಸಣ್ಣ ರಾಜ್ಯದ ಫಲಿತಾಂಶ ಎಂದು ಅಷ್ಟೊಂದು ಗಮನಕ್ಕೆ ಬಂದಿರಲಿಲ್ಲ. ಆದ–ರೆ ಈಗ ಆ ಪ್ರವೃತ್ತಿ ಬದಲಾಗುವ ಬದಲು ಮುಂದುವರೆದಿದೆ ಎಂಬುದು ಗಮನಾರ್ಹ. ಬಿಜೆಪಿ ಗಳಿಸಿದ ಮತಪ್ರಮಾಣದಲ್ಲೂ ತೀವ್ರ ಇಳಿಕೆಯಾಗಿದೆ ಎಂದು ಹೇಳಲಾಗಿದೆ.

ಉತ್ತರಪ್ರದೇಶದಲ್ಲಿ 'ಲವ್ ಜಿಹಾದ್', ಜಮ್ಮು–ಕಾಶ್ಮೀರದಲ್ಲಿ ಗಡಿ ತಿಕ್ಕಾಟದ ಪ್ರಶ್ನೆ: ಧ್ರುವೀಕರಣ ಕಾರ್ಯತಂತ್ರದ ಎರಡು ಮುಖಗಳು!

ಐದು ರಾಜ್ಯಗಳಲ್ಲಿ ವಿಧಾನ ಸಭಾ ಉಪಚುನಾವಣೆಗಳಲ್ಲಿ 21ರಲ್ಲಿ 10ನ್ನು ಮಾತ್ರ ಗೆಲ್ಲಲು ಸಾಧ್ಯವಾಗಿರುವ ಬಿಜೆಪಿ ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳು ನಡೆಯಲಿರುವ ರಾಜ್ಯಗಳಲ್ಲಿ 'ಅಭಿವೃದ್ಧಿ' ಅಜೆಂಡಾದ ಆಚೆಯೇ ಗಮನ ನೆಟ್ಟಿರುವಂತೆ ಕಾಣುತ್ತಿದೆ.

ಉತ್ತರ ಪ್ರದೇಶದಲ್ಲಿ ಅದೀಗ 'ಲವ್ ಜಿಹಾದ' ಪ್ರಶ್ನೆಯನ್ನು ಪ್ರಮುಖವಾಗಿ ಎತ್ತಿಕೊಂಡಿದೆ ಎನ್ನಲಾಗುತ್ತಿದೆ. ಮುಸ್ಲಿಂ ಗಂಡಸು ಒಬ್ಬ ಹಿಂದು ಮಹಿಳೆಯನ್ನು ಮದುವೆಯಾಗುವುದು ಆಕೆಯನ್ನು ಮತಾಂತರ ಮಾಡಲಿಕ್ಕಾಗಿಯೇ ಎಂಬ ಊಹೆಯೊಂದಿಗೆ, ಇದು 'ಲವ್ ಜಿಹಾದ್' ಎಂಬುದು ಬಿಜೆಪಿಯ ನಿರೂಪಣೆ. ವಾಸ್ತವವಾಗಿ ಇತ್ತೀಚೆಗೆ ಉತ್ತರಪ್ರದೇಶದಲ್ಲಿ ನಡೆದ ಕೋಮುಗಲಭೆಗಳಲ್ಲಿ ಬಹಳಷ್ಟು ಈ ವಿಷಯದ ಮೇಲೆಯೇ ಆರಂಭವಾಗಿದೆ ಎನ್ನಲಾಗಿದೆ. ಬಿಜೆಪಿಯ ಉತ್ತರಪ್ರದೇಶ ಘಟಕದ ಅಧ್ಯಕ್ಷರು ಅದರ ಇತ್ತೀಚಿನ ಸಭೆಯ ಪ್ರಸ್ತಾವನಾ ಭಾಷಣದಲ್ಲಿ ಈ ವಿಷಯದ ಮೇಲೆಯೇ ಒತ್ತು ಕೊಟ್ಟಿರುವುದು ಮಾಧ್ಯಮಗಳ ಗಮನ ಸೆಳೆದಿದೆ. ಇದಕ್ಕೆ ಬಹಳಷ್ಟು ಪ್ರತಿಕ್ರಿಯೆಗಳೂ ಬಂದ ಹಿನ್ನೆಲೆಯಲ್ಲಿ ಈ ಸಭೆಯ ನಿರ್ಣಯದಲ್ಲಿ ಈ ಅಂಶದ ಪ್ರಸ್ತಾಪವನ್ನು ಕೈಬಿಡಲಾಗಿದೆ ಎಂದೂ ಮಾಧ್ಯಮಗಳು ವರದಿ ಮಾಡಿವೆ. ಆದರೆ ಲೋಕಸಭಾ ಚುನಾವಣೆಗಳಲ್ಲಿ ಈಗ ಬಿಜೆಪಿ ಅಧ್ಯಕ್ಷರಾಗಿರುವವರ ಕೋಮುಧ್ರುವೀಕರಣದ ಕಾರ್ಯತಂತ್ರದ ಫಲವುಂಡಿರುವ ಬಿಜೆಪಿ, ಅದರ ಪ್ರಧಾನ ಮಂತ್ರಿಗಳು ಕೆಂಪು ಕೋಟೆಯಿಂದ ಏನೇ ಕರೆ ನೀಡಿದರೂ ಲೆಕ್ಕಿಸದೆ, ಮುಂದಿನ ವಿಧಾನಸಭಾ ಚುನಾವಣೆಗಳಲ್ಲಿ ಇದೆ ಕಾರ್ಯತಂತ್ರದ ಮೊರೆಹೋಗಬೇಕಾಗುತ್ತದೆ ಎಂದು ಕೆಲವು ವೀಕ್ಷಕರು ಅಭಿಪ್ರಾಯ ಪಡುತ್ತಿದ್ದಾರೆ.

ಅದೇ ರೀತಿ ಈ ಕಾರ್ಯತಂತ್ರದ ರೂವಾರಿಯಾದ ಬಿಜೆಪಿಯ ಹೊಸ ಅಧ್ಯಕ್ಷರು ಜಮ್ಮು–ಕಾಶ್ಮೀರದಲ್ಲಿಯೂ ಇದನ್ನು ಸ್ಥಳೀಯ ಪರಿಸ್ಥಿತಿಗಳಿಗನುಸಾರವಾಗಿ ಬಳಸಿಕೊಂಡು ಶ್ರೀನಗರದಲ್ಲಿ ಮೊತ್ತಮೊದಲ ಬಾರಿಗೆ ಹಿಂದೂ ಮುಖ್ಯಮಂತ್ರಿಯೊಬ್ಬರನ್ನು ಪ್ರತಿಷ್ಠಾಪಿಸುವ 'ಮಿಶನ್ ಕಾಶ್ಮೀರ'ವನ್ನು ರೂಪಿಸಿದ್ದಾರೆ, ಲಡಾಖ್‌ನಲ್ಲಿ ಪ್ರಧಾನ ಮಂತ್ರಿಗಳು ಪಾಕಿಸ್ತಾನಕ್ಕೆ 'ಬಲವಾದ ಎಚ್ಚರಿಕೆ' ನೀಡಿರುವುದು, ಭಾರತ–ಪಾಕಿಸ್ತಾನ ಮಾತುಕತೆಗಳನ್ನು ನಿಲ್ಲಿಸಿರುವುದು ಹಾಗೂ ಬಿಜೆಪಿ ಅಧ್ಯಕ್ಷರು ಗಡಿಪ್ರದೇಶಗಳಿಗೆ ಭೇಟಿ ನೀಡಿರುವುದು ಇದೇ ಅಜೆಂಡಾದ ಭಾಗಗಳು ಎನ್ನಲಾಗಿದೆ.

ಈ ನಡುವೆ 'ಲವ್‌ಜಿಹಾದ' ಬಗ್ಗೆ ಬಿಜೆಪಿ/ಆರೆಸ್ಸೆಸ್ ಬೆಂಬಲಿಗರು ಅಂತರ್ಜಾಲದಲ್ಲಿ ಅಂಕೆ–ಸಂಖ್ಯೆಗಳನ್ನು, ಕೋಷ್ಟಕಗಳನ್ನು, ಪೋಸ್ಟರುಗಳನ್ನು ಹಾಕುತ್ತಿದ್ದರೆ, ಹಿರಿಯ ಪತ್ರಕರ್ತ ವಿನೋದ್ ಮೆಹ್ತಾ ತನ್ನ ಟ್ವೀಟರ್‌ನಲ್ಲಿ ಬಿಜೆಪಿ ಮುಖಂಡರತ್ತವೇ ಬೊಟ್ಟು ಮಾಡಿ ಇದೇನು ಎಂದು ಕೇಳಿದ್ದಾರೆ. ಶಾನವಾಝ್ ಹುಸೇನ್ ಮತ್ತು ಎಂ.ಎ.ನಕ್ವಿ ಹಿಂದೂ ಮಹಿಳೆಯರನ್ನು ವಿವಾಹವಾಗಿದ್ದಾರೆ. ಅವರನ್ನು ಬಿಜೆಪಿ ಪಕ್ಷದಿಂದ ಉಚ್ಚಾಟಿಸುತ್ತದೆಯೇ ಎಂದು ಪ್ರಶ್ನಿಸಿದ್ದಾರೆ, ತಮ್ಮ ಮುಖಂಡರೇ ತಾನು ಹೇಳುವ 'ಲವ್‌ಜಿಹಾದ್; ಆಚರಿಸುತ್ತಿರುವುದನ್ನು ಕಂಡ ಬಿಜೆಪಿ ತಿಪ್ಪರಲಾಗ ಹಾಕಿದೆ ಎಂದು ಅವರು ಇನ್ನೊಂದು ಟ್ವೀಟ್‌ನಲ್ಲಿ ಹೇಳಿದ್ದಾರೆ.

'ಅಭಿವೃದ್ಧಿ' ಅಜೆಂಡಾದ ಆಚೆ

ಎರಡು ಸುದ್ದಿಗಳು

–ಮೂವರು ಹಿರಿಯ ಬಿಜೆಪಿ ಮುಖಂಡರ ಮಾರ್ಗದರ್ಶನ ಸಮಿತಿ
–ಚಾರ್ಜ್‌ಶೀಟ್ ಆದವರಿಗೆ ಮಂತ್ರಿಗಿರಿ ಕೊಡಬಾರದು
ಎಂದು ಪ್ರಧಾನಮಂತ್ರಿ, ಮುಖ್ಯಮಂತ್ರಿಗಳಿಗೆ ಸುಪ್ರಿಂ ಕೋರ್ಟ್ ಸಲಹೆ



ಅದು ಮಾರ್ಗದರ್ಶನ ಮಾತ್ರ- ಸುರೇಂದ್ರನ್, 'ದಿ ಹಿಂದು'

ಮತ್ತೊಂದು ಸುದ್ದಿ–
ಪ್ರಧಾನ ಮಂತ್ರಿ ರ್‍ಯಾಲಿಯಲ್ಲಿ
ಬೇರೆ ಪಕ್ಷಗಳ
ಮುಖ್ಯ ಮಂತ್ರಿಗಳಿಗೆ ಧಿಕ್ಕಾರ

"ರ್‍ಯಾಲಿಗೆ ಬರುತ್ತಾನಂತೆ, ಆದರೆ ಧಿಕ್ಕಾರ ಕೂಗಲು ಎಕ್ಸ್‌ಟ್ರಾ ಚಾರ್ಜ್ ಅಂತಾನೆ"



ಕೃಪೆ: ಕೀರ್ತಿಶ್ ಭಟ್, ಬಾಮುಲಾಹಿಜಾ.ಕಾಂ

ಮಹಿಳೆಯರ ಮೇಲಿನ ಲೈಂಗಿಕ ದೌರ್ಜನ್ಯಗಳು ಮತ್ತು ದಲಿತರ ಮೇಲೆ ಹೆಚ್ಚುತ್ತಿರುವ ಜಾತಿ ದಮನದ ವಿರುದ್ಧ

ಜನಜಾಗೃತಿ ಆಂದೋಲನ

ರಾಜ್ಯದಲ್ಲಿ ಇಂದು ವರದಿಯಾಗುತ್ತಿರುವ ಮಹಿಳೆಯರ ಮೇಲಿನ ಮತ್ತು ಪುಟ್ಟ ಬಾಲಕಿಯರ ಮೇಲಿನ ಲೈಂಗಿಕ ದೌರ್ಜನ್ಯಗಳು ಆಘಾತಕಾರಿಯಾಗಿವೆ. ಈ ಘೋರ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ವಿಫಲವಾಗಿದೆ. ಪೊಲೀಸ್ ವ್ಯವಸ್ಥೆ ಅಸಮರ್ಪಕವಾಗಿದೆ. ಸಾರ್ವಜನಿಕ ಅಭಿಪ್ರಾಯದಲ್ಲಿ ಇರಬೇಕಾದ ಒಮ್ಮತವೂ ಕಾಣುಸುತ್ತಿಲ್ಲ.

ಶಾಲೆಗಳಲ್ಲಿ, ಶಾಲೆಗಳಿಗೆ ಮಕ್ಕಳನ್ನು ಕರೆದೊಯ್ಯುವ ವಾಹನಗಳಲ್ಲಿ ನಮ್ಮ ಮಕ್ಕಳು ಸುರಕ್ಷಿತವಾಗಿಲ್ಲ. ಕಾಲೇಜ್ ಮುಗಿಸಿ ಯುವತಿಯೊಬ್ಬಳು ಒಂಟಿಯಾಗಿ ಮನೆಗೆ ಮರಳುವುದು ಹೆಚ್ಚೆಚ್ಚು ಅಪಾಯಕಾರಿಯಾಗುತ್ತಿದೆ. ಗದ್ದೆ ಕೆಲಸಕ್ಕೆ ಹೋಗುವ ಮಹಿಳೆಯರಿಗೆ, ಮನೆಗೆಲಸಕ್ಕೆ ಹೋಗುವ ಮಹಿಳೆಗೆ, ಆಫೀಸ್ ಕೆಲಸಕ್ಕೆ ಹೋಗುವ ಮಹಿಳೆಗೆ, ಆರೋಗ್ಯ ತಪಾಸಣೆಗಾಗಿ ವೈದ್ಯನಲ್ಲಿ ಹೋಗುವ ಮಹಿಳೆಗೆ, ನ್ಯಾಯವಾದಿಯ ಬಳಿಗೆ ಹೋಗುವ ಕಕ್ಷಿದಾರ ಮಹಿಳೆಗೆ, ದೂರು ನೀಡಲು ಪೊಲೀಸ್ ಠಾಣೆಗೆ ಹೋಗುವ ಮಹಿಳೆಗೆ ರಕ್ಷಣೆ ಇಲ್ಲ. ಎಲ್ಲೆಲ್ಲೂ ಮಹಿಳೆಗೆ ರಕ್ಷಣೆ ಇಲ್ಲ. ಕೆಲವು ಸಲ ಮನೆಯಲ್ಲೂ ಮಹಿಳೆಗೆ ರಕ್ಷಣೆ ಇರುವುದಿಲ್ಲ. ಶೈಕ್ಷಣಿಕವಾಗಿಯೂ, ಸಾಂಸ್ಕೃತಿಕವಾಗಿಯೂ ಮುಂದುವರೆದ ರಾಜ್ಯ ಎಂದು ಹೆಸರುವಾಸಿಯಾಗಿರುವ ಕರ್ನಾಟಕವು ಇಂದು ಇಡೀ ದೇಶದ ಮುಂದೆ ತಲೆ ತಗ್ಗಿಸುವಂತಾಗಿದೆ.

ನಮ್ಮ ಸಮಾಜದಲ್ಲಿ ಇಂದಿಗೂ ಪ್ರತಿಗಾಮಿ ಪಾಳೆಯಗಾರಿ ಪುರುಷ ಪ್ರಧಾನ ಮೌಲ್ಯಗಳು ಜೀವಂತವಾಗಿರುವುದೇ ಮಹಿಳೆಯರ ಮೇಲೆ ಇಷ್ಟೊಂದು ಅತ್ಯಾಚಾರಗಳು ನಡೆಯಲು ಕಾರಣವಾಗಿದೆ, ಮಹಿಳೆಯೂ ಮನುಷ್ಯಳು, ಅವಳಿಗೂ ಭಾವನೆಗಳಿರುತ್ತವೆ, ಅವಳು ಪುರುಷನಿಗೆ ಸರಿಸಮಾನಳು ಎಂಬುದನ್ನು ಪರಿಗಣಿಸದೆ ಮಹಿಳೆ ಅಂದರೆ ಕೇವಲ ಭೋಗದ ವಸ್ತು ಎಂದು ನೋಡುವ ಪ್ರತಿಗಾಮಿ ಕನ್ನೋಟ ಇಂದಿಗೂ ಮುಂದುವರೆದಿದೆ. ಜಾಗತೀಕರಣದ ಈ ಯುಗದಲ್ಲಂತೂ ಮಹಿಳೆ, ಅವಳ ದೇಹ ಸೌಂದರ್ಯ ಎಲ್ಲವೂ ಮಾರಾಟದ ಸರಕುಗಳಾಗಿವೆ. ಹೀಗಾಗಿ ಮಹಿಳೆಯರ ಮೇಲಿನ ಲೈಂಗಿಕ ಅತ್ಯಾಚಾರಗಳು ಕೇವಲ ಕಾನೂನು ವ್ಯವಸ್ಥೆಯ ಸಮಸ್ಯೆ ಅಲ್ಲ. ಈ ವಿಕೃತಿಗೆ ಬಲವಾದ ಸಮಾಜಿಕ-ಆರ್ಥಿಕ ಆಯಾಮಗಳಿವೆ.


ಉಡುಪಿ



ಮಂಗಳೂರು



ಕಾರವಾರ

ಅದರಂತೆಯೇ ಗ್ರಾಮೀಣ ಪ್ರದೇಶದಲ್ಲಿ ದಲಿತರ ಮೇಲೆ ದೌರ್ಜನ್ಯಗಳು, ಜಾತಿ ತಾರತಮ್ಯಗಳು, ಸಾಮಾಜಿಕ ಬಹಿಷ್ಕಾರದ ಪ್ರಕರಣಗಳು ಹೆಚ್ಚುತ್ತಿವೆ. ನಮ್ಮದು ದಲಿತ-ಹಿಂದುಳಿದ ವರ್ಗಗಳ ಪರವಾದ ಆಡಳಿತ ಎಂದು ಹೇಳಿಕೊಳ್ಳುವ ಸಿದ್ದರಾಮಯ್ಯನವರ ಕಾಂಗ್ರೆಸ್ ಪಕ್ಷದ ಸರಕಾರ ಅಧಿಕಾರಕ್ಕೆ ಬಂದ ನಂತರವೂ ದಲಿತರ ಮೇಲಿನ ದೌರ್ಜನ್ಯಗಳು ಕಡಿಮೆಯಾಗಿಲ್ಲ. ಅಂಬೇಡ್ಕರ್ ಭಾವಚಿತ್ರಕ್ಕೆ ಸಗಣಿ ಬಳಿದು ಅವಮಾನ ಮಾಡಿದ್ದನ್ನು ಪೊಲೀಸ್ ಠಾಣೆಗೆ ದೂರು ನೀಡಿ ಪ್ರತಿಭಟಿಸಿದ ಜಮಖಂಡಿ ತಾಲ್ಲೂಕ್ ಗದ್ಯಾಳ ಗ್ರಾಮದ 50 ದಲಿತ ಕುಟುಂಬಗಳ ಮೇಲೆ ಸಾಮಾಜಿಕ ಬಹಿಷ್ಕಾರ ಹಾಕಿದ್ದು, ದಲಿತ ಯುವಕನೊಬ್ಬ ಯಲ್ಲಮ್ಮ ದೇವಸ್ಥಾನದ ಒಳಗೆ ಹೋಗಿದ್ದಕ್ಕಾಗಿ ಅಥಣಿ ತಾಲ್ಲೂಕ್ ಶೇಗುಣಸಿ ಗ್ರಾಮದ ದಲಿತರ ಮನೆಗಳಿಗೆ ನುಗ್ಗಿ ಸಿಕ್ಕಸಿಕ್ಕವರ ಮೇಲೆ ಹಲ್ಲೆ ಮಾಡಿ ದಲಿತ ಕುಟುಂಬಗಳನ್ನು ಸಾಮಾಜಿಕ ಬಹಿಷ್ಕಾರಕ್ಕೆ ಒಳಪಡಿಸಿದ್ದು, ಚಾಮರಾಜನಗರದ ಅಲ್ಲೂರಿನಲ್ಲಿ ದಲಿತರ ಮೇಲೆ ಹಲ್ಲೆ ಮಾಡಿದ್ದು, ಶಹಾಪುರ ತಾಲ್ಲೂಕು ಕನ್ಯಾಕೊಳ್ಳೂರು ಗ್ರಾಮದಲ್ಲಿ ದಲಿತರು ಸಂಕ್ರಾತಿ ಹಬ್ಬದ ಶುಭಾಶಯ ಕೋರಿ ಫ್ಲೆಕ್ಸ್ ಬ್ಯಾನರ್ ಹಾಕಿದ್ದಕ್ಕಾಗಿ ದಲಿತ ಮುಖಂಡ ದೇವೇಂದ್ರಪ್ಪ ಭೀಮಪ್ಪ ದಳಪತಿಯವರ ಮೇಲೆ ಹಲ್ಲೆ ಮಾಡಿ ಕೊಲೆ ಮಾಡಿದ್ದು, ಹರಪನಹಳ್ಳಿ ತಾಲ್ಲೂಕಿನಲ್ಲಿ ಬೆನ್ನು ಹುರಿಗೆ ಕಬ್ಬಿಣದ ಹುಕ್ಕು ಸಿಕ್ಕಿಸಿಕೊಂಡು 20 ಅಡಿ ಎತ್ತರದಲ್ಲಿ ನೇತಾಡುತ್ತಾ ಸಿಡಿಯಾಡಲು ನಿರಾಕರಿಸಿದ ದಲಿತ ದೇವದಾಸಿ ಮಹಿಳೆಯನ್ನು ಅಮಾನುಷವಾಗಿ ಥಳಿಸಿದ್ದು, ಕ್ಷೌರದ ಅಂಗಡಿಯಲ್ಲಿ ಪ್ರವೇಶ ಕೋರಿದ ಗಂಗಾವತಿ ತಾಲ್ಲೂಕು ಮರಕುಂಬಿ ಗ್ರಾಮದ ದಲಿತರ ಮೇಲೆ ಹಲ್ಲೆ ಮಾಡಿ ಬಹಿಷ್ಕಾರ ಹಾಕಿದ್ದು ಮತ್ತು ದಲಿತರ ಹೋರಾಟಕ್ಕೆ ನೇತೃತ್ವ ನೀಡುತ್ತಿರುವ ಗ್ರಾಮದ ಸಿಪಿಐ(ಎಂ) ಮುಖಂಡನಿಗೆ ಪ್ರಾಣ ಬೆದರಿಕೆ ಹಾಕಿದ್ದು, ಹುಬ್ಬಳ್ಳಿ ತಾಲೂಕು ಕೋಳಿವಾಡ ಗ್ರಾಮದಲ್ಲಿ ದಲಿತರಿಗೆ ಕ್ಷೌರ ಸೌಲಭ್ಯ ನಿರಾಕರಿಸಿ ಕ್ಷೌರದ ಅಂಗಡಿಗಳನ್ನು ಬಂದ್ ಮಾಡಿದ್ದು ಮೊದಲಾದ ಪ್ರಕರಣಗಳು ಇತ್ತೀಚಿನ ಕೆಲವು ಉದಾಹರಣೆಗಳು.

ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೂ ಗ್ರಾಮೀಣ ಪ್ರದೇಶಗಳಲ್ಲಿ ಪಾಳೆಯಗಾರಿ ಹಿಡಿತ ಇನ್ನೂ ಪ್ರಬಲವಾಗಿ ಇರುವುದೇ ಮುಖ್ಯ ಕಾರಣವಾಗಿದೆ. ಪೊಲೀಸರೇ ಮೇಲ್ಜಾತಿ ಶ್ರೀಮಂತರ ಪ್ರಭಾವಕ್ಕೆ ಒಳಗಾಗುವುದರಿಂದ ದಲಿತರ ಮೇಲಿನ ದೌರ್ಜನ್ಯದ ಪ್ರಕರಣಗಳನ್ನು ಅವರು ದಾಖಲು ಮಾಡಿಕೊಳ್ಳುವುದಿಲ್ಲ. ದಾಖಲು ಮಾಡಿಕೊಂಡಾಗಲೂ ಪ್ರಕರಣವನ್ನು ದುರ್ಬಲಗೊಳಿಸಿ ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ಜಾಮೀನು ದೊರೆಯುವಂತೆ ಮಾಡುತ್ತಾರೆ ಮಾತ್ರವಲ್ಲ ದೌರ್ಜನ್ಯಕ್ಕೊಳಗಾದ ದಲಿತರ ವಿರುದ್ಧವೇ ಪ್ರತಿದೂರು ದಾಖಲಿಸಿಕೊಳ್ಳುತ್ತಾರೆ.

ಜಾತಿಪದ್ಧತಿಯನ್ನೇ ಪ್ರಶ್ನಿಸಿದ್ದ ಕನಕದಾಸ ಖ್ಯಾತಿಯ ಉಡುಪಿಯ ಕೃಷ್ಣ ಮಠದಲ್ಲಿ ಆಚರಿಸಲಾಗುತ್ತಿರುವ ಪಂಕ್ತಿಬೇಧ, ಕುಕ್ಕೆ ಸುಬ್ರಮಣ್ಯ ದೇವಸ್ಥಾನದಲ್ಲಿ ಜಾರಿಯಲ್ಲಿರುವ ಮಡೆಸ್ನಾನದಂತಹ ಜಾತಿ ಅಸ್ಪೃಶ್ಯತೆಯನ್ನು ಸಮರ್ಥಿಸುವ ಕಾನೂನುಬಾಹಿರ ಆಚರಣೆಗಳನ್ನು ತಡೆಯುವಲ್ಲಿಯೂ ಸರ್ಕಾರಗಳು ವಿಫಲವಾಗಿವೆ.

ಮಹಿಳೆಯರ ಮೇಲಾಗಲಿ, ದಲಿತರ ಮೇಲಾಗಲಿ ನಡೆಯುತ್ತಾ ಇರುವ ದೌರ್ಜನ್ಯಗಳನ್ನು ಬಂಡವಾಳಶಾಹಿ-ಭೂ ಮಾಲಕರ ಪರವಾದ ಸರ್ಕಾರಗಳು ತಾವಾಗಿಯೇ ಮುಂದೆ ಬಂದು ತಡೆಗಟ್ಟುತ್ತವೆ ಎಂಬ ಭ್ರಮೆ ಬೇಡ, ಸರ್ಕಾರಗಳ ಮೇಲೆ ಗರಿಷ್ಠ ಒತ್ತಡವನ್ನಂತೂ ಹಾಕಬೇಕು. ಅದರೊಟ್ಟಿಗೆ, ನಮ್ಮ ಜನ ಇಂತಹ ಅನಿಷ್ಟಗಳ ವಿರುದ್ಧ ಬಿರುಗಾಳಿಯಂತೆ ಎದ್ದು ಬರುವಂತಾಗಬೇಕು. ಇವುಗಳ ವಿರುದ್ಧ ಪ್ರಬಲವಾದ ಜನಾಭಿಪ್ರಾಯವನ್ನು ರೂಪಿಸಲು ಮುಂದಾಗಬೇಕು.

ಈ ದಿಕ್ಕಿನಲ್ಲಿ ಸಕ್ರೀಯವಾಗಿರುವ ಸಿಪಿಐ(ಎಂ) ಇದೇ ಅಗಸ್ಟ 16ರಿಂದ 26 ರ ವರೆಗೆ ರಾಜ್ಯಾದ್ಯಂತ ಒಂದು ಜನಾಂದೋಲನವನ್ನು ರೂಪಿಸಿತ್ತು.

ಸಿಪಿಐ(ಎಂ)ನ ಈ ಕರೆಯನ್ನು ಉಡುಪಿ, ದಕ್ಷಿಣಕನ್ನಡ, ಉತ್ತರಕನ್ನಡ, ಕೊಪ್ಪಳ, ಬಳ್ಳಾರಿ, ಬೆಳಗಾವಿ, ಮೈಸೂರು, ಗುಲ್ಬರ್ಗಾ, ದಾವಣಗೆರೆ, ಧಾರವಾಡ, ಮಂಡ್ಯ, ಚಿಕ್ಕಬಳ್ಳಾಪುರ, ಹಾಸನ ಕೋಲಾರ ಮೊದಲಾದ ಜಿಲ್ಲೆಗಳಲ್ಲಿ ಜಾರಿಮಾಡಿದ ಬಗ್ಗೆ ವರದಿಗಳು ಬಂದಿವೆ. ಆಂದೋಲನದ ಅಂಗವಾಗಿ ಪ್ರಚಾರ ಜಾಥಾ, ಕರಪತ್ರ ವಿತರಣೆ ಹಾಗೂ ಸಭೆಗಳನ್ನು ಏರ್ಪಡಿಸಲಾಗಿದೆ. ಚಿಕ್ಕಬಳ್ಳಾಪುರ ಮತ್ತು ಕೋಲಾರ ಜಿಲ್ಲೆಗಳಲ್ಲಿ ಆಗಸ್ಟ್ ತಿಂಗಲ ಎರಡನೇ ವಾರದಲ್ಲೇ ಯಶಸ್ವಿ ಹರತಾಳ ಆಚರಿಸಲಾಗಿದೆ. ●

ಈ ವಾರ ....

ಪುಟ 3 ರಿಂದ

ಪಕ್ಷದೊಳಗೆ ಕೆಲವು ಒತ್ತಡಗಳನ್ನು ತಂದಿದೆ. ಸಂಪುಟದ ವಿಸ್ತರಣೆ, ಪುನರ್ ರಚನೆಯನ್ನು ಈ ಉಪಚುನಾವಣೆ ಬಳಿಕ ಮಾಡುವುದಾಗಿ ಹೇಳಿದ್ದರು. ಇದೀಗ ಸೇರಿದ್ದ ಪಕ್ಷದ ಉನ್ನತ ಸಮಿತಿ ಕೇವಲ ಖಾಲಿ ಇರುವ ನಾಲ್ಕು ಸಚಿವ ಸ್ಥಾನಗಳಿಗೆ ಮಾತ್ರ ಸೇರಿಸಿಕೊಳ್ಳುವುದಾಗಿ ಪ್ರಕಟಿಸಿದೆ. ಇನ್ನು ಅಧಿಕಾರದ ಪಾಲು ಬಯಸಿ ಕಾದಿರುವ ಆಕಾಂಕ್ಷಿಗಳಿಗೆ ನಿಗಮ, ಮಂಡಳಿ ಗಳಿಗೆ ನೇಮಿಸುವುದೂ ಇದರೊಂದಿಗೆ ನಡೆಯಲಿದೆಯೆಂದೂ ಹೇಳಲಾಗುತ್ತಿದೆ. ಆದರೆ ಇವೆಲ್ಲಾ ಹೇಳಿದಷ್ಟೂ ಸುಲಭವೇನಿಲ್ಲ. ಪರಮೇಶ್ವರ್‌ಗೆ ಉಪ ಮುಖ್ಯಮಂತ್ರಿ ಸ್ಥಾನ ಇಲ್ಲವೆಂದೂ, ಅವರು ಸಚಿವರಾಗಿ ಮಾತ್ರ ಇರಲಿದ್ದಾರೆಂಬುದು ಅವರ 'ಓರಾಟ'ವನ್ನು ಮುಂದುವರಿಸುವ ಸೂಚನೆ ನೀಡುತ್ತವೆ.. ಜೊತೆಗೆ ಸಭಾಧ್ಯಕ್ಷರಾಗಿರುವ ಕಾಗೋಡು ತಿಮ್ಮಪ್ಪನವರು 'ತಮ್ಮನ್ನು ಮಂತ್ರಿ ಮಾಡಬೇಡಿರೆಂದೂ ತಮಗೆ ಅದು ಬೇಕಿಲ್ಲವೆಂದೂ ಗುಡುಗಿದ್ದಾರೆ. ಪೂರ್ವ ಪೀಠಿಕೆಯಾಗಿ ಈ ಸರಕಾರ ಅಸ್ತಿತ್ವದಲ್ಲಿದೆಯೇ, ಎಲ್ಲಿದೆ? ಎಂದು ವಿರೋಧ ಪಕ್ಷದ ಧಾಟಿಯಲ್ಲೇ ಬಹಿರಂಗ ಹೇಳಿರುವುದು ಸವಾಲು ಹಾಕಿದಂತೆ. ಡಿಕೆಶಿ "ಬಳ್ಳಾರಿ ಬಲ"ದ ಬಳಿಕ ಅವರ ದನಿಯೂ ಹೆಚ್ಚುವುದರಲ್ಲಿ ಅನುಮಾನವಿಲ್ಲ. ಇಂತಹ ತಿಕ್ಕಾಟಗಳು ಏನಿದ್ದರೂ ನಿಲ್ಲುವುದಿಲ್ಲ, ಅವು ಹೆಚ್ಚಾಗುವ ಸಂಭವವೇ ಹೆಚ್ಚು.

ಬಿಜೆಪಿ-ಮೋದಿ ಬಗೆಗೆ ಸೃಷ್ಟಿಸಿದ್ದ ಭ್ರಮೆಗಳು ನಿಧಾನವಾಗಿ ಕರಗುತ್ತಿವೆ. ಹಾಗೆ ನೋಡಿದರೆ ಸಾಧಾರಣವಾಗಿ ಉಪಚುನಾವಣೆಗಳಲ್ಲಿ ಅಧಿಕಾರ ರೂಢ ಪಕ್ಷಕ್ಕೆ ಜನರು ಬೆಂಬಲಿಸುವುದು ತಮ್ಮ ಸಮಸ್ಯೆಗಳು ನೀಗಲಿ ಎಂಬ ಒಂದು ವ್ಯಾವಹಾರಿಕ ತೀರ್ಮಾನವಾಗಿರುತ್ತದೆ.

ಪರ್ಯಾಯದ ಕೊರತೆ

ರಾಜ್ಯದಲ್ಲಿನ ಈ ಫಲಿತಾಂಶವು ಬಿಜೆಪಿಗೆ ಜನರ ಬೆಂಬಲ ಶಾಶ್ವತವಲ್ಲ ಎಂದೂ, ಕಾಂಗ್ರೆಸ್ ಸಹ ಬೀಗುವಂತಹುದು ಏನಿಲ್ಲವೆಂದೂ, ತೋರಿಸಿದೆ. ಕಾಂಗ್ರೆಸ್ ಮತ್ತು ಬಿಜೆಪಿಗೆ ಪರ್ಯಾಯವಾಗುವ ಅವಕಾಶಗಳನ್ನು ನಿರಾಕರಿಸಿ, 'ಸಂಪನ್ಮೂಲ'ದ ಕೊರತೆಯಿಂದ ಈ ಚುನಾವಣೆಯಲ್ಲಿ ಸ್ಪರ್ಧಿಸಲು ನಿರಾಕರಿಸಿದ ಜನತಾ ದಳ ವಹಿಸಬಹುದಾದ ರಾಜಕೀಯ ಪಾತ್ರವನ್ನು ಅದು ಕೈಬಿಟ್ಟಿದೆ. ಈ ಸಂದರ್ಭವು ಪರ್ಯಾಯದ ಕೊರತೆಯ ಗಂಭೀರ ಅಂಶವನ್ನು ಎತ್ತಿ ತೋರಿಸಿದೆ. ●

ಜನಶಕ್ತಿ
ಕನ್ನಡ ವಾರಪತ್ರಿಕೆ

ಕಡಲತಡಿ......

ಪುಟ 6 ರಿಂದ

ಮಹಿಳೆಯರ ಮೇಲೆ ಮತ್ತು ದಲಿತರ ಮೇಲೆ ಇತೀಚೆಗಿನ ತಿಂಗಳುಗಳಲ್ಲಿ ರಾಜ್ಯದಲ್ಲೂ, ದೇಶದಲ್ಲೂ ನಡೆಯುತ್ತಿರುವ ದೌರ್ಜನ್ಯ ಹಾಗೂ ಅತ್ಯಾಚಾರಗಳನ್ನು ಪ್ರತಿಭಟಿಸಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಮಹಿಳೆಯರಿಗೆ ಮತ್ತು ದಲಿತರಿಗೆ ರಕ್ಷಣೆ ನೀಡಬೇಕೆಂದು ಆಗ್ರಹಿಸಿ ಸಿಪಿಐ(ಎಂ) ಕರ್ನಾಟಕ ರಾಜ್ಯ ಸಮಿತಿ ನೀಡಿದ ಕರೆಯಂತೆ ಕರಾವಳಿ ಜಿಲ್ಲೆಗಳಲ್ಲೂ ಆಗಸ್ಟ್ 19 ರಿಂದ 22ರ ವರೆಗೆ ಜಾಥಾ ಹಾಗೂ ಜನಾಂದೋಲನಗಳು ನಡೆದಿವೆ.

ಉಡುಪಿ ಜಿಲ್ಲೆ :

ರಾಜ್ಯದಲ್ಲಿ ಹೆಚ್ಚುತ್ತಿರುವ ಮಹಿಳಾ ದೌರ್ಜನ್ಯ ವಿರೋಧಿಸಿ ಭಾರತ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಉಡುಪಿ ಜಿಲ್ಲಾ ಸಮಿತಿ ಹಮ್ಮಿಕೊಂಡ ಜನಜಾಗೃತಿ ಜಾಥಾ ಇಂದು ಶಿರೂರು ಮೃತ ವಿದ್ಯಾರ್ಥಿನಿ ರತ್ನಾ ಕೊಠಾರಿ ಮನೆಯಲ್ಲಿ ರತ್ನಾ ತಂದೆಯವರಾದ ಶಂಕರ ಕೊಠಾರಿಯವರು ಕುಂದಾಪುರ ಪುರಸಭಾ ಅಧ್ಯಕ್ಷೆ ಕಲಾವತಿ ಯು. ಎಸ್.ರವರಿಗೆ ಸಿಪಿಎಂ ಪಕ್ಷದ ಧ್ವಜ ನೀಡುವುದರ ಮೂಲಕ ಉದ್ಘಾಟನೆಗೊಂಡಿತು.

ಕಲಾವತಿ ಯು.ಎಸ್.ರವರು ಮಾತನಾಡಿ, ರತ್ನ ಕೊಠಾರಿ ನಿಗೂಢ ಸಾವು ನಮಗೆ ಅತ್ಯಂತ ನೋವಿನ ಸಂಗತಿಯಾಗಿದೆ. ಜನರಲ್ಲಿ ಜಾಗೃತಿ ಮೂಡಿಸುವಂತಹ ಇಂತಹ ಕಾರ್ಯಕ್ರಮಗಳಿಂದ ಮಹಿಳೆಯರಲ್ಲಿ ದೌರ್ಜನ್ಯಗಳ ವಿರುದ್ಧ ಹೋರಾಟ ಮಾಡುವ ಮನೋಬಲ ಬೆಳೆಯಲಿದ್ದು ಈ ಜಾಥಾ ಯಶಸ್ವಿಯಾಗಲಿ ಎಂದು ಹಾರೈಸಿದರು.

ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕೆ. ಶಂಕರ ಮಾತನಾಡಿ ಇತ್ತೀಚಿನ ದಿನಗಳಲ್ಲಿ ಜಿಲ್ಲೆಯಾದ್ಯಂತ ಅತ್ಯಾಚಾರ ದೌರ್ಜನ್ಯ, ಕೊಲೆ ಪ್ರಕರಣಗಳು ಹೆಚ್ಚುತ್ತಿವೆ. ಪುಟ್ಟ ಪುಟ್ಟ ಮಕ್ಕಳು ಅತ್ಯಾಚಾರದಂತಹ ಘೋರ ಕೃತ್ಯಕ್ಕೆ ಬಲಿಯಾಗುತ್ತಿದ್ದಾರೆ. ಪ್ರತಿನಿತ್ಯವೆಂಬಂತೆ ವೃದ್ಧರು, ಮಾನಸಿಕ ಅಸ್ವಸ್ಥರು ವಿಕಲಚೇತನರ ಮೇಲೆಯೂ ಕೂಡಾ ದೌರ್ಜನ್ಯಗಳು ನಡೆಯುತ್ತಿದ್ದು ಇಂತಹ ಪ್ರಕರಣಗಳಲ್ಲಿ ಬಾಲಕರು ಕೂಡಾ ಅಪರಾಧಿಗಳಾಗುತ್ತಿರುವುದು ಕಳವಳಕಾರಿ ಸಂಗತಿಯಾಗಿದೆ. ಇಂತಹ ದೌರ್ಜನ್ಯಗಳ ವಿರುದ್ಧ ಸಿಪಿಐ(ಎಂ) ಪಕ್ಷವು ರಾಜ್ಯದಾದ್ಯಂತ ಜನಜಾಗೃತಿ ಆಂದೋಲನವನ್ನು ನಡೆಸುತ್ತಿದೆ. ಉಡುಪಿ ಜಿಲ್ಲೆಯಲ್ಲಿ 4 ದಿನಗಳ ಕಾಲ ಜಿಲ್ಲೆಯಾದ್ಯಂತ ಸಂಚರಿಸಿ ಅಗಸ್ಟ್ 22ರಂದು ಕುಂದಾಪುರದಲ್ಲಿ ಸಮಾರೋಪಗೊಳ್ಳಲಿದೆ. ಈ ಸಮಾರೋಪ ಸಮಾರಂಭದಲ್ಲಿ ಮಹಿಳಾ ಹೋರಾಟಗಾರ್ತಿಯಾಗಿರುವ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಮುಖಂಡರಾದ ಕೆ.ಎಸ್.ವಿಮಲಾರವರು ಭಾಷಣ ಮಾಡಲಿದ್ದಾರೆ ಎಂದು ಹೇಳಿದರು.

ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಬಾಲಕೃಷ್ಣ ಶೆಟ್ಟಿಯವರು ಮಾತನಾಡಿ ಜಿಲ್ಲೆಯಲ್ಲಿ ಪ್ರಥ್ವಿ ಕೊಲೆ, ಸುಪ್ರಿತಾ ಪೂಜಾರಿಯ ಆತ್ಮಹತ್ಯೆ, ಕುಸುಮ ಕೊಲೆ ಪ್ರಕರಣ ಇತ್ತೀಚೆಗೆ ನಡೆದಂತಹ ಪ್ರತಿಭಾವಂತ ವಿದ್ಯಾರ್ಥಿನಿ ರತ್ನಾ ಕೊಠಾರಿಯವರ ನಿಗೂಢ ಸಾವಿಗೂ ನ್ಯಾಯ ಸಿಗದಿರುವುದು ಜಿಲ್ಲೆಯ ಜನತೆ ಆತಂಕ ಪಡುವಂತಾಗಿದೆ. ಸಮಾಜದಲ್ಲಿ ನಡೆಯುತ್ತಿರುವಂತಹ ಯಾವುದೇ ರೀತಿಯ ದೌರ್ಜನ್ಯ ಹಾಗೂ ಅತ್ಯಾಚಾರ ಪ್ರಕರಣಗಳನ್ನು ಸಿಪಿಐ(ಎಂ) ಬಲವಾಗಿ ಖಂಡಿಸುತ್ತದೆ ಎಂದು ಹೇಳಿದರು.

ಜಾಥವು ಶಿರೂರು ಮಾರ್ಗವಾಗಿ ಸಂಚರಿಸಿ ಬೈಂದೂರು, ಉಪ್ಪುಂದ, ಅರೆಹೊಳೆ ಕ್ರಾಸ್, ತ್ರಾಸಿ, ಹೆಮ್ಮಾಡಿ, ತಲ್ಲೂರು, ಮಾವಿನಕಟ್ಟೆ, ಕಂಡ್ಲೂರು, ಬಸ್ರೂರು, ಕೋಣಿಗಳಲ್ಲಿ ಸಂಚರಿಸಿತು. ಜಾಥಾದಲ್ಲಿ ಸಿಪಿಐ(ಎಂ) ಮುಖಂಡರಾದ ದಾಸ ಭಂಡಾರಿ, ಮಹಾಬಲ ವಡೇರಹೋಬಳಿ, ಸುರೇಶ್ ಕಲ್ಲಾಗರ, ವೆಂಕಟೇಶ ಹೆಮ್ಮಾಡಿ, ರಾಜು ದೇವಾಡಿಗ ಉಪಸ್ಥಿತರಿದ್ದರು.

ದಕ್ಷಿಣ ಕನ್ನಡ ಜಿಲ್ಲೆ:

ದೌರ್ಜನ್ಯ ವಿರೋಧಿ ಆಂದೋಲನವನ್ನು ಸಿಪಿಐ(ಎಂ) ದ.ಕ.ಜಿಲ್ಲಾ ಸಮಿತಿ ಪ್ರಮುಖ ಪಟ್ಟಣಗಳಲ್ಲಿ ಹಮ್ಮಿಕೊಂಡಿದ್ದು ಅದರಂತೆ ಆಗಸ್ಟ್ 19,20 ಮತ್ತು 21 ರಂದು ಪ್ರದರ್ಶನಗಳು ನಡೆದಿರುತ್ತವೆ.

ಆಗಸ್ಟ್ 19 ರಂದು ಮೂಡಬಿದ್ರೆ, ಬೆಳ್ತಂಗಡಿ ಮತ್ತು ಗುರುಪುರ ವಲಯ ಸಮಿತಿಗಳು ಪ್ರತಿಭಟನಾ ಪ್ರದರ್ಶನ ಏರ್ಪಡಿಸಿದ್ದರೆ, ಮಂಗಳೂರಿನಲ್ಲಿ ಆಗಸ್ಟ್ 20 ರಂದು, ಉಳ್ಳಾಲದ ತೊಕ್ಕೋಟಿನಲ್ಲಿ 21ರಂದು ಪ್ರತಿಭಟನಾ ಪ್ರದರ್ಶನಗಳು ನಡೆದವು.

ಮೂಡಬಿದ್ರೆಯಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರಾದ ಯಾದವ ಶೆಟ್ಟಿ, ರಮಣಿ, ಬೆಳ್ತಂಗಡಿಯಲ್ಲಿ ಬಿಜಿವಿಎಸ್ ರಾಜ್ಯ ಕಾರ್ಯದರ್ಶಿ ಎನ್.ಪ್ರಭಾ, ಪಕ್ಷದ ಜಿಲ್ಲಾ ಸಮಿತಿ ಸದಸ್ಯರಾದ ಬಿ.ಎಂ.ಭಟ್, ಶಿವ ಕುಮಾರ್, ಗುರುಪುರದಲ್ಲಿ ಯು.ಬಿ.ಲೋಕಯ್ಯ, ಸದಾಶಿವ ದಾಸ್ ಪ್ರತಿಭಟನೆಯನ್ನು ವಲಯ ಸಮಿತಿ ನೇತೃತ್ವದಲ್ಲಿ ಸಂಘಟಿಸಿದ್ದರು. ಮಂಗಳೂರಿನಲ್ಲಿ ಜಿಲ್ಲಾ ಸಮಿತಿಯ ಜೆ.ಬಾಲಕೃಷ್ಣ ಶೆಟ್ಟಿ, ವಸಂತ ಆಚಾರಿ, ಸುನಿಲ್ ಕುಮಾರ್ ಬಜಾಲ್, ಜಯಂತಿ ಶೆಟ್ಟಿ, ವಾಸುದೇವ ಉಚ್ಚಿಲ್, ಬಾಬು ದೇವಾಡಿಗ ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಯಾದವ ಶೆಟ್ಟಿ, ವಲಯ ಸಮಿತಿ ಸದಸ್ಯರು, ದಲಿತ ಹಕ್ಕುಗಳ ಸಮಿತಿ ಕಾರ್ಯಕರ್ತರು ಮತ್ತಿತರರು ಭಾಗವಹಿಸಿದ್ದರು.

ರತ್ನಾ ಸಾವು : ತನಿಖೆ ವಿಳಂಬ ವಿರುದ್ಧ ಬೈಂದೂರಿನಲ್ಲಿ ಡಿವೈಎಫ್‌ಐ, ಎಸ್‌ಎಫ್‌ಐ ಪ್ರತಿಭಟನೆ :

ಶಿರೂರು ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ರತ್ನಾ ಕೊಠಾರಿಯ ಸಂಶಯಾಸ್ಪದ ಸಾವಿನ ತನಿಖೆಯಲ್ಲಾಗುತ್ತಿರುವ ವಿಳಂಬವನ್ನು ವಿರೋಧಿಸಿ ಡಿವೈಎಫ್‌ಐ ಮತ್ತು ಎಸ್‌ಎಫ್‌ಐ ಸದಸ್ಯರು ಆಗಸ್ಟ್ 18 ರಂದು ಬೈಂದೂರು ಪೋಲೀಸ್ ಠಾಣೆಯೆದುರು ಪ್ರತಿಭಟನೆ ನಡೆಸಿದರು.

ವಿದ್ಯಾರ್ಥಿಯ ಸಾವು ಸಂಭವಿಸಿ ತಿಂಗಳು ಮೀರಿದ್ದರೂ ತನಿಖೆಯ ವಿವರಗಳು ಇನ್ನೂ ಬಹಿರಂಗವಾಗಿಲ್ಲ. ಅಲ್ಲದೆ ವಿದ್ಯಾರ್ಥಿನಿಯ ಕುಟುಂಬಕ್ಕೆ ನೀಡುವುದಾಗಿ ಪ್ರಕಟಿಸಿದ್ದ ಪರಿಹಾರ ಇನ್ನೂ ಬಿಡುಗಡೆಯಾಗಿರುವುದಿಲ್ಲ. ತನಿಖೆಯನ್ನು ಶೀಘ್ರಗೊಳಿಸಬೇಕು ಹಾಗೂ ಪರಿಹಾರ ತಕ್ಷಣ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಡಿವೈಎಫ್‌ಐ ಉಡುಪಿ ಉಪಾಧ್ಯಕ್ಷ ಸುರೇಶ್ ಕಲ್ಲಾಗರ ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಂಘಟನೆಗಳ ಕಾರ್ಯಕರ್ತರಾದ ರಾಜೇಶ ಮಠ, ಸಂತೋಷ್ ಕೋಣಿ ಸೇರಿದಂತೆ ನೂರಾರು ಮಂದಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಪ್ರತಿಭಟನೆಗೂ ಮೊದಲು ಬೈಂದೂರು ಪೇಟೆಯಲ್ಲಿ ಮೆರವಣಿಗೆ ನಡೆಸಲಾಯ್ತು. ●

ಭೂ ಸುಧಾರಣೆಯಿಂದ.....

ಪುಟ 11 ರಿಂದ

ಜೊತೆಗೆ ಮತ್ತಷ್ಟು ಬೆಲೆ ಏರಿಕೆ, ಉದ್ಯೋಗ ಖಾತರಿ ಯೋಜನೆಯ ನಾಶ, ಪಡಿತರ ಪದ್ಧತಿಯನ್ನು ಕುಗ್ಗಿಸುವುದು ಬಿಜೆಪಿ ಮತ್ತು ಮೋದಿಯ ಹುನ್ನಾರವಾಗಿದೆ. ರೈತರು, ಕೂಲಿಕಾರರನ್ನು ಗುಳೇ ಎಬ್ಬಿಸಿ ನಗರಗಳಲ್ಲಿ ಕೂಲಿಗಳಾಗಿ ದುಡಿಯಲು ಹೊರದಬ್ಬುವ ಉದ್ದೇಶ ಅವರಿಗಿದೆ ಎಂದು ಹೇಳಿದರು.

ಮಂಡ್ಯ ಜಿಲ್ಲೆಯ ಉಸ್ತುವಾರಿ ಮಂತ್ರಿ ಅಂಬರೀಶ್‌ರವರೂ ವಸತಿ ಸಚಿವರೂ ಆಗಿದ್ದಾರೆ. ಆದರೆ ಅವರು ಎರಡೂ ಹೊಣೆಯನ್ನು ನಿರ್ವಹಿಸದೆ ಬೇಜವಾಬ್ದಾರಿಯಿಂದ ವರ್ತಿಸುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಜನರು ಅವರ ಮೇಲೆ ಇಟ್ಟ ಅಭಿಮಾನಕ್ಕೆ ವ್ಯತಿರಿಕ್ತವಾಗಿ ವರ್ತಿಸುತ್ತಿದ್ದಾರೆ. ಮಂಡ್ಯ ಜಿಲ್ಲೆಯ ಕೃಷಿ ಕೂಲಿಕಾರರಿಗೆ ಉದ್ಯೋಗ ಖಾತರಿ ಮತ್ತು ವಸತಿ ಬಗ್ಗೆ ಒಂದು ದಿನವಾದರೂ ಅವರು ತಲೆಕೆಡಿಸಿಕೊಂಡಿಲ್ಲ. ಹೀಗೆ ಮುಂದುವರೆದರೆ ಅವರ ಮನೆಯ ಮುಂದೆಯೇ ಧರಣಿ ನಡೆಸಬೇಕಾಗುತ್ತದೆ ಎಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಉಪ್ಯಾಕ್ಷರಾದ ಜಿ.ಎನ್. ನಾಗರಾಜ್ ವಿವರಿಸಿದರು.

ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಬಹಿರಂಗಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಕೃಷಿ ಕೂಲಿಕಾರರಲ್ಲಿ ಮಹಿಳೆಯರೇ ದೊಡ್ಡ ಸಂಖ್ಯೆಯಲ್ಲಿದ್ದು ಇಂದು ದೇಶ ಮತ್ತು ರಾಜ್ಯದಲ್ಲಿ ನಡೆಯುತ್ತಿರುವ ಮಹಿಳೆಯರು ಮತ್ತು ಮಕ್ಕಳ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ಹಾಗೂ ಅತ್ಯಾಚಾರಗಳ ವಿರುದ್ಧ ಸಂಘವು ತೀವ್ರವಾದ ಹೋರಾಟಗಳನ್ನು ನಡೆಸಬೇಕು ಎಂದರು.

ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಜಿಲ್ಲಾಧ್ಯಕ್ಷರಾದ ಎಂ. ಪುಟ್ಟಮಾದು ವಹಿಸಿದ್ದರು. ವೇದಿಕೆಯಲ್ಲಿ ಸ್ವಾಗತ ಸಮಿತಿಯ ಗೌರವ ಅಧ್ಯಕ್ಷರಾದ ನಂಜುಂಡಸ್ವಾಮಿ, ಅಧ್ಯಕ್ಷರಾದ ಡಿ. ಶಿವಕುಮಾರ್, ಪುರಸಭಾ ಸದಸ್ಯರು, ಹೆಚ್. ಬಸವರಾಜ್, ಕೆ. ಬಸವರಾಜು, ಜಿಲ್ಲಾ ಕಾರ್ಯದರ್ಶಿ AIAWU, ಜಿ. ರಾಮಕೃಷ್ಣ, ಜಿಲ್ಲಾ ಕಾರ್ಯದರ್ಶಿ ಸಿ.ಐ.ಟಿ.ಯು, ದೇವಿ, ಜಿಲ್ಲಾಧ್ಯಕ್ಷರು ಜೆ.ಎಂ.ಎಸ್, ಟಿ.ಎಚ್. ಆನಂದ್, ಜಿಲ್ಲಾ ಮುಖಂಡರು ಕೆ.ಪಿ.ಆರ್.ಎಸ್, ಮದ್ದೂರು ಒಖಂಘಗ ತಾಲ್ಲೂಕು ಅಧ್ಯಕ್ಷರಾದ ಚಂದ್ರ ಎ.ಎಸ್. ಕಾರ್ಯದರ್ಶಿ ಹನುಮೇಶ್, ಮಳವಳ್ಳಿ ತಾಲ್ಲೂಕು ಅಧ್ಯಕ್ಷರು ಸರೋಜಮ್ಮ, ಕಾರ್ಯದರ್ಶಿ ಡಿ.ಸಿ. ಚೌಡೇಗೌಡ, ಮಂಡ್ಯ ತಾಲ್ಲೂಕ್ ಅಬ್ದುಲ್ಲಾ, ಶ್ರೀರಂಗಪಟ್ಟಣ ತಾಲ್ಲೂಕು ಶಂಕರಪ್ಪ, ನಾಗಮಂಗಲ ತಾಲ್ಲೂಕು ಶಾಂತಮ್ಮ, ಟಿ, ನರಸೀಪುರ ತಾಲ್ಲೂಕು ವೈಕೆ ಪ್ರದೀಪ್‌ಕುಮಾರ ಮುಂತಾದ ಹಲವಾರು ಮುಖಂಡರು ಉಪಸ್ಥಿತರಿದ್ದರು.

ಬಹಿರಂಗ ಸಭೆಯು ಮಹದೇವಮ್ಮ, ಆರ್. ಕೃಷ್ಣ ಹಾಗೂ ಇತರ ಸಂಗಾತಿಗಳ ಹೋರಾಟಗೀತೆಯೊಂದಿಗೆ ಪ್ರಾರಂಭವಾಯಿತು. ಬಹಿರಂಗ ಸಭೆಗೆ ಸ್ವಾಗತ ಸಮಿತಿಯ ಡಿ. ಶಿವಕುಮಾರ್‌ರವರು ಸ್ವಾಗತ ಕೋರಿದರು, ಈ ಸಭೆಯ ನಿರೂಪಣೆಯನ್ನು ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಪುಟ್ಟಮಾದೇಗೌಡರವರು ಮಾಡಿದರು. ಅಂತಿಮವಾಗಿ ಸ್ವಾಗತ ಸಮಿತಿಯ ಖಜಾಂಚಿ ಕೆ.ಹನುಮೇಗೌಡರವರು ಸಭೆಗೆ ವಂದನೆಗಳನ್ನು ತಿಳಿಸುವ ಮೂಲಕ ಬಹಿರಂಗ ಸಭೆ ಮುಕ್ತಾಯವಾಯಿತು.

ಜುಲೈ 19–20, 2ದಿನ ಮಳವಳ್ಳಿ ಪಕ್ಕದ ಬುಗತಗಹಳ್ಳಿಯ ಶ್ರೀ ಮದನ ಮೋಹನ ಕಲ್ಯಾಣ ಮಂಟಪದಲ್ಲಿ ಪ್ರತಿನಿಧಿ ಅಧಿವೇಶನವನ್ನು ನಡೆಸಲಾಯಿತು. ಜುಲೈ 19ರ ಸಂಜೆ 4:30ಕ್ಕೆ ಸಂಘಟನೆಯ ಜಿಲ್ಲಾಧ್ಯಕ್ಷರಾದ ಎಂ. ಪುಟ್ಟಮಾದು ಧ್ವಜಾರೋಹಣ ಮಾಡುವ ಮೂಲಕ ಸಮ್ಮೇಳನಕ್ಕೆ ಚಾಲನೆ ನೀಡಿದರು. ಹುತಾತ್ಮ ಸ್ಥಂಭಕ್ಕೆ ಪುಷ್ಪ ನಮನ ಸಲ್ಲಿಸುವ ಮೂಲಕ ಹುತಾತ್ಮ ಸಂಗಾತಿಗಳಿಗೆ ಗೌರವ ವಂದನೆ ಸಲ್ಲಿಸಲಾಯಿತು. ನಂತರ ಸಮ್ಮೇಳನವನ್ನು ಸುಸೂತ್ರವಾಗಿ ನಡೆಸಲು ವಿವಿಧ ಸಮಿತಿಗಳನ್ನು ಆಯ್ಕೆ ಮಾಡಲಾಯಿತು. ಸಂಘಟನೆಗಾಗಿ ದುಡಿದು ಮರಣ ಹೊಂದಿದ ಸಂಗಾತಿಗಳಿಗೆ ಪ್ರತಿನಿಧಿಗಳು ಒಂದು ನಿಮಿಷ ಮೌನ ಆಚರಿಸುವುದರ ಮೂಲಕ ಗೌರವ ಸಲ್ಲಿಸಿದರು. ಜಿಲ್ಲಾ ಸಮ್ಮೇಳನದ ಪ್ರತಿನಿಧಿ ಅಧಿವೇಶನವನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಅಧ್ಯಕ್ಷರಾದ ನಿತ್ಯಾನಂದಸ್ವಾಮಿಯವರು ಉದ್ಘಾಟಿಸಿ ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಹಾಗೂ ಕೃಷಿ ರಂಗದಲ್ಲಿ ಆಗುತ್ತಿರುವ ಬದಲಾವಣೆಗಳ ಹಿನ್ನೆಲೆಯಲ್ಲಿ ಹೆಚ್ಚುತ್ತಿರುವ ಸಂಘದ ಹೊಣೆಗಾರಿಕೆಯನ್ನು ವಿವರಿಸಿದರು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಬಸವರಾಜ್ ಸಂಘದ ಮೂರು ವರ್ಷದ ವರದಿ ಮಂಡಿಸಿದರು. ಕಾರ್ಯದರ್ಶಿಗಳ ವರದಿ ಮೇಲೆ 19 ಪ್ರತಿನಿಧಿಗಳು ಚರ್ಚಿಸಿದರು. ಚರ್ಚೆಯ ನಂತರ ವರದಿಯನ್ನು ಸಮ್ಮೇಳನ ಅಂಗೀಕರಿಸಿತು. ಜಿಲ್ಲೆಯ ಕೃಷಿ ಕೂಲಿಕಾರರ ವಿವಿಧ ಪ್ರಶ್ನೆಗಳಿಗೆ ಸಂಬಂಧಿಸಿದ ನಿರ್ಣಯಗಳನ್ನು ಚರ್ಚಿಸಿ ಅಂಗೀಕರಿಸಲಾಯಿತು.

ನೂತನ ಮಂಡ್ಯ ಜಿಲ್ಲಾ ಸಮಿತಿ ರಚನೆ :

ಸಮ್ಮೇಳನದಲ್ಲಿ 37 ಜನರ ನೂತನ ಜಿಲ್ಲಾ ಸಮಿತಿ ಆಯ್ಕೆಗೊಂಡಿದ್ದು ಅಧ್ಯಕ್ಷರಾಗಿ ಎಂ. ಪುಟ್ಟಮಾದು, ಪ್ರಧಾನ ಕಾರ್ಯದರ್ಶಿಯಾಗಿ ಕೆ. ಬಸವರಾಜು, ಉಪಾಧ್ಯಕ್ಷರುಗಳಾಗಿ ನಂಜುಂಡಸ್ವಾಮಿ, ಎನ್.ಸುರೇಂದ್ರ, ಬಿ.ಎಂ. ಶಿವಮಲ್ಲಯ್ಯ, ಸರೋಜಮ್ಮ, ಎ.ಎಸ್. ಚಂದ್ರು, ಕೆ. ಹನುಮೇಗೌಡ, ಅಬ್ದುಲ್ಲಾ, ಸಹ ಕಾರ್ಯದರ್ಶಿಗಳಾಗಿ ಕೆ.ಹೆಚ್. ಪುಟ್ಟಮಾದೇಗೌಡ, ಬಿ. ಹನುಮೇಶ್, ಆರ್. ಕೃಷ್ಣ, ಶಾಂತಮ್ಮ, ವೈ.ಕೆ. ಪ್ರದೀಪ್ ಕುಮಾರ್, ಶಂಕರಪ್ಪ ಅವರನ್ನು ಆಯ್ಕೆ ಮಾಡಲಾಯಿತು.

ಜುಲೈ 20 ರಂದು ಸಂಜೆ 03 ಗಂಟೆಗೆ ಸಮಾರೋಪ ಭಾಷಣವನ್ನು ಮಾಡಿದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಪ್ಪ ಹೊಸ್ಕೇರಾರವರು ಮಂಡ್ಯ ಜಿಲ್ಲೆಯಲ್ಲಿ ಸುಮಾರು 4 ಲಕ್ಷಕ್ಕೂ ಹೆಚ್ಚು ಕೃಷಿ ಕೂಲಿಕಾರರಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮಳೆಯ ಅಭಾವದಿಂದ ಜಿಲ್ಲೆ ಬರಗಾಲಕ್ಕೆ ತುತ್ತಾಗಿದ್ದು ಕೃಷಿ ಕ್ಷೇತ್ರ ಕಳೆಗುಂದುತ್ತಿದೆ. ಇದರಿಂದಾಗಿ ಜಿಲ್ಲೆಯ ಸಣ್ಣ ಮತ್ತು ಮಧ್ಯಮ ರೈತರು ತಮ್ಮ ಆರೋಗ್ಯ, ಕುಟುಂಬ ನಿರ್ವಹಣೆ, ಮಕ್ಕಳ ಶಿಕ್ಷಣ, ಮದುವೆ ಮುಂತಾದ ಖರ್ಚುಗಳಿಗಾಗಿ ಭೂಮಿಯನ್ನು ಮಾರಾಟ ಮಾಡಿ ಕೃಷಿ ಕೂಲಿಕಾರರಾಗಿ ಬದಲಾಗುತ್ತಿದ್ದು ಕೃಷಿ ಕೂಲಿಕಾರರ ಸಂಖ್ಯೆ ಜಿಲ್ಲೆಯಲ್ಲಿ ದ್ವಿಗುಣಗೊಳ್ಳುತ್ತಿದೆ ಎಂದು ತಿಳಿಸಿದರು. ಈ ಪರಿಸ್ಥಿತಿಯಲ್ಲಿ ಸಂಘಟನೆಯನ್ನು ವಿಸ್ತರಿಸಿ ಬಲಪಡಿಸಬೇಕೆಂದು ಕರೆ ನೀಡಿದರು. ●

ಅಮೆರಿಕದ ವರ್ಣಬೇಧ

ಪುಟ 16 ರಿಂದ

ವಾಸಿಸುತ್ತಿದ್ದಾರೆ.

ಕರಿಯರ ಸ್ಥಿತಿಯನ್ನು ಫರ್ಗ್ಯೂಸನ್ ದಂಗೆಯ ನಂತರ ಬಂದ ಒಂದು ಕಾರ್ಟೂನು ಮಾರ್ಮಿಕವಾಗಿ ನಿರೂಪಿಸುತ್ತದೆ. ಟೀಚರ್ ಕೇಳುತ್ತಾಳೆ "ನೀವು ದೊಡ್ಡದಾದ ಮೇಲೆ ಏನಾಗ ಬಯಸುತ್ತೀರ?'. ಒಬ್ಬ ಕರಿಯ ವಿದ್ಯಾರ್ಥಿಯ ಉತ್ತರ "ಜೀವಂತ ಇರಬಯಸುತ್ತೇವೆ".



ಬ್ರೌನ್ ಕೊಲೆ ಪ್ರಕರಣ ಮತ್ತು ಫರ್ಗ್ಯೂಸನ್ ದಂಗೆಗಳು ಅಮೆರಿಕದ ಬಡವರ ಆಕ್ರೋಶ, ಕೋಪವನ್ನೂ, ಮುಂದುವರೆಯುತ್ತಿರುವ ವರ್ಣಬೇಧ ವ್ಯವಸ್ಥೆ ಮತ್ತು ಕರಿಯರ ಬಡವರ ಮಾನವ ಹಕ್ಕುಗಳ ಕೊರತೆಯನ್ನು ಮತ್ತೊಮ್ಮೆ ಬಯಲು ಮಾಡಿದೆ. ಅಮೆರಿಕ ಬೂದಿ ಮುಚ್ಚಿದ ಕೆಂಡ ಇರುವ ದೇಶ, ಉರಿಯುತ್ತಿರುವ ಕೆಂಡ ಯಾವಾಗ ಬೇಕಾದರೂ ಸ್ಫೋಟಗೊಳ್ಳಬಹುದೆಂದು ತೋರಿಸಿದೆ. ●

JANASHAKTHI KANNADA VARA PATRIKE SEPT 7, 2014 Price : Rs. 10/- RNI No. KARKAN /2006/17926 Posted on every Satuarday
"REGISTERD" Postal Reg. No. RNP/KA/BGS/2078/2013-15 Posted at MBC Bangalore GPO Licensed to Post without prepayment License No. WPP-283

ಜಗದಗಲ

ಶರತ್‌ಚಂದ್ರ






ಫರ್ಗ್ಯೂಸನ್ ದಂಗೆ

ಅಮೆರಿಕದ ವರ್ಣಬೇಧ ಮತ್ತೊಮ್ಮೆ ಬಯಲು

ಎರಡು ವಾರಗಳಿಂದ ಅಮೆರಿಕದ ಮಿಸೂರಿ ರಾಜ್ಯದಕೇವಲ 20 ಸಾವಿರ ಜನಸಂಖ್ಯೆ ಇರುವ ಫರ್ಗ್ಯೂಸನ್ ಎಂಬ ಚಿಕ್ಕಪಟ್ಟಣ ಹತ್ತಿ ಉರಿಯುತ್ತಿದೆ– ನಗರ ಆಡಳಿತದ ವಿರುದ್ಧ ಜನತೆಯ ಪ್ರತಿಭಟನೆ, ಆಕ್ರೋಶ, ಉದ್ವೇಗಗಳಿಂದ. ಇದಕ್ಕೆ ಕಾರಣವಾದ ಕಿಡಿ ಮೈಕೆಲ್ ಬ್ರೌನ್ ಎಂಬ ಒಬ್ಬ 18 ವರ್ಷದ ಕರಿಯ ಯುವಕನನ್ನು ಪೋಲಿಸ್ ಗುಂಡಿಟ್ಟು ಕೊಂದಿದ್ದು. ಕೊಲೆ ನಡೆದ ಕಾರಣ ವಿವಾದಾಸ್ಪದವಾಗಿದೆ. ಯುವಕ ಗೆಳೆಯ ನೊಬ್ಬನೊಂದಿಗೆ ರಸ್ತೆ ಮಧ್ಯೆ ನಡೆದು ಹೋಗುತ್ತಿದ್ದಾಗ ಪೋಲಿಸ್ ಅಧಿಕಾರಿ ತಡೆದು ನಿಲ್ಲಿಸಿ, ಆಜ್ಞೆ ಮಾಡಿದಂತೆ 'ಹ್ಯಾಂಡ್ಸ್‌ಅಪ್' ಭಂಗಿಯಲ್ಲೇಇದ್ದಾಗಲೇ ಹಲವು ಬಾರಿ ಗುಂಡು ಹೊಡೆದು ಬ್ರೌನ್ ಸತ್ತಿದ್ದಾನೆ ಎಂದು ಆತನ ಗೆಳೆಯ ಹೇಳಿದ್ದಾನೆ. ಹಲವು ಗಂಟೆಗಳ ಕಾಲ ಬ್ರೌನ್ ಶವ ರಸ್ತೆಯಲ್ಲೇ ಬಿದ್ದಿತ್ತು. ಪೋಲಿಸ್ ಮೇಲೆ ದಾಳಿ ಮಾಡಿದ್ದರಿಂದ ಗುಂಡು ಹಾರಿಸಬೇಕಾಯಿತು ಎಂಬುದು ಪೋಲಿಸ್ ಅಂಬೋಣ. ಆದರೆ ಅಧ್ಯಕ್ಷ ಒಬಾಮ ಇದನ್ನು 'ಎದೆ ಬಿರಿಯುವ' ಮತ್ತು "ಅಮೆರಿಕದ ನಗರಗಳು ಮತ್ತು ಉಪನಗರಗಳನ್ನು ಇನ್ನೂ ಬಾಧಿಸುತ್ತಿರುವ ವಿಷಪೂರಿತ ಜನಾಂಗೀಯ ಪರಂಪರೆಯ ಕಹಿ ನೆನಪು ತರುವ"ಘಟನೆ ಎಂದಿದ್ದಾರೆ.

ಘಟನೆ ಸ್ವಾಭಾವಿಕವಾಗಿಯೇ ಭಾರಿ ಪ್ರತಿಭಟನೆಗೆ ಎಡೆ ಮಾಡಿತು. ಪೋಲಿಸರು ಘಟನೆಗೆ ಸ್ಪಂದಿಸಿದ ಅಥವಾ ಸ್ಪಂದಿಸದೆ ಹೋದರೀತಿ ಹಾಗೂ ಪ್ರತಿಭಟನೆಯನ್ನು ಹತ್ತಿಕ್ಕಲು ಮಾಡಿದ ದಮನ ಕ್ರಮಗಳಿಂದ ಜನರೊಚ್ಚಿ ಪರಿಸ್ಥಿತಿ ಇನ್ನಷ್ಟು ವಿಕೋಪಕ್ಕೆ ಹೋಯಿತು. ದಂಗೆಗಳೇ ನಡೆದವು. ಪೋಲಿಸರು ಉದ್ರಿಕ್ತ ಜನರಿಂದ ಬಾಟಲುಗಳ ಮೊಲೊಟೊವ್ ಕಾಕ್ ಟೈಲುಗಳ ದಾಳಿ ಎದುರಿಸಬೇಕಾಯಿತು. ಪೋಲಿಸರು ಸ್ಥಳದಲ್ಲಿದ್ದ ಅಧಿಕಾರಿಯ ತಪ್ಪು ಒಪ್ಪಿಕೊಳ್ಳಲು, ಬಂಧಿಸಲು ಅಥವಾ ಕನಿಷ್ಟ ಅಧಿಕಾರಿಯನ್ನು ವಿಚಾರಣೆ ಆಗುವ ವರೆಗೆ ಅಮಾನತಿನಲ್ಲಿ ಇಡಲೂ ತಯಾರಿರಲಿಲ್ಲ. ಇಡೀ ಪಟ್ಟಣಕ್ಕೆ ಅಧಿಕಾರಿ ಯಾರು ಎಂದು ಗೊತ್ತಿದ್ದರೂ, ಅಧಿಕಾರಿಯನ್ನು ಹೆಸರಿಸಲೂ ಪೋಲಿಸ್ ತಯಾರಿರಲಿಲ್ಲ.

ಫರ್ಗ್ಯೂಸನ್‌ನಲ್ಲಿ ಪೋಲಿಸ್ ದಮನದ ವಿರುದ್ಧ ಕಮ್ಯುನಿಸ್ಟ್ ಪಕ್ಷ ಸಾವಿರಾರು ಸಂಖ್ಯೆಯಲ್ಲಿ ಕೈ ಎತ್ತಿ 'ನಾವು ಹ್ಯಾಂಡ್ಸ್‌ಅಪ್ ಮಾಡಿದ್ದೇವೆ, ನಮ್ಮನ್ನು ಶೂಟ್ ಮಾಡಬೇಡಿ' ಎಂದು ಕೂಗುವ ವಿಶಿಷ್ಟ ಆಂದೋಲನ ನಡೆಸಿತು.



ಸಾಲದ್ದಕ್ಕೆ ಬ್ರೌನ್ ಒಂದು ಅಂಗಡಿಯಲ್ಲಿ ಕಳವಿನ ಅಪರಾಧದಲ್ಲಿ ಶಂಕಿತ ವ್ಯಕ್ತಿ ಎಂದು ಬೇರೆ ಪೋಲಿಸ್ ಹೇಳಿಕೆ ನೀಡಿದ್ದು ಇನ್ನಷ್ಟು ಆಕ್ರೋಶಕ್ಕೆ ಕಾರಣವಾಯಿತು. ಆದರೆ ಪೋಲಿಸ್ ಬಿಡುಗಡೆ ಮಾಡಿದ ವಿಡಿಯೋದಲ್ಲಿ ಇರುವ ವ್ಯಕ್ತಿ ಬ್ರೌನ್ ಎಂದು ಗುರುತಿಸಲು ಆಗುತ್ತಿರಲಿಲ್ಲ. ಮಾತ್ರವಲ್ಲ, ಬ್ರೌನ್ ಶಂಕಿತ ವ್ಯಕ್ತಿ ಎಂದು ಅಧಿಕಾರಿಗೆ ಗೊತ್ತಿತ್ತೇ ಮತ್ತು ರಸ್ತೆ ಮಧ್ಯದಲ್ಲಿ ಆತನನ್ನು ಯಾಕೆ ಬಂಧಿಸಲು ಪ್ರಯತ್ನಿಸಬೇಕು ಎಂಬ ಜನರ ಪ್ರಶ್ನೆಗೆ ಉತ್ತರವಿರಲಿಲ್ಲ. ದಂಗೆಗಳು ತಾರಕಕ್ಕೆ ಏರಿದಾಗ ಆರೋಪಿ ಪೋಲಿಸ್ ಅಧಿಕಾರಿ ಡಾರೆನ್ ವಿಲ್ಸನ್ ಎಂದು ಘೋಷಿಸಿ, ಆತನನ್ನು ಅಮಾನತ್ತಿನಲ್ಲಿ ಇಟ್ಟಿದ್ದಾರೆ. ಆತನ ವಿರುದ್ಧ ವಿಚಾರಣೆಗೆ ಆಜ್ಞೆ ಮಾಡಲಾಗಿದೆ. ವಿಚಾರಣೆ ಅಕ್ಟೋಬರಿನ ವರೆಗೆ ಹೋಗಲಿದ್ದು, ಅಲ್ಲಿಯ ವರೆಗಂತೂ ಆರೋಪಿ ಅಧಿಕಾರಿ ವಿಲ್ಸನ್ ಸ್ವತಂತ್ರವಾಗಿ ಇರುತ್ತಾನೆ. ವಿಚಾರಣೆಗೆ ನೇಮಿಸಿರುವ ಪ್ರೊಸಿಕ್ಯುಟರ್ ಪಟ್ಟಣದ ಪೋಲಿಸ್ ವ್ಯವಸ್ಥೆಗೆ ತೀರಾ ಹತ್ತಿರವಿರುವ ವ್ಯಕ್ತಿ. ಆತನನ್ನು ಬದಲಾಯಿಸಬೇಕೆಂಬ ಕೂಗನ್ನು ನಿರ್ಲಕ್ಷಿಸಲಾಗಿದೆ. ಅಮೆರಿಕದಾದ್ಯಂತ ಫರ್ಗ್ಯೂಸನ್‌ನಲ್ಲಿ ಪೋಲಿಸ್ ದಮನದ ವಿರುದ್ಧ ಆಕ್ರೋಶ ವ್ಯಕ್ತವಾಗಿದೆ. ಕಮ್ಯುನಿಸ್ಟ್ ಪಕ್ಷ ಸಾವಿರಾರು ಸಂಖ್ಯೆಯಲ್ಲಿ ಕೈ ಎತ್ತಿ 'ನಾವು ಹ್ಯಾಂಡ್ಸ್‌ಅಪ್ ಮಾಡಿದ್ದೇವೆ, ನಮ್ಮನ್ನು ಶೂಟ್ ಮಾಡಬೇಡಿ' ಎಂದು ಕೂಗುವ ವಿಶಿಷ್ಟ ಆಂದೋಲನ ನಡೆಸಿತು.

ಬ್ರೌನ್ ಕೊಲೆ ಪ್ರಕರಣ ನಗರಗಳ ಬಡವರ ಆಕ್ರೋಶ, ಕೋಪವನ್ನೂ, ಮುಂದುವರೆಯುತ್ತಿರುವ ವರ್ಣಬೇಧ ವ್ಯವಸ್ಥೆ ಮತ್ತು ಕರಿಯರ ಬಡವರ ಮಾನವ ಹಕ್ಕುಗಳ ಕೊರತೆಯನ್ನು ಮತ್ತೊಮ್ಮೆ ಬಯಲು ಮಾಡಿದೆ. ಬ್ರೌನ್ ಬಿಳಿಯ ಪೋಲಿಸ್ ಅಧಿಕಾರಿಯಿಂದ ವಿನಾ ಕಾರಣ ಇದೇ ರೀತಿಯಲ್ಲಿ ಕೊಲೆಯಾದ ಕರಿಯ ಯುವಕರ ದೊಡ್ಡ ಸಾಲನ್ನು ಸೇರಿದ್ದಾನೆ. 1991ರಲ್ಲಿ ಲಾಸ್ ಏಂಜೇಲಿಸ್‌ನ ರೊಡ್ನಿಕಿಂಗ್, 2012ರಲ್ಲಿ ಫ್ಲೋರಿಡಾದ ಟ್ರಾವ್ಯೋನ್ ಮಾರ್ಟಿನ್ ಇಂತಹ ಇತ್ತೀಚಿನ ಪ್ರಮುಖ ಪ್ರಕರಣಗಳು. ಇವೆರಡೂ ಮತ್ತು ಭಾರೀ ದಂಗೆಗಳಿಗೆ ಕಾರಣವಾದ ಇಂತಹ ಭೀಕರ ಪ್ರಕರಣಗಳಲ್ಲಿ ಈ ವರೆಗೆ ಯಾವುದೇ ಪ್ರಕರಣದಲ್ಲಿ ಬಿಳಿಯ ಪೋಲಿಸ್ ಅಧಿಕಾರಿಗಳಿಗೆ ಯಾವುದೇ ಶಿಕ್ಷೆಯಾಗಿಲ್ಲ. ಇದು ಇನ್ನಷ್ಟು ಕರಿಯರ ಆಕ್ರೋಶಕ್ಕೆ ಕಾರಣವಾಗಿದೆ.

ಮಾರ್ಟಿನ್ ಲೂಥರ್ ಕಿಂಗ್ ಅವರ ಕರಿಯರ ನಾಗರಿಕ ಹಕ್ಕುಗಳ ಪ್ರಸಿದ್ಧ ಚಳುವಳಿಯ ನಂತರ ಸಹ ಈ ಪರಿಸ್ಥಿತಿ ಇದೆ ಎಂಬುದನ್ನು, ಆ ಚಳುವಳಿಯ ಸುವರ್ಣಉತ್ಸವದಲ್ಲಿ ಅಧ್ಯಕ್ಷ ಒಬಾಮ ಮಾಡಿದ ಭಾಷಣದಲ್ಲಿ ಒಪ್ಪಿಕೊಂಡಿದ್ದಾರೆ. ಬಿಳಿಯ–ಕರಿಯರ ನಡುವೆ ಆರ್ಥಿಕ ಕಂದಕ ಇನ್ನಷ್ಟು ಹೆಚ್ಚಾಗಿದೆ. ನಾಗರಿಕ ಹಕ್ಕುಗಳ ಪ್ರಸಿದ್ಧ ಚಳುವಳಿ ನಡೆದದ್ದು ಕೆಲವು ಕರಿಯರು ಕೋಟ್ಯಾಧೀಶರು ಆಗಬೇಕೆಂದಲ್ಲ. ಎಲ್ಲಾ ಕರಿಯರಿಗೆ ಕನಿಷ್ಟ ಉತ್ತಮ ಜೀವನಕ್ಕೆ ಅವಕಾಶ ಸಿಗುವ ಗುರಿಇನ್ನೂ ಬಹಳ ದೂರವಿದೆ ಎಂದು ಒಬಾಮ ಆ ಭಾಷಣದಲ್ಲಿ ಒಪ್ಪಿಕೊಂಡಿದ್ದರು.

ಆಕ್ರೋಶದ ಇಂತಹ ಸ್ಫೋಟಕ್ಕೆ ಕಾರಣ ಏನು? ಅಮೆರಿಕ ಭಾರೀ ಆರ್ಥಿಕ ಬೆಳವಣಿಗೆಯ ಬಗ್ಗೆ ಕೊಚ್ಚಿ ಕೊಳ್ಳುತ್ತಿದ್ದರೂ, ಬಡವರಿಗೆ ಮತ್ತು ಕರಿಯರಿಗೆ ಇದು ತಲುಪುತ್ತಿಲ್ಲ ಎಂಬುದು ಸ್ಪಷ್ಟ. ಕರಿಯರು ಬಹುಸಂಖ್ಯಾತರಿರುವ ಫರ್ಗ್ಯೂಸನ್ ಪಟ್ಟಣದಲ್ಲಿ ಏಳು ನಗರ ಮಂಡಳಿ ಸದಸ್ಯರಲ್ಲಿ ಆರುಜನ ಮತ್ತು ಮೇಯರ್ ಬಿಳಿಯರು. 50 ಪೋಲಿಸ್ ಅಧಿಕಾರಿಗಳಲ್ಲಿ ಮೂವರು ಮಾತ್ರ ಕರಿಯರು. ಶೇ.74 ಕರಿಯ ವಿದ್ಯಾರ್ಥಿಗಳಿರುವ ಸ್ಕೂಲ್ ಬೋರ್ಡಿನಲ್ಲಿ ಏಳು ಸದಸ್ಯರಲ್ಲಿ ಆರು ಜನ ಬಿಳಿಯರು. ಬಿಳಿಯ–ಕರಿಯ ಪ್ರತ್ಯೇಕತೆ ಅತ್ಯಂತ ಹೆಚ್ಚು ಇರುವ ಪಟ್ಟಣ ಇದು. ಪಟ್ಟಣದ ನಿರುದ್ಯೋಗಿಗಳ ಪ್ರಮಾಣ 2000ದಲ್ಲಿ ಶೇ. 5 ರಿಂದ 2012ರಲ್ಲಿ ಶೇ. 13ಕ್ಕೆ ಏರಿದೆ. ಈ ಪಟ್ಟಣದಲ್ಲಿ ಕರಿಯರು ಬಡವರು ಸಬ್ ಪ್ರೈಮ್ ಹಗರಣದಲ್ಲಿ ಮನೆಗಳನ್ನು ಕಳೆದುಕೊಂಡಿದ್ದಾರೆ. ಈ ಅವಧಿಯಲ್ಲಿ ಮನೆ ಇಲ್ಲದವರ ಸಂಖ್ಯೆ ಎರಡುವರೆ ಪಟ್ಟು ಆಗಿದೆ. ಬಡತನ ಇಮ್ಮಡಿ ಆಗಿದೆ. ಶೇ. 25 ಜನ ಬಡತನದ ಕೆಳಗೆ ವಾಸಿಸುತ್ತಿದ್ದಾರೆ. ಟ್ರಾಫಿಕ್ ಪೋಲಿಸರು ನಿಲ್ಲಿಸುವವರಲ್ಲಿ ಶೇ. 86 ಕರಿಯರು. ಅವರಲ್ಲಿ ಶೇ. 93 ಜನರನ್ನು ಬಂಧಿಸಲಾಗುತ್ತದೆ. ಈ ಪ್ರದೇಶದಲ್ಲಿ ಮುಚ್ಚಿರುವ ಕಾರು ಕಂಪನಿಗಳೂ ಮಧ್ಯಮ ವರ್ಗದ ಕರಿಯರನ್ನೂ ನಿರುದ್ಯೋಗಿಗಳ ಸೈನ್ಯಕ್ಕೆ ಸೇರಿಸಿದೆ.

ಸರಿ ಸುಮಾರುಇದೇ ಸ್ಥಿತಿ ಅಮೆರಿಕದ ಬಡವರದ್ದು ಕರಿಯರದ್ದು ಎಲ್ಲಾ ಪಟ್ಟಣಗಳಲ್ಲಿ.. 2000–2012ರ ಅವಧಿಯಲ್ಲಿ 100 ಮಹಾನಗರ ಪ್ರದೇಶಗಳಲ್ಲಿ ಶೇ.20ಕ್ಕಿಂತ ಹೆಚ್ಚು ಬಡವರು ವಾಸಿಸುವ ಕಾಲೋನಿಗಳು ಇಮ್ಮಡಿಯಾಗಿವೆ. ಈಗಾಗಲೇ ಬಡ ಕಾಲೋನಿಗಳು ಇನ್ನಷ್ಟು ಬಡವಾಗಿವೆ. 2012ರ ಹೊತ್ತಿಗೆ ಶೇ.38ರಷ್ಟು ಬಡವರು ಶೇ.20ಕ್ಕಿಂತ ಹೆಚ್ಚು ಬಡವರಿರುವ ಕಾಲೋನಿಗಳಲ್ಲಿ ವಾಸಿಸುತ್ತಿದ್ದಾರೆ. ಈ ಪ್ರಮಾಣ ಬಡ ಕರಿಯರಿಗೆ ಇನ್ನಷ್ಟು ಹೆಚ್ಚು. 2012ರ ಹೊತ್ತಿಗೆ ಶೇ.53ರಷ್ಟು ಬಡವರು ಶೇ.20ಕ್ಕಿಂತ ಹೆಚ್ಚು ಬಡವರಿರುವ ಕಾಲೋನಿಗಳಲ್ಲಿ

ಪುಟ 15 ಕ್ಕೆ

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **NITHYANANDASWAMI** EMS Bhavana, No.37/A, 8th Cross, Mahalakshmi Layout, BANGALORE-560086 Editor : **NITHYANANDASWAMI**